ಸಂಪುಟ: 05 ಸಂಚಿಕೆ: 44 ಪುಟಗಳು: 08 ಸೋಮವಾರ 28 ಏಪ್ರಿಲ್ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

**ಮುಂಜಾನೆ ಮಾತು**
ಹೃದಯದಿಂದ ಕೆಲಸ ಮಾಡಲು ಸಾಧ್ಯವಾಗದವರು ಕೇವಲ ಟೊಳ್ಳಾದ, ಅರೆಮನಸ್ಸಿನ ಯಶಸ್ಸನ್ನು ಸಾಧಿಸುತ್ತಾರೆ, ಅದು ಸುತ್ತಲೂ ಕಹಿಯನ್ನು ಉಂಟುಮಾಡುತ್ತದೆ.


# ಉದಯ ವಾಹಿನಿ
ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ


## ಶಾಸಕನಿಂದ 24 ಕೋಟಿ ರೂ. ಸಾಲ ಪಡೆದಿದ್ದ ಐಶ್ವರ್ಯ

• ಉದಯವಾಹಿನಿ, ಬೆಂಗಳೂರು

ಶಾಸಕ ವಿನಯ್ ಕುಲಕರ್ಣಿ ಹಾಗೂ ವಂಚನೆ ಪ್ರಕರಣದ ಆರೋಪಿ ಐಶ್ವರ್ಯ ಗೌಡ ಅವರ ಹಣಕಾಸು ವ್ಯವಹಾರದ ರಹಸ್ಯ ಇ ಡಿ ತನಿಖೆಯಲ್ಲಿ ಬಯಲಾಗಿದ್ದು, ಇಬ್ಬರೂ ಕೋಟ್ಯಂತರ ರೂ. ವ್ಯವಹಾರ ನಡೆಸಿರುವುದು ಪತ್ತೆಯಾಗಿದೆ. ಅಕ್ರಮ ಹಣಕಾಸು ವ್ಯವಹಾರದ ಸಂಬಂಧ ಇ.ಡಿ ಅಧಿಕಾರಿಗಳು ಐಶ್ವರ್ಯ ಗೌಡ ಅವರನ್ನು ಬಂಧಿಸಿ ವಿಚಾರಣೆ ನಡೆಸಿದ್ದು, ಜಿ.ಪಂ. ಸದಸ್ಯ ಯೋಗೇಶ್ ಗೌಡ ಹತ್ಯೆ ಪ್ರಕರಣದಲ್ಲಿ ಐಶ್ವರ್ಯ ಗೌಡ ಅವರು ವಿನಯ್ ಕುಲಕರ್ಣಿಯನ್ನು ಕಾನೂನು ಕುಣಿಕೆಯಿಂದ ಪಾರು ಮಾಡಲು ನೆರವಾಗಿರುವ ಸ್ಫೋಟಕ ಸಂಗತಿ ಬೆಳಕಿಗೆ ಬಂದಿದೆ.

**ಸಾಕ್ಷಿಯನ್ನು ಟ್ರ್ಯಾಪ್ ಮಾಡಿ:** ವಿನಯ್ ಕುಲಕರ್ಣಿಯಿಂದ 24 ಕೋಟಿ ರೂ. ಸಾಲ ಪಡೆದಿದ್ದ ಐಶ್ವರ್ಯ ಗೌಡ, ದಿನಕ್ಕೆ ಶೇ.1ರಂತೆ ಪ್ರತಿನಿತ್ಯ 24 ಲಕ್ಷ ರೂ.



ಬಡ್ಡಿ ಕೊಡಲು ಒಪ್ಪಿದ್ದರು. ನಂತರ ಅಸಲು, ಬಡ್ಡಿ ಕೊಡದೆ ಸಮಯ ಕೇಳಿಕೊಂಡಿದ್ದರು. ಆಗ ವಿನಯ್ ಕುಲಕರ್ಣಿ, ಐಶ್ವರ್ಯ ಗೌಡ ಜತೆ ಮಾತುಕತೆ ನಡೆಸಿ ಒಪ್ಪಂದ ಮಾಡಿಕೊಂಡಿದ್ದರು. ಸ್ನೇಹಿತನ ಹೆಸರಿನಲ್ಲಿ 24 ಕೋಟಿ ರೂ. ಕೈಸಾಲ ಪಡೆದಿದ್ದಾಗಿ ಕರಾರುಪತ್ರ ಮತ್ತು ಯೋಗೇಶ್ ಗೌಡ ಕೊಲೆ ಪ್ರಕರಣದ ಮಾಫಿ ಸಾಕ್ಷಿ ಬಸವರಾಜ್ ಮುತ್ತಗಿಯನ್ನು ಟ್ರ್ಯಾಪ್ ಮಾಡುವಂತೆ ವಿನಯ್ ಕುಲಕರ್ಣಿ ಸೂಚಿಸಿದ್ದರು. ಈ ಒಪ್ಪಂದಕ್ಕೆ ಐಶ್ವರ್ಯಗೌಡ ಒಪ್ಪಿದ್ದರು ಎಂದು ಇ ಡಿ ಮೂಲಗಳು ಹೇಳಿವೆ.

ವಿನಯ್ ಕುಲಕರ್ಣಿ ಜತೆಗಿನ ಒಪ್ಪಂದದಂತೆ ಐಶ್ವರ್ಯಗೌಡ, ಬಸವರಾಜ್ ಮುತ್ತಗಿಯನ್ನು



ಟ್ರ್ಯಾಪ್ ಮಾಡಿದ್ದರು. ಯೋಗೇಶ್‌ಗೌಡ ಕೊಲೆ ಪ್ರಕರಣದ ಮತ್ತೊಬ್ಬ ಆರೋಪಿ ಲಕ್ಷ್ಮಣ್ ಜತೆ ಸೇರಿ ಬಸವರಾಜ್ ಮುತ್ತಗಿಗೆ ಕರೆ ಮಾಡಿ ಹಣದ ಆಮಿಷವೊಡ್ಡಿ ರೆಕಾರ್ಡ್ ಮಾಡಿಕೊಂಡಿದ್ದರು. ಬಳಿಕ ಆ ಆಡಿಯೋವನ್ನು ಹೈಕೋರ್ಟ್‌ಗೆ ಸಲ್ಲಿಸಿ ಸಾಕ್ಷಿ ರದ್ದು ಮಾಡಿಸುವ ಸಂಚು ರೂಪಿಸಿದ್ದರು. ಆದರೆ, ನ್ಯಾಯಾಲಯವು ಈ ಪ್ರಕರಣವನ್ನು ಸಿಬಿಐ ತನಿಖೆಗೆ ನೀಡಿತ್ತು. ಹೀಗಾಗಿ, ಮಾಫಿ ಸಾಕ್ಷಿ ರದ್ದಿಗೆ ಸಲ್ಲಿಸಿದ್ದ ಅರ್ಜಿಯು ಹೈಕೋರ್ಟ್‌ನಲ್ಲಿ ವಜಾಗೊಂಡಿತ್ತು ಎಂದು ಇಡಿ ಮೂಲಗಳು ತಿಳಿಸಿವೆ.

## ಸಿಗರೇಟು, ಬೀಡಿ ತುಂಡು ಬಿಸಾಡಿದರೂ ದಂಡ: ಹುಷಾರ್..!

• ಉದಯವಾಹಿನಿ, ಬೆಂಗಳೂರು

ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡಿದರಷ್ಟೇ ಅಲ್ಲ, ಎಲ್ಲೆಂದರಲ್ಲಿ ಸಿಗರೇಟು, ಬೀಡಿ ತುಂಡುಗಳನ್ನು ಬಿಸಾಡಿದರೂ ದಂಡ ತೆರಬೇಕಾಗುತ್ತದೆ ಹುಷಾರ್..! ಸಿಗರೇಟ್, ಬೀಡಿ ತುಂಡು ಕೂಡ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಅವುಗಳನ್ನು ವೈಜ್ಞಾನಿಕ ರೀತಿಯಲ್ಲಿ ವಿಲೇವಾರಿ ಮಾಡುವ ನಿಟ್ಟಿನಲ್ಲಿ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಸ್ಥಳೀಯ ಸಂಸ್ಥೆಗಳು ಕಾರ್ಯೋನ್ಮುಖವಾಗಬೇಕೆಂದು ರಾಷ್ಟ್ರೀಯ ಹಸಿರು ನ್ಯಾಯಮಂಡಳಿ(ಎನ್‌ಜಿಟಿ) 2015ರಲ್ಲಿಯೇ ಆದೇಶ ನೀಡಿತ್ತು. ಇದಾಗಿ ದಶಕದ ಬಳಿಕ ಈ ಆದೇಶ ಜಾರಿಗೊಳಿಸಲು ಬಿಬಿಎಂಪಿ ಮುಂದಾಗಿದೆ. ಕೇಂದ್ರ ಹಾಗೂ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗಳು ಮೂರು ವರ್ಷಗಳ ಹಿಂದೆ ಸಿಗರೇಟು, ಬೀಡಿ ತುಂಡುಗಳಿಂದ ಸಾರ್ವಜನಿಕರ ಆರೋಗ್ಯದ ಮೇಲಾಗುತ್ತಿರುವ ದುಷ್ಪರಿಣಾಮಗಳನ್ನು ತಗ್ಗಿಸಲು ಹೊರಡಿಸಿದ್ದ ಮಾರ್ಗಸೂಚಿಯಂತೆ ಪಾಲಿಕೆಯು ಬೀಡಿ, ಸಿಗರೇಟ್ ತುಂಡುಗಳನ್ನು ಬಿಸಾಡುವವರ ವಿರುದ್ಧ ಸಮರ ಸಾರಿದೆ. ಈ ಸಂಬಂಧ ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ ಈಗಾಗಲೇ ಆದೇಶವನ್ನು ಹೊರಡಿಸಿದ್ದು, ಅದನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಮುಂದಾಗಿರುವ ಬಿಬಿಎಂಪಿ, ಆ ಕುರಿತು ಮಾರ್ಷಲ್‌ಗಳಿಗೆ ತರಬೇತಿಯನ್ನೂ ನೀಡಿ ಅವರನ್ನು ಕಾರ್ಯಾಚರಣೆಗಿಳಿಸಲು ಸಜ್ಜಾಗಿದೆ. ಪರಿಸರದ ಮೇಲೆ ದುಷ್ಪರಿಣಾಮ ಬೀರುತ್ತಿರುವ ಸಿಗರೇಟ್ ತುಂಡುಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ, ಘನತ್ಯಾಜ್ಯ ನಿರ್ವಹಣಾ ಉಪವಿಧಿಗಳು 2020ರ ಅನ್ವಯ 500 ರೂ. ದಂಡ ವಿಧಿಸಲು ಮಾರ್ಷಲ್‌ಗಳಿಗೆ ಅಧಿಕಾರ ನೀಡಲಾಗಿದೆ.

## ಭಾರತದಿಂದ ರಫ್ತು ನಿಷೇಧ- ಪಾಕಿಸ್ತಾನದಲ್ಲಿ ಔಷಧ ಅಭಾವ

• ಉದಯವಾಹಿನಿ, ಬೆಂಗಳೂರು

ಪಹಲ್ಗಾಮ್ ದಾಳಿಗೆ ಭಾರತ ಕೈಗೊಂಡ ವ್ಯಾಪಾರ ನಿರ್ಬಂಧ ಕ್ರಮಗಳಿಂದ ಪಾಕಿಸ್ತಾನ ಔಷಧ ಅಭಾವದ ಸಂಕಷ್ಟದ ಸುಳಿಯತ್ತ ಸಾಗಿದೆ. ಭಾರತ-ಪಾಕಿಸ್ತಾನ ನಡುವಿನ ದ್ವಿಪಕ್ಷೀಯ ವ್ಯಾಪಾರ ಕಡಿತಗೊಂಡಿರುವ ಹಿನ್ನೆಲೆಯಲ್ಲಿ ಫಾರ್ಮಾಸ್ಯುಟಿಕಲ್ ಕಂಪನಿಗಳಿಗೆ ಶೇ.30 ರಿಂದ 40 ರಷ್ಟು ಕಚ್ಚಾ ವಸ್ತುಗಳ ಅಭಾವ ಎದುರಾಗಿದೆ. ರೇಬಿಸ್ ನಿರೋಧಕ ಲಸಿಕೆ, ಹಾವು ಕಡಿತ ಔಷಧ, ಕ್ಯಾನ್ಸರ್ ಚಿಕಿತ್ಸಕ ಔಷಧಗಳು, ಆಂಟಿ ಬಯೋಟಿಕ್, ಪ್ರಮುಖ ಜೀವರಕ್ಷಕ ಔಷಧಗಳ ಉತ್ಪಾದನೆಗೆ ಅಡ್ಡಿ ಉಂಟಾಗಿದೆ. ಏಕಾಏಕಿ ವ್ಯಾಪಾರ ಒಪ್ಪಂದ ರದ್ದುಗೊಂಡ ಕಾರಣ ಭಾರತದಿಂದ ಶೇ.40ರಷ್ಟು ಕಚ್ಚಾ ವಸ್ತು ಆಮದು ಮಾಡಿಕೊಳ್ಳುತ್ತಿದ್ದ ಪಾಕಿಸ್ತಾನದ ಫಾರ್ಮಾಸ್ಯುಟಿಕಲ್ ವಲಯ ಸಂಕಷ್ಟಕ್ಕೆ ಸಿಲುಕಿದೆ. ಪೂರೈಕೆ ಸರಪಳಿ ಕಡಿತಗೊಂಡರೆ ಔಷಧಗಳ ಅಭಾವ ಎದುರಾಗಬಹುದು ಎಂಬ ಆತಂಕ ವ್ಯಕ್ತವಾಗಿದೆ. ಭಾರತದ ಕ್ರಮದಿಂದ ಆತಂಕಗೊಂಡಿರುವ ಪಾಕಿಸ್ತಾನ ಸರಕಾರವು ನೆರೆಯ ಚೀನಾ, ರಷ್ಯಾ, ಯುರೋಪ್ ರಾಷ್ಟ್ರಗಳಿಂದ ಕಚ್ಚಾ ವಸ್ತು ಆಮದು ಮಾಡಿಕೊಳ್ಳುವ ಚಿಂತನೆ ನಡೆಸಿದೆ. ಔಷಧ ಉತ್ಪಾದನೆ ವ್ಯವಸ್ಥೆ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗದಂತೆ ತಡೆಯಲು ಪರ್ಯಾಯ ಕ್ರಮಕ್ಕೆ ಪಾಕಿಸ್ತಾನದ ಔಷಧ ನಿಯಂತ್ರಣ ಪ್ರಾಧಿಕಾರ ಮುಂದಾಗಿದೆ.

## ಇಸ್ಲಾಂ ನಲ್ಲಿ ಜಾತಿ, ಧರ್ಮ, ಭೇದ ಮಾಡಿ ಅಂತ ಹೇಳಿಲ್ಲ

• ಉದಯವಾಹಿನಿ, ಚಿಕ್ಕಬಳ್ಳಾಪುರ

ಬಿಜೆಪಿಯವರಿಗೆ ಹಿಂದೂಗಳು ಬೇಕಿಲ್ಲ ಮುಸ್ಲಿಮರೂ ಬೇಕಿಲ್ಲ ಬೇಕಿರೋದು ಅಧಿಕಾರ ಅಂತ ವಸತಿ ಸಚಿವ ಜಮೀರ್ ಅಹಮದ್ ಹೇಳಿದರು. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿಯಲ್ಲಿ ನಡೆದ ಸರ್ಕಾರದ 2 ವರ್ಷದ ಸಾಧನಾ ಸಮಾವೇಶದಲ್ಲಿ ಮಾತನಾಡಿದ ವಸತಿ ಇಲಾಖೆ ಸಚಿವರು, ನಾವು ಕಾಂಗ್ರೆಸ್‌ನವರು ಸಾಧನೆಗಳ ಮೂಲಕ ಮತಯಾಚನೆ ಮಾಡ್ತೀವಿ. ಬಿಜೆಪಿಯವರ ಎಂದಾದರೂ ಸಾಧನೆಗಳ ಮೂಲಕ ಮತ ಕೇಳಿದ್ದಾರಾ ಆದ್ರೆ, ಬಿಜೆಪಿಯವರು ಹಿಂದೂ ಮುಸ್ಲಿಂ ಅಂತ ಬೇಧಭಾವ ಮಾಡಿ ಮತ ಕೇಳ್ತಾರೆ. ಅವರಿಗೆ ಹಿಂದೂಗಳು ಬೇಕಿಲ್ಲ ಮುಸ್ಲಿಮರೂ ಬೇಕಿಲ್ಲ ಬೇಕಿರೋದು ಅಧಿಕಾರ ಮಾತ್ರ ಅಂತ ಕಿಡಿ ಕಾರಿದ್ದಾರೆ. ಹಿಂದೂ, ಮುಸ್ಲಿಂ ಹೆಸರಲ್ಲಿ ಬಿಜೆಪಿ ರಾಜಕೀಯ ಮಾಡುತ್ತಿದೆ. ಇಸ್ಲಾಂ ನಲ್ಲಿ ಜಾತಿ ಧರ್ಮ ಭೇದ ಭಾವ ಮಾಡಿ ಅಂತ ಹೇಳಿಲ್ಲ. ಸಾರೇ ಜಹಾನ್ಸೇ ಅಚ್ಚಾ ಹಿಂದೂಸ್ತಾನ್ ಹಮಾರಾ ಅಂತ ಇಸ್ಲಾಂ ಧರ್ಮ ಹೇಳಿಕೊಟ್ಟಿರೋದು ಅಂತ ಬಿಜೆಪಿ ನಾಯಕರಿಗೆ ತಿರುಗೇಟು ನೀಡಿದರು.

## ಪಾಕ್‌ಗೆ ನಡುಕ ಶುರು

● ಉನ್ನತ ಮಟ್ಟದ ಸಭೆ ● ಪಹಲ್ಗಾಮ್ ದಾಳಿ; ಮಹತ್ವದ ಮಾತುಕತೆ ● ಪಹಲ್ಲಾಮ್‌ನಲ್ಲಿ ಉಗ್ರರ ದಾಳಿ: ಸೇನಾ ಮುಖ್ಯಸ್ಥರೊಂದಿಗೆ ಕೇಂದ್ರ ಸಚಿವ ರಾಜನಾಥ್ ಸಿಂಗ್ ಸಭೆ ● ಪಹಲ್ಗಾಮ್ ದಾಳಿ: ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಭೇಟಿಯಾದ ಸಿಡಿಎಸ್ ಜನರಲ್ ಅನಿಲ್ ಚೌಹಾಣ್



• ಉದಯವಾಹಿನಿ, ನವದೆಹಲಿ

ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಗೆ ಭಾರತ ದಿಟ್ಟ ಉತ್ತರ ನೀಡುತ್ತಿದ್ದು, ಇದರ ನಡುವೆ ಭಾನುವಾರ ಮಿಲಿಟರಿ ಕಾರ್ಯಾಚರಣೆಗೆ ಸಂಬಂಧಿಸಿದ ಪ್ರಮುಖ ವಿಷಯಗಳ ಬಗ್ಗೆ ಚರ್ಚಿಸಲು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಭಾರತೀಯ ಸೇನೆಯ ಚೀಫ್ ಆಫ್ ಜನರಲ್ ಸ್ಟಾಫ್ ಜನರಲ್ ಅನಿಲ್ ಚೌಹಾಣ್ ಅವರೊಂದಿಗೆ ಸಭೆ ನಡೆಸಿದರು.

ಏ.22ರಂದು ಪಾಕಿಸ್ತಾನದ ಉಗ್ರರು ಪಹಲ್ಗಾಮ್ ನ ಬೈಸರನ್ ಕಣಿವೆಯಲ್ಲಿ ಗುಂಡಿನ ಮಳೆಗರೆದು 26 ಪ್ರವಾಸಿಗರನ್ನು ಬಲಿ ಪಡೆದುಕೊಂಡಿದ್ದರು. ದಾಳಿಯ ನಂತರ ಜಮ್ಮು ಮತ್ತು ಕಾಶ್ಮೀರ ಪೊಲೀಸರು, ಸಿಆರ್‌ಪಿಎಫ್, ಸೇನೆ ಮತ್ತು ಇತರ ಭದ್ರತಾ ಸಿಬ್ಬಂದಿ ಭಯೋತ್ಪಾದನೆಯನ್ನು ಬೇರು ಸಹಿತ ಕಿತ್ತುಹಾಕುವ ಸಲುವಾಗಿ ಶೋಧ ಕಾರ್ಯ ನಡೆಸುತ್ತಿವೆ. ವಿವಿಧ ಕಡೆಗಳಲ್ಲಿ ತನಿಖೆ ಚುರುಕುಗೊಳಿಸಿವೆ. ರಾಷ್ಟ್ರೀಯ ತನಿಖಾ ಸಂಸ್ಥೆ ಕೂಡ ವಿಚಾರಣೆ ಪ್ರಾರಂಭಿಸಿದೆ. ರಕ್ಷಣಾ ಸಚಿವರು ಉನ್ನತ ಮಟ್ಟದ ಸಭೆ ನಡೆಸಿದ್ದಾರೆ. ಈಗಾಗಲೇ ಭಾರತದ ಪ್ರಧಾನಿ ಮೋದಿ ಈ ಕೃತ್ಯ ಎಸಗಿದವರನ್ನು ಸುಮ್ಮನೆ ಬಿಡುವ ಮಾತೇ ಇಲ್ಲ ಎಂದು ಘೋಷಿಸಿದ್ದು, ಈ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾಗಿದ್ದಾರೆ. ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಯಾವ ರೀತಿ ಪ್ರತಿಕ್ರಿಯೆ ನೀಡಬೇಕು ಎನ್ನುವುದನ್ನು ಚರ್ಚಿಸಲು ಪಿಎಂ ಮೋದಿ ನೇತೃತ್ವದಲ್ಲಿ ಭದ್ರತಾ ಕ್ಯಾಬಿನೆಟ್ ಸಮಿತಿ ಸಭೆ ನಡೆದಿತ್ತು. ಈಗಾಗಲೇ ಭಾರತ ಸಿಂಧೂ ನದಿ ನೀರಿನ ಒಪ್ಪಂದ ಸ್ಥಗಿತಗೊಳಿಸುವುದು ಸೇರಿದಂತೆ ಹಲವು ಪ್ರಮುಖ ನಿರ್ಧಾರಗಳನ್ನು ಕೈಗೊಂಡಿದೆ.

2019ರ ಪುಲ್ವಾಮಾ ದಾಳಿಯಲ್ಲಿ 40 ಕೇಂದ್ರ ಮೀಸಲು ಪೊಲೀಸ್ ಪಡೆ ಯೋಧರು ಬಲಿಯಾದ ನಂತರ ಈ ಪ್ರದೇಶದಲ್ಲಿ ನಡೆದ ಅತ್ಯಂತ ಭೀಕರ ದಾಳಿಗಳಲ್ಲಿ ಇದು ಒಂದಾಗಿದೆ. ಘಟನೆಯ ನಂತರ, ಏ.23 ರಿಂದ ಪಹಲ್ಗಾಮ್ ಭಯೋತ್ಪಾದಕ ದಾಳಿ ಸ್ಥಳದಲ್ಲಿ ಬೀಡುಬಿಟ್ಟಿರುವ ರಾಷ್ಟ್ರೀಯ ತನಿಖಾ ಸಂಸ್ಥೆ ತಂಡಗಳು ಪುರಾವೆಗಳಿಗಾಗಿ ಹುಡುಕಾಟವನ್ನು ತೀವ್ರಗೊಳಿಸಿವೆ. ಭಯೋತ್ಪಾದನಾ ನಿಗ್ರಹ ಸಂಸ್ಥೆಯ ಐಜಿ, ಡಿಐಜಿ ಮತ್ತು ಎಸ್‌ಪಿ ನೇತೃತ್ವದ ತಂಡಗಳು ಏಪ್ರಿಲ್ 22ರ ದಾಳಿಯನ್ನು ಗಮನಿಸಿದ ಪ್ರತ್ಯಕ್ಷದರ್ಶಿಗಳನ್ನು ಪ್ರಶ್ನಿಸುತ್ತಿವೆ. ಇದಲ್ಲದೆ, ಪಹಲ್ಗಾಮ್‌ನಲ್ಲಿ ನಡೆದ ದಾಳಿಯ ನಂತರ ಭಾರತೀಯ ಸೇನೆಯು ಕಟ್ಟೆಚ್ಚರವಹಿಸಿದ್ದು, ಭಯೋತ್ಪಾದಕರನ್ನು ತಟಸ್ಥಗೊಳಿಸಲು ಹಲವಾರು ಶೋಧ ಕಾರ್ಯಾಚರಣೆಗಳನ್ನು ಪ್ರಾರಂಭಿಸಿದೆ. ಭದ್ರತಾ ಸಚಿವ ಸಂಪುಟ ಸಮಿತಿ (ಸಿಸಿಎಸ್) ಏ.23ರಂದು ಸಭೆ ಸೇರಿ ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯ ಬಗ್ಗೆ, ವಿವರವಾಗಿ ವಿವರಿಸಲಾಯಿತು. ಸಿಸಿಎಸ್ ದಾಳಿಯನ್ನು ತೀವ್ರವಾಗಿ ಖಂಡಿಸಿತು ಮತ್ತು ಬಲಿಪಶುಗಳ ಕುಟುಂಬಗಳಿಗೆ ತನ್ನ ಆಳವಾದ ಸಂತಾಪವನ್ನು ವ್ಯಕ್ತಪಡಿಸಿತು.

**1** ಮೋದಿ ನೇತೃತ್ವದಲ್ಲಿ ಭದ್ರತಾ ಕ್ಯಾಬಿನೆಟ್ ಸಮಿತಿ ಸಭೆ

**2** ರಾಷ್ಟ್ರೀಯ ತನಿಖಾ ಸಂಸ್ಥೆ (NIA) ತಂಡಗಳು ಪುರಾವೆಗಳಿಗಾಗಿ ಹುಡುಕಾಟ ತೀವ್ರ

**3** ದಾಳಿಯ ನಂತರ ಭಾರತೀಯ ಸೇನೆಯು ಕಟ್ಟೆಚ್ಚರ

### ಉಗ್ರರಿಗೆ ಕಠಿಣ ಶಿಕ್ಷೆ ಕೊಟ್ಟೇ ಕೊಡುತ್ತೇವೆ

ಪಹಲ್ಗಾಮ್ ಉಗ್ರ ದಾಳಿಯಲ್ಲಿ ಮೃತಪಟ್ಟವರಿಗೆ ನ್ಯಾಯ ಸಿಗುತ್ತೆ, ಉಗ್ರರಿಗೆ ಕಠಿಣ ಶಿಕ್ಷೆ ಕೊಟ್ಟೇ ಕೊಡುತ್ತೇವೆ. ದೇಶದ 140 ಕೋಟಿ ಜನರ ಒಗ್ಗಟ್ಟು, ಸಂಕಲ್ಪದಿಂದ ಉಗ್ರರನ್ನು ಸದೆಬಡಿದು ದಾಳಿಯಲ್ಲಿ ಮೃತಪಟ್ಟವರಿಗೆ ನ್ಯಾಯ ಕೊಡಿಸುತ್ತೇವೆ. ಇಡೀ ವಿಶ್ವವೇ ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಭಾರತದೊಂದಿಗಿದೆ ಎಂದರು. ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಇತ್ತೀಚೆಗೆ ನಡೆದ ಭೀಕರ ದಾಳಿ ಪ್ರಧಾನಿ ಮೋದಿ ತಮ್ಮ ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ಉಲ್ಲೇಖಿಸಿದ್ದಾರೆ. ಕಾಶ್ಮೀರದ ಪ್ರಗತಿಯಿಂದ ಕೆಲವು ಶತ್ರುಗಳು ಸಂತೋಷವಾಗಿಲ್ಲ. ಏಪ್ರಿಲ್ 22 ರಂದು ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ಘಟನೆಯು ದೇಶದ ಪ್ರತಿಯೊಬ್ಬ ನಾಗರಿಕನನ್ನು ದುಃಖಿತನನ್ನಾಗಿ ಮಾಡಿದೆ. ಈ ಭಯೋತ್ಪಾದಕ ದಾಳಿಯ ಚಿತ್ರಗಳನ್ನು ನೋಡಿದ ನಂತರ ಪ್ರತಿಯೊಬ್ಬ ಭಾರತೀಯನ ರಕ್ತ ಕುದಿಯುತ್ತಿದೆ.

### 7ನೇ ಶಂಕಿತ ಭಯೋತ್ಪಾದಕನ ಮನೆ ಧ್ವಂಸ

ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಉಗ್ರ ದಾಳಿ ಬಳಿಕ ಭಯೋತ್ಪಾದಕರ ಮೇಲೆ ಮುಗಿಬಿದ್ದಿರುವ ಭಾರತೀಯ ಸೇನೆ ಶಂಕಿತ ಉಗ್ರರ ಮನೆಗಳನ್ನು ಧ್ವಂಸ ಮಾಡುವ ಕಾರ್ಯಾಚರಣೆಯನ್ನು ಮುಂದುವರಿಸಿದ್ದಾರೆ. ಪಹಲ್ಗಾಮ್ ದಾಳಿಯ ನಂತರದ ಏಳನೇ ಶಂಕಿತ ಉಗ್ರನ ಮನೆಯನ್ನು ಗುರುತಿಸಿರುವ ಭಾರತೀಯ ಸೇನೆ ಬಂಡಿಪೋರಾದ ನಾಜ್ ಕಾಲೋನಿಯಲ್ಲಿ ಸಕ್ರಿಯ ಭಯೋತ್ಪಾದಕ ಜಮ್ಮೆಲ್ ಅಹ್ಮದ್ ಶೀರ್ ಗೋಜ್ರಿ ಮನೆಯನ್ನು ಭದ್ರತಾ ನೆಲಸಮಗೊಳಿಸಿವೆ. ಲಷ್ಕರ್-ಎ-ತೈಬಾ ಕಮಾಂಡರ್ ಜಮೀಲ್ 2016 ರಿಂದ ಸಕ್ರಿಯನಾಗಿದ್ದಾನೆ. ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ ಕಾಶ್ಮೀರದಲ್ಲಿ ಅಧಿಕಾರಿಗಳು ಭಯೋತ್ಪಾದಕರು ಮತ್ತು ಅವರ ಸಹಚರರ ಮೇಲೆ ಭಾರಿ ಪ್ರಮಾಣದ ಕ್ರಮ ಕೈಗೊಂಡಿದ್ದಾರೆ.

### ನುಣುಚಿಕೊಂಡ ಟಿಆರ್‌ಎಫ್

ಪಹಲ್ಗಾಮ್ ದಾಳಿಯ ಹೊಣೆ ಹೊತ್ತುಕೊಂಡಿದ್ದ ಉಗ್ರ ಸಂಘಟನೆ ಲಷ್ಕರ್-ಎ-ತೊಯ್ಬಾದ ಅಂಗಸಂಸ್ಥೆ ರೆಸಿಸ್ಟೆನ್ಸ್ ಫ್ರಂಟ್ ಇದೀಗ ಯುಟರ್ನ್ ಹೊಡೆದಿದ್ದು, ಪಹಲ್ಗಾಮ್ ದಾಳಿಯಲ್ಲಿ ತಮ್ಮ ಪಾತ್ರವಿಲ್ಲ ಎಂದು ಹೇಳಿದೆ. ತಮ್ಮ ವಿರುದ್ಧದ ಆರೋಪಗಳೆಲ್ಲ ಸುಳ್ಳು. ಭಾರತೀಯ ಸೈಬರ್ ಗುಪ್ತಚರ ಸಂಸ್ಥೆಗಳು ಅನಧಿಕೃತವಾಗಿ ಸುಳ್ಳು ಸಂದೇಶ ರವಾನಿಸಿವೆ ಎಂದು ಹೇಳಿಕೆ ನೀಡಿದೆ.





### ಪಾಕ್ ಸಚಿವ ಹೇಳಿದ್ದೇನು

ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್ ಭಯೋತ್ಪಾದಕ ದಾಳಿಯ ತನಿಖೆಯಲ್ಲಿ ರಷ್ಯಾ, ಚೀನಾ ಮತ್ತು ಇತರ ಪಾಶ್ಚಿಮಾತ್ಯ ದೇಶಗಳು ಭಾಗವಹಿಸಬೇಕು ಎಂದು ಎಂದು ಪಾಕಿಸ್ತಾನದ ರಕ್ಷಣಾ ಸಚಿವ ಖವಾಜಾ ಆಸಿಫ್ ಇತ್ತೀಚಿನ ಸಂದರ್ಶನದಲ್ಲಿ ಹೇಳಿದ್ದಾನೆ. ರಷ್ಯಾ, ಚೀನಾ ಅಥವಾ ಪಾಶ್ಚಿಮಾತ್ಯ ದೇಶಗಳು ಸಹ ಈ ಬಿಕ್ಕಟ್ಟಿನ ಸಮಯದಲ್ಲಿ ಬಹಳ ಸಕಾರಾತ್ಮಕ ಪಾತ್ರ ವಹಿಸಬಹುದು ಎಂದು ನಾನು ಭಾವಿಸುತ್ತೇನೆ. ದಾಳಿಯ ಬಗ್ಗೆ ಭಾರತ ಅಥವಾ ಮೋದಿ ಸುಳ್ಳು ಹೇಳುತ್ತಿದ್ದಾರೆಯೇ ಅಥವಾ ಅವರು ಸತ್ಯವನ್ನು ಹೇಳುತ್ತಿದ್ದಾರೆಯೇ ಎಂದು ತನಿಖೆ ಮಾಡಲು ತನಿಖಾ ತಂಡವನ್ನು ಸಹ ರಚಿಸಬೇಕು ಎಂದು ಖವಾಜಾ ಆಸಿಫ್ ತಿಳಿಸಿದ್ದಾನೆ.

**ಪಾಕ್ ಬಾಯಿ ಬಡುಕ ಶುರುವಾಯ್ತು ನಡುಕ**

## 18 ಶಾಸಕರ ಅಮಾನತು ರದ್ದು ನಾನೊಬ್ಬನೇ ನಿರ್ಧರಿಸಲಾಗದು

• ಉದಯವಾಹಿನಿ, ಮಂಗಳೂರು

ವಿಧಾನಸಭೆಯಲ್ಲಿ ಸಭಾಧ್ಯಕ್ಷರ ಪೀಠಕ್ಕೆ ಅಗೌರವ ತೋರಿದ ಬಿಜೆಪಿಯ 18 ಶಾಸಕರ ಅಮಾನತು ಮಾಡಿದ್ದು ಸದನದ ತೀರ್ಮಾನ. ಆದ್ದರಿಂದ ಅವರ ಅಮಾನತು ಹಿಂಪಡೆಯುವ ವಿಚಾರದಲ್ಲೂ ನಾನೊಬ್ಬನೇ ತೀರ್ಮಾನ ಕೈಗೊಳ್ಳಲಾಗದು ಎಂದು ವಿಧಾನ ಸಭಾಧ್ಯಕ್ಷ ಯು.ಟಿ. ಖಾದರ್ ಹೇಳಿದರು.

ಇಲ್ಲಿ ಸುದ್ದಿಗಾರರನ್ನು ಉದ್ದೇಶಿಸಿ ಭಾನುವಾರ ಮಾತನಾಡಿದ ಅವರು, ಪೀಠದ ಗೌರವ ಉಳಿಸಲು ಆರು ತಿಂಗಳವರೆಗೆ ಅಮಾನತು ಮಾಡಲಾಗಿದೆ. ಸಮಿತಿ ಸಭೆಯಲ್ಲೂ ಭಾಗವಹಿಸಬಾರದು ಎಂದು ಸೂಚಿಸಲಾಗಿದೆ. ತಪ್ಪಿನ ಅರಿವು ಅವರಿಗೆ ಆಗಬೇಕು. ಇದು ಅವರಿಗೆ ಕೊಟ್ಟಿರುವ ಶಿಕ್ಷೆಯಲ್ಲ.

**ಶಾಸಕರಿಗೆ ಕೊಟ್ಟಿರುವ ಸವಾಲು ಇದು**

ಮುಂದೆ ಉತ್ತಮ ನಾಯಕರಾಗಿ ಬೆಳೆಯುವುದಕ್ಕೆ ಶಾಸಕರಿಗೆ ಕೊಟ್ಟಿರುವ ಸವಾಲು ಇದು ಎಂದರು.

ಅಮಾನತು ರದ್ದತಿ ಬಗ್ಗೆ ಸರ್ಕಾರದೊಂದಿಗೆ ಚರ್ಚೆ ನಡೆಸುತ್ತೇನೆ ಎಂದು ಅವರು ಹೇಳಿದರು.

ಶಾಸಕರನ್ನು ಅಮಾನತುಗೊಳಿಸಿದ ವಿಚಾರದಲ್ಲಿ ವಿಧಾನಸಭಾಧ್ಯಕ್ಷ ಯು.ಟಿ ಖಾದರ್ ವಿರುದ್ಧ ಶಾಸಕ ಹರೀಶ್ ಪೂಂಜಾ ನೀಡಿರುವ ಹೇಳಿಕೆ ವಿರುದ್ಧ ಹಕ್ಕುಚ್ಯುತಿಗೆ ಕೆಲ ಕಾಂಗ್ರೆಸ್ ಶಾಸಕರು ನೀಡಿರುವ ದೂರಿನ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಕೆಲ ಶಾಸಕರಿಗೆ ಏನಾದರೂ ಮಾತನಾಡುವ ಚಾಳಿ ಇದೆ. ತಮಗೆ ಪ್ರಚಾರ ಸಿಗುತ್ತದೆ ಎಂದು ಆ ರೀತಿ ಮಾತನಾಡ್ತಾರೆ. ಅವರ ಹೇಳಿಕೆ ಸಂವಿಧಾನಕ್ಕೆ ಬದ್ಧವಾಗಿರಬೇಕು. ಈ ಕುರಿತು ಶಾಸಕರು ಹಕ್ಕುಚ್ಯುತಿ ಸಮಿತಿಗೆ ದೂರು ಕೊಟ್ಟಿದ್ದಾರೆ. ಸಮಿತಿಯೇ ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತದೆ ಎಂದರು.

ನಿವೃತ್ತ ಡಿಜಿಪಿ ಮತ್ತು ಐಜಿಪಿ ಓಂ ಪ್ರಕಾಶ್ ಹತ್ಯೆ ಪ್ರಕರಣದಲ್ಲಿ ಪಿಎಫ್‌ಐ ಕೈವಾಡದ ಇದೆ ಎಂದು ಈ ಹಿಂದೆ ಡಿವೈಎಸ್ಪಿಯಾಗಿದ್ದು, ಹುದ್ದೆಗೆ ರಾಜೀನಾಮೆ ನೀಡಿದ್ದ ಅನುಪಮಾ ಶೆಣೈ ಆರೋಪಿಸಿರುವ ಕುರಿತು ಮತ್ತು ಈ ಬಗ್ಗೆ ಪತ್ರ ಬರೆದ ಕುರಿತು ಪ್ರತಿಕ್ರಿಯಿಸಿದ ಖಾದರ್,'ನಾನು ತನಿಖಾ ಏಜೆನ್ಸಿ ಅಲ್ಲ. ನಾನು ಸಾರ್ವಜನಿಕ ಹುದ್ದೆಯಲ್ಲಿರುವವನು. ಅವರು ಈ ಬಗ್ಗೆ ಸರ್ಕಾರಕ್ಕೆ



ಪತ್ರ ಬರೆಯಲಿ. ನನ್ನ ಕಚೇರಿಗೆ ಪತ್ರ ಬಂದಿದೆಯೇ ಎಂದು ಪರಿಶೀಲನೆ ನಡೆಸುತ್ತೇನೆ. ಅವರಲ್ಲಿ ನಿಜವಾಗಿಯೂ ಪುರಾವೆಗಳಿದ್ದಲ್ಲಿ ತನಿಖಾ ಸಂಸ್ಥೆಗೆ ಕೊಡಲಿ' ಎಂದರು.

ಪಹಲ್ಗಾಮ್ ಉಗ್ರರ ದಾಳಿ ಪ್ರಕರಣದಲ್ಲಿ 'ಯುದ್ಧ ಬೇಡ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ ನೀಡಿರುವ ಕುರಿತು ಪ್ರತಿಕ್ರಿಯಿಸಿದ ಅವರು, 'ನಮ್ಮ ದೇಶದ ಏಕತೆ, ಒಗ್ಗಟ್ಟನ್ನು ಮುರಿಬೇಕೆಂಬುದೇ ಈ ಸಂಚಿನ ಉದ್ದೇಶ. ಅದಕ್ಕೆ ನಾವು ಆಸ್ಪದ ಕೊಡಬಾರದು. ದುರ್ಬಲಗೊಳಿಸಲು ನಾವು ಪ್ರಯತ್ನ ಪಟ್ಟರೆ ಸಂಚುಕೋರರಿಗೆ ಸಹಾಯ ಮಾಡಿದ ಹಾಗಾಗುತ್ತದೆ. ಕೃತ್ಯ ಎಸಗಿದರನ್ನು ಮತ್ತು ಬೆಂಬಲ ನೀಡಿದವರನ್ನು ಮಟ್ಟ ಹಾಕಬೇಕು. ಯುದ್ಧ ನಡೆಸುವ ಬಗ್ಗೆ ಸರ್ವಪಕ್ಷ ಸಭೆ, ಅಧಿಕಾರಿಗಳು, ಕೇಂದ್ರ ಸರ್ಕಾರ ನಿರ್ಧಾರ ಮಾಡುತ್ತದೆ. ಈ ವಿಚಾರದಲ್ಲಿ ಇಡೀ ದೇಶ ಒಗ್ಗಟ್ಟಾಗಿರಬೇಕು' ಎಂದು ಹೇಳಿದರು.

## ಯುದ್ಧ ಬೇಡವೆಂದು ಹೇಳಿಲ್ಲ, ಅಗತ್ಯ ಬಿದ್ದರೆ ಅನಿವಾರ್ಯ!

■ ಪಾಕ್ ಮಾಧ್ಯಮಗಳಲ್ಲೂ ಸುದ್ದಿಯಾಗುತ್ತಿದ್ದಂತೆ ಉಲ್ಟಾ ಹೊಡೆದ ಸಿದ್ದರಾಮಯ್ಯ ■ ಯುದ್ಧವೇ ಮೊದಲ ಇಲ್ಲವೇ ಏಕೈಕ ಆಯ್ಕೆಯಲ್ಲ

• ಉದಯವಾಹಿನಿ, ಬೆಂಗಳೂರು

'ಯುದ್ಧ ಎನ್ನುವುದು ಯಾವುದೇ ದೇಶದ ಅಂತಿಮ ಆಯ್ಕೆಯೇ ಹೊರತು, ಯುದ್ಧವೇ ಮೊದಲ ಇಲ್ಲವೇ ಏಕೈಕ ಆಯ್ಕೆಯಲ್ಲ. ಶತ್ರುವನ್ನು ಮಣಿಸುವ ಉಳಿದೆಲ್ಲ ಆಯ್ಕೆಗಳು ವಿಫಲವಾದಾಗ ಮಾತ್ರ ಯುದ್ಧಕ್ಕೆ ಹೊರಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಈ ರೀತಿಯ ಅರ್ಥದಿಂದ ಎಂದೂ ನಾನು ಹೇಳಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

'ಪಾಕಿಸ್ತಾನದ ಮೇಲೆ ಭಾರತ ಯುದ್ಧ ಮಾಡಬಾರದು ಎಂದು ಸಿಎಂ ಸಿದ್ದರಾಮಯ್ಯ ನೀಡಿದ್ದ ಹೇಳಿಕೆ ಸಾಕಷ್ಟು ವೈರಲ್ ಆಗಿತ್ತು. ಸಿದ್ದರಾಮಯ್ಯ ಹೇಳಿಕೆಯನ್ನು ಬಳಸಿಕೊಂಡು ಪಾಕಿಸ್ತಾನ ಮಾಧ್ಯಮಗಳೂ ಕೂಡ ಸುದ್ದಿ ಪ್ರಸಾರ ಮಾಡಿದ್ದವು. ಇದರ ಬೆನ್ನಲ್ಲೇ ರಾಷ್ಟ್ರೀಯ ಮಟ್ಟದಲ್ಲಿ ಸಾಕಷ್ಟು ಟೀಕೆಗಳು ವ್ಯಕ್ತವಾಗಿತ್ತು. ಇದನ್ನೇ ಅಸ್ತ್ರವಾಗಿಸಿಕೊಂಡ ವಿರೋಧ ಪಕ್ಷದ ನಾಯಕರು ಸಿದ್ದರಾಮಯ್ಯ ವಿರುದ್ಧ ತಿರುಗಿಬಿದ್ದಿದ್ದರು. ಈ ಬಗ್ಗೆ ವಿವಾದ ಜೋರಾಗುತ್ತಿದ್ದಂತೆ ಎಚ್ಚೆತ್ತುಕೊಂಡ ಸಿದ್ದರಾಮಯ್ಯ, 'ಪಾಕಿಸ್ತಾನದ ವಿರುದ್ಧ ಯುದ್ಧ ಮಾಡುವುದೇ ಬೇಡವೆಂದು ನಾನು ಹೇಳಿಲ್ಲ. ಯುದ್ಧ ಅನಿವಾರ್ಯವಾದರೆ ಮಾತ್ರ ಮಾಡಬೇಕು ಎನ್ನುತ್ತಾ ಸಮಜಾಯಿಷಿ ನೀಡಿದ್ದಾರೆ. ಯುದ್ಧದ ಕುರಿತು ನಾನು ನೀಡಿದ ಹೇಳಿಕೆಯ ಬಗ್ಗೆ ಪರ - ವಿರೋಧದ ಚರ್ಚೆಗಳು ನಡೆಯುತ್ತಿರುವುದನ್ನು



ಗಮನಿಸಿದ್ದೇನೆ ಎಂದು ತಿಳಿಸಿದರು.

'ಪಹಲ್ಗಾಮ್‌ನಲ್ಲಿ ನಡೆದ ಪಾಕ್ ಪ್ರೇರಿತ ಉಗ್ರರ ದಾಳಿಗೆ ನಮ್ಮ ಗೂಢಚರ್ಯೆ ಮತ್ತು ಭದ್ರತಾ ವ್ಯವಸ್ಥೆಯ ವೈಫಲ್ಯ ಕಾರಣ ಎನ್ನುವುದು ದೇಶದ ಜನತೆಗೆ ಮತ್ತು ಕೇಂದ್ರ ಸರ್ಕಾರಕ್ಕೂ ಈಗ ಮನವರಿಕೆಯಾಗಿದೆ. ಮೊದಲು ಈ ಲೋಪವನ್ನು ಸರಿಪಡಿಸಿಕೊಂಡು



### ಯುದ್ಧದ ಬಗ್ಗೆ ಸಿದ್ದರಾಮಯ್ಯ ಹೇಳಿದ್ದೇನು

ಪಾಕಿಸ್ತಾನದ ಮೇಲೆ ಯುದ್ಧ ಮಾಡುವ ಅನಿವಾರ್ಯತೆ ಇದೆಯಾ ಎಂದು ಮಾಧ್ಯಮದವರು ಕೇಳಿದ ಪ್ರಶ್ನೆಗೆ ಉತ್ತರಿಸಿದ್ದ ಸಿಎಂ ಸಿದ್ದರಾಮಯ್ಯ, 'ಯುದ್ಧ ಮಾಡುವ ಅನಿವಾರ್ಯತೆ ಇಲ್ಲ. ಕೇಂದ್ರ ಸರ್ಕಾರ ಬಿಗಿ ಭದ್ರತೆಯ ಕ್ರಮಗಳನ್ನು ತೆಗೆದುಕೊಳ್ಳಬೇಕು, ರಕ್ಷಣಾ ವ್ಯವಸ್ಥೆಯನ್ನು ಸದೃಢಗೊಳಿಸಬೇಕು, ಜನಕ್ಕೆ ಖಂಡಿತವಾಗಿಯೂ ಯುದ್ಧ ಬೇಕಿಲ್ಲ. ಶಾಂತಿ ಮತ್ತು ನೆಮ್ಮದಿಯಿಂದ ಬದುಕುವ ವಾತಾವರಣ ಸೃಷ್ಟಿಯಾಗಬೇಕು ಎಂದು ಹೇಳಿದ್ದರು. ಈ ಹೇಳಿಕೆ ಪಾಕಿಸ್ತಾನದ ಮಾಧ್ಯಮಗಳಲ್ಲಿ ಪ್ರಸಾರವಾಗಿತ್ತು. ಅಲ್ಲದೆ ಪಾಕಿಸ್ತಾನದ ಮೇಲೆ ಯುದ್ಧ ಮಾಡುವ ವಿಚಾರದಲ್ಲಿ ಭಾರತದಲ್ಲಿ ಆಂತರಿಕ ಭಿನ್ನಮತ ಭುಗಿಲೆದ್ದಿದೆ ಎಂದು ಸುದ್ದಿ ಪ್ರಕಟಿಸಿದ್ದವು. ಇದು ದೇಶದಲ್ಲಿ ಭಾರೀ ಆಕ್ರೋಶಕ್ಕೆ ಕಾರಣವಾಗಿತ್ತು. ವಿವಾದದ ಕಾವು ಹೆಚ್ಚಾಗುತ್ತಿದ್ದಂತೆ ಎಚ್ಚೆತ್ತಿರುವ ಸಿದ್ದರಾಮಯ್ಯ, ಸ್ಪಷ್ಟನೆ ನೀಡಿದ್ದಾರೆ.

ಮುಂದಿನ ದಿನಗಳಲ್ಲಿ ಇಂತಹ ಕೃತ್ಯಗಳು ನಡೆಯದಂತೆ ಎಚ್ಚರಿಕೆ ವಹಿಸುವ ಹೊಣೆಗಾರಿಕೆ ಕೇಂದ್ರ ಸರ್ಕಾರದ ಮೇಲಿದೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

'ಸಿಂಧೂ ನದಿ ಒಪ್ಪಂದದ ರದ್ದತಿಯೂ ಸೇರಿದಂತೆ ಕೇಂದ್ರ ಸರ್ಕಾರ ಕೆಲವು ರಾಜತಾಂತ್ರಿಕ ಕ್ರಮಗಳನ್ನು ಕೈಗೊಂಡಿದೆ. ಇದನ್ನು ನಾವು ಸ್ವಾಗತಿಸುತ್ತೇವೆ. ಕೇಂದ್ರ ಸರ್ಕಾರ ಮುಂದೆ ಇದಕ್ಕಿಂತಲೂ ಕಠಿಣ ಕ್ರಮಗಳನ್ನು ಕೈಗೊಳ್ಳಲಿದೆ ಎನ್ನುವ ಭರವಸೆ ನಮಗಿದೆ. ಅವುಗಳನ್ನೆಲ್ಲ ಬಹಿರಂಗ ಪಡಿಸುವ ಅಗತ್ಯವಿಲ್ಲ. ಅಂತಹ ಕ್ರಮಗಳಿಗೆ ನಮ್ಮ ಸಂಪೂರ್ಣ ಸಹಕಾರ ಇದೆ. ಇದೇ ವೇಳೆ ಕೆಲವು ಕಿಡಿಗೇಡಿಗಳು ಯುದ್ಧೋನ್ಮಾದವನ್ನು ಸೃಷ್ಟಿಸಿ ದೇಶದೊಳಗಿನ ಸೌಹಾರ್ದತೆಯನ್ನು ಕಲಕುವ ಪ್ರಯತ್ನ ಮಾಡುತ್ತಿದ್ದು ಇಂತಹವರ ವಿರುದ್ಧವೂ ಕೇಂದ್ರ ಸರ್ಕಾರ ಕಠಿಣ ಕ್ರಮಕೈಗೊಳ್ಳಬೇಕು. ಇಂದು ದೇಶ ಅತ್ಯಂತ ಸೂಕ್ಷ್ಮ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಬಾಹ್ಯ ಶತ್ರುವನ್ನು ಎದುರಿಸಬೇಕಾದರೆ ಆಂತರಿಕವಾಗಿ ನಾವೆಲ್ಲರೂ ಒಗ್ಗಟ್ಟಿನಿಂದ ಇರಬೇಕಾಗುತ್ತದೆ ಎಂದು ತಿಳಿಸಿದ್ದಾರೆ.

'ಪಾಕಿಸ್ತಾನ ಇಂದು ಆರ್ಥಿಕವಾಗಿ ದಿವಾಳಿಯಾಗಿರುವ ರೋಗಗ್ರಸ್ತ ದೇಶವಾಗಿದೆ. ಅವರು ಕಳೆದುಕೊಳ್ಳುವುದೇನೂ ಇಲ್ಲ, ಈ ಕಾರಣದಿಂದಾಗಿಯೇ ಜಗತ್ತಿನ ಬಲಾಢ್ಯ ರಾಷ್ಟ್ರವಾಗಿ ಬೆಳೆಯುತ್ತಿರುವ ಭಾರತ ಎಚ್ಚರಿಕೆಯ ಹೆಜ್ಜೆಗಳನ್ನು ಇಡಬೇಕಾಗಿದೆ. ಈ ಸಂದರ್ಭದಲ್ಲಿ ವಿಶ್ವದ ಎಲ್ಲಾ ರಾಷ್ಟ್ರಗಳು ಪಾಕ್ ಪ್ರೇರಿತ ಭಯೋತ್ಪಾದನೆಯನ್ನು ಖಂಡಿಸಿ ಭಾರತದ ಪರವಾಗಿ ನಿಂತಿವೆ. ಈ ಬೆಳವಣಿಗೆಯನ್ನು ಭಾರತ ಸದುಪಯೋಗಪಡಿಸಿಕೊಂಡು ಪಾಕಿಸ್ತಾನ ಮುಂದೆಂದೂ ಇಂತಹ ದುಸ್ಸಾಹಸಕ್ಕೆ ಕೈಹಾಕದಂತೆ ತಕ್ಕ ಪಾಠ ಕಲಿಸಬೇಕಾಗಿದೆ ಎಂದು ಹೇಳಿದ್ದಾರೆ.

**ಈ ದಿನದ ದರ** ಪೆಟ್ರೋಲ್: 103.50 ₹/L ಡೀಸೆಲ್ : 90.03 ₹/L ಬಂಗಾರ: ₹9,821/Gram24ct ₹9,002/Gram22ct ಬೆಳ್ಳಿ: ₹101.90/Gram

# ರೇಷ್ಮೆ ಬೆಳೆಗಾರರಿಗೆ ಗುಡ್‌ನ್ಯೂಸ್: ರೇಷ್ಮೆ ಕೃಷಿಗೂ ಸಿಗಲಿದೆ ಬೆಳೆ ವಿಮೆ

• **ಉದಯವಾಹಿನಿ, ರಾಮನಗರ**

ರೇಷ್ಮೆ ಬೆಳೆಗಾರರ ದಶಕಗಳ ಹೋರಾಟದ ಫಲವಾಗಿ ಇದೀಗ ಇನ್ಮುಂದೆ ರೇಷ್ಮೆ ಕೃಷಿಗೂ ಬೆಳೆ ವಿಮೆ ದೊರೆಯುವ ಕಾಲ ಕೂಡಿಬಂದಿದೆ. ಈ ಸಂಬಂಧ ರೇಷ್ಮೆ ಆಯುಕ್ತರ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಜವಳಿ ಸಚಿವಾಲಯ ಕೇಂದ್ರ ರೇಷ್ಮೆ ಮಂಡಳಿ ರೇಷ್ಮೆ ಕೃಷಿಯಲ್ಲಿ ತೊಡಗಿರುವ ರೇಷ್ಮೆ ಗೂಡಿನ ಪೂರ್ವದ ಭಾಗೀದಾರರಿಗೆ ರೇಷ್ಮೆ ಬೆಳೆ ವಿಮೆಗೆ ಸಂಬಂಧಿಸಿದಂತೆ ಸಮಿತಿ ನೀಡಿರುವ ವರದಿ ಕುರಿತು ವಿಸ್ತೃತ ಚರ್ಚೆ ನಡೆಯಿತು. ರೇಷ್ಮೆ ಬೆಳೆಗಾರರು, ಚಾಕಿ ಕೇಂದ್ರ, ವಿಮೆ ಕಂಪನಿಗಳು, ಮೊಟ್ಟೆ ಉತ್ಪಾದಕರು ಸೇರಿದಂತೆ ರೇಷ್ಮೆ ಕೃಷಿ ಭಾಗೀದಾರರೊಂದಿಗೆ ಅಹವಾಲುಗಳಿಗೆ ಅಧಿಕಾರಿಗಳಿಂದ ಸಕಾರಾತ್ಮಕ ಸ್ಪಂದನೆ ದೊರೆತಿದ್ದು, ಶೀಘ್ರದಲ್ಲೆ ರೇಷ್ಮೆ ಕೃಷಿಗೆ ವಿಮೆ ಸೌಲಭ್ಯ ದೊರೆಯುವ ಭರವಸೆ ವ್ಯಕ್ತವಾಗಿದೆ.


ಉದಯವಾಹಿನಿ ಚಿತ್ರ

ಸುಸ್ಥಿರ ರೇಷ್ಮೆ ಕೃಷಿ ಅಭಿವೃದ್ಧಿ, ಅಪಾಯ ನಿರ್ವಹಣೆ, ಮಾರುಕಟ್ಟೆ ಪ್ರವೇಶವಾಕಾಶ ಹೂಡಿಕೆ ಪ್ರೋತ್ಸಾಹ, ಆರ್ಥಿಕ ಸುಸ್ಥಿರತೆಗಾಗಿ ರೇಷ್ಮೆ ಕೃಷಿಕರಿಗೆ ವಿಮೆ ಅತ್ಯಗತ್ಯವಾಗಿ ಬೇಕಿತ್ತು. ಆದರೆ ವಿಮೆ ಕಂಪನಿಗಳು ಹಾಗೂ ಸರಕಾರಗಳ ಇಚ್ಛಾಶಕ್ತಿಯ ಕೊರತೆ ಹಾಗೂ ನಾನಾ ಕಾರಣಗಳಿಂದ ಈವರೆಗೆ ರೇಷ್ಮೆ ಕೃಷಿಗೆ ವಿಮೆ ಸೌಲಭ್ಯ ದೊರೆತಿರಲಿಲ್ಲ. ಬೆಲೆ ಕುಸಿತದಿಂದ ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತಿದ್ದ ರೈತರಿಗೆ ಹಿಪ್ಪುನೇರಳೆ ತೋಟ ಹಾಗೂ ರೇಷ್ಮೆ ಹುಳುಗಳಿಗೆ ತಗಲುತ್ತಿದ್ದ ನಾನಾ ರೋಗ ರುಜಿನಗಳು, ಕ್ರಿಮಿ, ಕೀಟಗಳ ಕಾಟ ಇಡೀ ಬೆಳೆಯನ್ನು ಆಪೋಷಣಕ್ಕೆ ತೆಗೆದುಕೊಳ್ಳುತ್ತಿತ್ತು. ರೇಷ್ಮೆ ತೋಟವನ್ನು ನಾಶಮಾಡುವುದು ಹಾಗೂ ರೇಷ್ಮೆ ಹುಳುಗಳನ್ನು ತಿಪ್ಪೆಗೆ ಎಸೆಯುವ ಸಂದರ್ಭಗಳು ಬಂದೊದಗುತ್ತಿದ್ದವು. ಇದು ರೇಷ್ಮೆ ಕೃಷಿಯನ್ನು ನಂಬಿ ಬದುಕುತ್ತಿದ್ದ ಲಕ್ಷಾಂತರ ಕುಟುಂಬಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತಿದ್ದವು.

**ಲಕ್ಷಾಂತರ ಕುಟುಂಬಗಳಿಗೆ ಆರ್ಥಿಕ ಬಲ**

ವಿಮಾ ವ್ಯವಸ್ಥೆಯಿಂದ ರೇಷ್ಮೆ ಕೃಷಿಗೆ ಹೊಸ ತಾಂತ್ರಿಕತೆಗಳನ್ನು ಅಳವಡಿಸಿಕೊಳ್ಳಲು ಮತ್ತು ಉತ್ಪಾದಕತೆಯನ್ನು ಹೆಚ್ಚಿಸಲು, ಉತ್ತಮ ಗುಣಮಟ್ಟದ ರೇಷ್ಮೆ ಹುಳು ತಳಿಗಳ ಸಾಕಾಣಿಕೆ, ಸಮರ್ಥ ನೀರಾವರಿ ವ್ಯವಸ್ಥೆಗಳ ಮೇಲೆ ಬಂಡವಾಳ ಹೂಡಲು ಹೆಚ್ಚಿನ ಆತ್ಮ ವಿಶ್ವಾಸ ಮೂಡಿಸುತ್ತದೆ. ವಿಮಾ ಸೌಲಭ್ಯ ವಿಸ್ತರಿಸುವುದರಿಂದ ರೇಷ್ಮೆ ಕೃಷಿಯಲ್ಲಿ ಹೊಸ ಆವಿಷ್ಕಾರ, ಉತ್ಪಾದಕತೆಯನ್ನು ಹೆಚ್ಚಿಸಲು ವಿಮೆ ಸಹಕಾರಿಯಾಗಿರುತ್ತದೆ.

ಹಿಪ್ಪುನೇರಳೆ ಕೃಷಿ, ರೇಷ್ಮೆ ಹುಳು ಸಾಕಣೆದಾರರು, ನೋಂದಾಯಿತ ರೇಷ್ಮೆ ಮೊಟ್ಟೆ ಉತ್ಪಾದಕರು, ನೋಂದಾಯಿತ ಚಾಕಿ ಸಾಕಾಣೆ ಕೇಂದ್ರಗಳು ವಿಮೆ ಸೌಲಭ್ಯವನ್ನು ಪಡೆಯಬಹುದು. ವಿಮೆ ಪಡೆಯಲು ಅರ್ಹತೆಗಳು, ವಿಮೆ ಕಂತು, ಪರಿಹಾರ ಮೊತ್ತ, ನಿಬಂಧನೆಗಳು, ಷರತ್ತುಗಳು, ವಿಮೆ ಸೌಲಭ್ಯದ ರೂಪುರೇಷೆ ಕುರಿತು ಸರಕಾರದಿಂದ ಇನ್ನಷ್ಟೇ ಅಧಿಕೃತ ಮಾಹಿತಿ ಪ್ರಕಟವಾಗಬೇಕಿದೆ.

ಸಮಿತಿ ನೀಡಿರುವ ವರದಿಯ ಜತೆಗೆ ಹಲವು ಬೇಡಿಕೆಗಳನ್ನು ವಿಮೆ ವ್ಯಾಪ್ತಿಗೆ ಸೇರಿಸಿಕೊಳ್ಳುವಂತೆ ರೇಷ್ಮೆ ಕೃಷಿ ಭಾಗಿದಾರರು ಮನವಿ ಮಾಡಿದ್ದಾರೆ. ರೇಷ್ಮೆ ಭಾಗೀದಾರರು ಪ್ರತಿ ವರ್ಷ ಜನವರಿ 1 ರಿಂದ ಮಾರ್ಚ್ 31 ರ ಅವಧಿಯ ಒಳಗೆ ಮುಂಬರುವ ವರ್ಷಕ್ಕೆ ವಿಮಾ ಬೆಂಬಲವನ್ನು ಪಡೆಯಲು ದಾಖಲಿಸಿಕೊಳ್ಳಲು ಪ್ರಸ್ತಾಪಿಸಲಾಗಿದೆ. ಇದು ರೇಷ್ಮೆ ಕೃಷಿ ಅಭಿವೃದ್ಧಿಗೆ ಸಹಕಾರಿಯಾಗಲಿದೆ.

# ಎತ್ತಿನಹೊಳೆ ಯೋಜನೆ ಸ್ಥಗಿತಗೊಳ್ಳುವ ಆತಂಕ ಸೃಷ್ಟಿ

## ಉನ್ನತಮಟ್ಟದ ಅಧಿಕಾರಿಗಳ ಸಭೆ ನಡೆಸಲು ಶಾಸಕ ಬಿ.ಸುರೇಶ್ ಗೌಡ ಆಗ್ರಹ

• **ಉದಯವಾಹಿನಿ, ತುಮಕೂರು**

ಬಯಲು ಸೀಮೆಯ 7 ಜಿಲ್ಲೆಗಳ ನೀರಿನ ದಾಹ ತಣಿಸುವ ಮಹಾತ್ವಾಕಾಂಕ್ಷಿ ಎತ್ತಿನಹೊಳೆ ಯೋಜನೆ ಸ್ಥಗಿತಗೊಳ್ಳುವ ಆತಂಕ ಸೃಷ್ಟಿಯಾಗಿದ್ದು, ಈ ಆತಂಕ



ವನ್ನು ರಾಜ್ಯ ಸರಕಾರ ದೂರ ಮಾಡಬೇಕು. ಜಲಸಂಪನ್ಮೂಲ ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕೂಡಲೇ ನೀರಾವರಿ ಮತ್ತು ಅರಣ್ಯ ಇಲಾಖೆಯ ಉನ್ನತ ಮಟ್ಟದ ಅಧಿಕಾರಿಗಳ ಸಭೆ ಕರೆಯಬೇಕೆಂದು ಗ್ರಾಮಾಂತರ ಶಾಸಕ ಬಿ. ಸುರೇಶ್ ಗೌಡ ಒತ್ತಾಯಿಸಿದ್ದಾರೆ.

ಕೇಂದ್ರ ತಂಡ ಎತ್ತಿನಹೊಳೆ ಯೋಜನೆ ಕುರಿತು ಗಂಭೀರ ಆಕ್ಷೇಪ ಎತ್ತಿದೆ. ಇದನ್ನು ಗಮನಿಸಿದರೆ ಇಡೀ ಯೋಜನೆ ನಿಂತು ಹೋಗುವ ಭಯ ಸೃಷ್ಟಿಯಾಗಿದೆ. ಈ ಭಯ ಹೋಗಲಾಡಿಸಲು ಜಿಲ್ಲೆಯವರಾದ ಗೃಹ ಸಚಿವ ಡಾ.ಜಿ.ಪರಮೇಶ್ವರ್, ಸಹಕಾರ ಸಚಿವ ಕೆ.ಎನ್.ರಾಜಣ್ಣ ಮಧ್ಯಪ್ರವೇಶಿಸಬೇಕು. ಡಿ.ಕೆ. ಶಿವಕುಮಾರ್ ಅವರ ಮೇಲೆ ಪ್ರಭಾವ ಬೀರಬೇಕೆಂದು


ಉದಯವಾಹಿನಿ ಚಿತ್ರ

ಪತ್ರಿಕಾ ಹೇಳಿಕೆ ಮೂಲಕ ಆಗ್ರಹಿಸಿದ್ದಾರೆ.

**ಉನ್ನತಮಟ್ಟದ ಅಧಿಕಾರಿಗಳ ಸಭೆ ಕರೆಯಬೇಕು:** ಕೂಡಲೇ ಉನ್ನತಮಟ್ಟದ ಅಧಿಕಾರಿಗಳ ಸಭೆ ಕರೆಯಬೇಕು. ಈ ಸಭೆಗೆ ಸಂಬಂಧಪಟ್ಟ ಜಿಲ್ಲೆಗಳ ಎಲ್ಲಾ ಸಚಿವರು, ಶಾಸಕರನ್ನು ಆಹ್ವಾನಿಸಬೇಕು. ಯೋಜನೆ ಬಗ್ಗೆ ಈ ಮೊದಲಿನಿಂದಲೂ ಸಾಕಷ್ಟು ಅನುಮಾನಗಳಿದ್ದವು. ಪರಿಸರದ ಮೇಲೆ ಬೀರಬಹುದಾದ ವ್ಯತಿರಿಕ್ತ ಪರಿಣಾಮಗಳ ಬಗ್ಗೆ ಪರಿಸರವಾದಿಗಳು ಆತಂಕ ವ್ಯಕ್ತಪಡಿಸಿದ್ದರು. ಈಗ ನೋಡಿದರೆ ನೀರಾವರಿ ಇಲಾಖೆ ಅಧಿಕಾರಿಗಳು ಎಲ್ಲಾ ನಿಯಮಗಳನ್ನು ಉಲ್ಲಂಘಿಸಿ ಯೋಜನೆ ಅನುಷ್ಠಾನಗೊಳಿಸುತ್ತಿದ್ದಾರೆಂದು ಕೇಂದ್ರ ಅರಣ್ಯ ಮತ್ತು ಪರಿಸರ ಇಲಾಖೆಯ ಅಧಿಕಾರಿಗಳು ಗಂಭೀರ ಆರೋಪ ಮಾಡಿದ್ದಾರೆ. ಈ ಬಗ್ಗೆ ಸಂಬಂಧಪಟ್ಟವರ ವಿರುದ್ಧ ಕ್ರಮ ಆಗಲೇಬೇಕೆಂದು ಒತ್ತಾಯಿಸಿದ್ದಾರೆ. ಯೋಜನೆಗೆ ಅಂದಾಜು ವೆಚ್ಚ ಈಗಾಗಲೇ 23,000 ಕೋಟಿ ರೂಪಾಯಿಗಳಿಗೆ ಏರಿದೆ.

ಕೇಂದ್ರ ಸರಕಾರದ ಆಕ್ಷೇಪಗಳ ಕಾರಣವಾಗಿ ಯೋಜನೆಯ ಕಾಮಗಾರಿ ನಿಂತು ಹೋದರೆ ಯೋಜನೆಯ ವೆಚ್ಚ ಹೆಚ್ಚುತ್ತ ಹೋಗುತ್ತದೆ. ಅದಕ್ಕಿಂತ ಹೆಚ್ಚಾಗಿ ಈ ನೀರಿಗಾಗಿ ಚಾತಕ ಪಕ್ಷಿಗಳ ಹಾಗೆ ಕಾಯುತ್ತಿರುವ ಜನತೆಯ ದಾಹ ತೀರುವುದಿಲ್ಲವೆಂದು ಶಾಸಕರು ಕಳವಳ ವ್ಯಕ್ತಪಡಿಸಿದ್ದಾರೆ.

**ಸಚಿವರ ಮೇಲಿದೆ ಜವಾಬ್ದಾರಿ**

**ಕುಡಿಯುವ ನೀರಿನ ಯೋಜನೆಯೇ ಅಥವಾ ನೀರಾವರಿ ಯೋಜನೆಯೇ ಎಂಬ ಮಹತ್ವದ ಪ್ರಶ್ನೆಯನ್ನು ಕೇಂದ್ರ ತಂಡ ಎತ್ತಿದೆ. ಈ ಎಲ್ಲಾ ಅನುಮಾನಗಳನ್ನು ಸಾಧ್ಯವಾದಷ್ಟು ಶೀಘ್ರವಾಗಿ ಬಗೆಹರಿಸುವ ಜವಾಬ್ದಾರಿ ನೀರಾವರಿ ಸಚಿವರ ಮೇಲಿದೆ. ಸಂಬಂಧಪಟ್ಟ ಜಿಲ್ಲೆಗಳ ಸಚಿವರ ಮೇಲೆಯೂ ಇದೆ. ನಾವು ವಿರೋಧ ಪಕ್ಷದಲ್ಲಿಇರುವ ಶಾಸಕರು ಈ ಎಲ್ಲಾ ಅನುಮಾನಗಳನ್ನು ಪರಿಹರಿಸುವ ದಿಸೆಯಲ್ಲಿರಾಜ್ಯ ಸರಕಾರದ ಜತೆಗೆ ಸಂಪೂರ್ಣವಾಗಿ ಸಹಕರಿಸಲು ಸಿದ್ಧರಿದ್ದೇವೆಂದು ಹೇಳಿಕೆ ನೀಡಿದ್ದಾರೆ.**

**ಮಂಜೂರು ಮಾಡಿದ್ದಕ್ಕಿಂತ ಹೆಚ್ಚಿನ ಜಮೀನನ್ನು ಯೋಜನೆಗೆ ಬಳಸಿರುವುದು, ಅವಶೇಷ ಸುರಿಯುವುದಕ್ಕಾಗಿಯೇ 103 ಹೆಕ್ಟೇರ್ ಭೂಮಿಯನ್ನು ಬಳಸಿರುವುದು, ಅರಣ್ಯ ಬಳಕೆಗೆ ಇಲಾಖೆ ನೀಡಿದ್ದ ಎಲ್ಲಾ ಷರತ್ತುಗಳನ್ನು ಉಲ್ಲಂಘಿಸಿರುವುದನ್ನು ನೋಡಿದರೆ ಜಲಸಂಪನ್ಮೂಲ ಇಲಾಖೆಯ ಅಧಿಕಾರಿಗಳಿಗೆ ಇಂಥ ಸೂಕ್ಷ್ಮ ಯೋಜನೆಗಳನ್ನು ನಿರ್ವಹಿಸುವ ಪರಿಣತಿಯೇ ಇಲ್ಲವೇ ಎಂಬ ಅನುಮಾನ ಉಂಟಾಗುತ್ತದೆ. ರಾಜ್ಯ ಸರಕಾರದ ತಾತ್ಸಾರದ ಧೋರಣೆಯನ್ನು ಸಹಿಸಲು ಆಗದು.**

# ರೇಣುಕಮ್ಮರನ್ನು ಬಮೂಲ್ ಚುನಾವಣೆಯಲ್ಲಿ ಗೆಲ್ಲಿಸಲು ಕರೆ

• **ಉದಯವಾಹಿನಿ, ರಾಮನಗರ**

ಬಮೂಲ್ ಚುನಾವಣೆ ಪಕ್ಷದ ಗೌರವ ಹಾಗೂ ಪ್ರತಿಷ್ಠೆಯ ಪ್ರಶ್ನೆಯಾಗಿದ್ದು, ಜೆಡಿಎಸ್‌ನ ಎಲ್ಲಾ ಕಾರ್ಯಕರ್ತರು ಮತ್ತು ಮುಖಂಡರು ಒಗ್ಗೂಡಿ ಕೆಲಸ ಮಾಡುವ ಮೂಲಕ ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸಬೇಕು ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಕರೆ ನೀಡಿದರು. ಇಲ್ಲಿನ ಜೇನುಕಲ್ಲು ರೆಸಾರ್ಟ್‌ನಲ್ಲಿ ಬಮೂಲ್ ಚುನಾವಣೆ ಹಿನ್ನೆಲೆಯಲ್ಲಿ ತಾಲ್ಲೂಕಿನ ಹಾಲು ಉತ್ಪಾದಕರ ಸಹಕಾರ ಸಂಘಗಳ ಅಧ್ಯಕ್ಷರು, ನಿರ್ದೇಶಕರು, ಪಕ್ಷದ ಮುಖಂಡರ ಸಭೆ ನಡೆಸಿದ ಅವರು, ಪಕ್ಷದ ಕಾರ್ಯಕರ್ತರ ಒಕ್ಕೊರಲ ತೀರ್ಮಾನದ ಮೇಲೆ ರೇಣುಕಮ್ಮ ಅವರನ್ನು ಅಭ್ಯರ್ಥಿಯಾಗಿ ನಮ್ಮ ಪಕ್ಷದಿಂದ ಆಯ್ಕೆ ಮಾಡಿದ್ದು, ಅವರ ಗೆಲುವಿಗೆ ಎಲ್ಲರೂ ಒಗ್ಗೂಡಿ ಶ್ರಮಿಸೋಣ ಎಂದರು.

**ಪಿ.ನಾಗರಾಜು ಏನೂ ಕೆಲಸ ಮಾಡಿಲ್ಲ:** ತಾಲ್ಲೂಕಿನಿಂದ 6 ಬಾರಿ ಬೆಂಗಳೂರು ಹಾಲು ಒಕ್ಕೂಟದ ನಿರ್ದೇಶಕರಾಗಿ ಆಯ್ಕೆಯಾಗುವ ಮೂಲಕ ಎಲ್ಲಾ


ಉದಯವಾಹಿನಿ ಚಿತ್ರ

ಅಧಿಕಾರವನ್ನು ಪಿ.ನಾಗರಾಜು ಅನುಭವಿಸಿದ್ದಾರಾದರೂ, ತಾಲ್ಲೂಕಿನಲ್ಲಿ ಹೈನುಗಾರಿಕೆ ಅಭಿವೃದ್ಧಿಗೆ ಅವರು ಸಮರ್ಪಕ ಕೆಲಸ ಮಾಡಿಲ್ಲ. ಅಧಿಕಾರಕ್ಕಾಗಿ ಪಕ್ಷದಿಂದ ಪಕ್ಷಕ್ಕೆ ಹಾರುವ ವ್ಯಕ್ತಿ ಎಂದು ಲೇವಡಿ ಮಾಡಿದರು.

ಈ ಚುನಾವಣೆ ಪಕ್ಷದ ಚಿಹ್ನೆಯಡಿ ನಡೆಯುವುದಿಲ್ಲವಾದರೂ ನಮ್ಮ ಪಕ್ಷದ ಎಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ನಿರ್ದೇಶಕರು ರೇಣುಕಮ್ಮ ಅವರಿಗೆ ಮತ ಹಾಕಲು ಶ್ರಮಿಸಬೇಕು. ಇದರೊಂದಿಗೆ ಉಳಿದ ಸಂಘಗಳಿಂದ ಮತದಾನದ ಹಕ್ಕು ಪಡೆದ ವ್ಯಕ್ತಿಗಳಿಗೆ ಮನವರಿಕೆ ಮಾಡಿಕೊಟ್ಟು ನಮ್ಮ ಅಭ್ಯರ್ಥಿಗೆ ಮತ ಹಾಕುವಂತೆ ಮನವೊಲಿಸುವ ಕೆಲಸ ಮಾಡಬೇಕೆಂದು ತಿಳಿಸಿದರು.

ಸಭೆಯಲ್ಲಿ ಮಾಗಡಿ ಮಾಜಿ ಶಾಸಕ ಎ. ಮಂಜುನಾಥ್ ತಾಲ್ಲೂಕಿನ ನಾಲ್ಕು ಹೋಬಳಿಯ ಹಾಲು ಉತ್ಪಾದಕರ ಸಂಘದ ಅಧ್ಯಕ್ಷರು, ನಿರ್ದೇಶಕರು ಪಾಲ್ಗೊಂಡಿದ್ದರು. ರಾಮನಗರ ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಸಬ್ಬಗೆರೆ ಶಿವಲಿಂಗಪ್ಪ, ಬಮೂಲ್ ಅಭ್ಯರ್ಥಿ ರೇಣುಕಮ್ಮ ಕೆಂಪಣ್ಣ, ಮುಖಂಡರಾದ ಶಿವಣ್ಣ, ನರಸಿಂಹಮೂರ್ತಿ, ಅಶ್ವಥ್, ಶೇಷಪ್ಪ, ಚಿಕ್ಕಣ್ಣ, ಉಮೇಶ್, ರವಿ, ಭರತ್ ಕೆಂಪಣ್ಣ, ಕೃಷಿಕ ಸಮಾಜದ ಗೋಪಾಲ್, ಚಂದ್ರು ಇದ್ದರು.

# ಧರ್ಮ ಭಾಷೆ ಮೀರಿದ ಉಗ್ರರ ವಿರುದ್ಧ ಹೋರಾಟ ಅಗತ್ಯ

• **ಉದಯವಾಹಿನಿ, ಶಿಡ್ಲಘಟ್ಟ**

ಜಮ್ಮು, ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಪ್ರವಾಸಿ ಹಿಂದೂಗಳ ಮೇಲೆ ನಡೆದ ಭೀಕರ ದಾಳಿಯನ್ನು ತೀವ್ರವಾಗಿ ಖಂಡಿಸುವುದರ ಮೂಲಕ ಈ ಪೈಶಾಚಿಕ ಕೃತ್ಯವನ್ನು ಕೇವಲ ಉಗ್ರದಾಳಿ, ಬದಲಿಗೆ ಹಿಂದೂ ಧರ್ಮವನ್ನು ಗುರಿಯಾಗಿಸಿಕೊಂಡು ತಂತ್ರದಿಂದ ರೂಪುಗೊಂಡ ಪೈಶಾಚಿಕ ಕ್ರೌರ್ಯ ಮೆರೆದಿದ್ದಾರೆ ಎಂದು ಭಾರತೀಯ ಜನತಾ ಪಕ್ಷದ ಹಿರಿಯ ಮುಖಂಡರಾದ ಸೀಕಲ್ ರಾಮಚಂದ್ರಗೌಡರು ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಇಡೀ ಜಗತ್ತು ಜಾತಿ, ಧರ್ಮ, ಭಾಷೆ, ರಾಷ್ಟ್ರಗಳ ಗಡಿಗಳನ್ನು ಮೀರಿ ಈ ಕೃತ್ಯವನ್ನು ಖಂಡಿಸಬೇಕು. ಉಗ್ರರನ್ನು ಬೇರು ಸಮೇತ ಕಿತ್ತು ಹಾಕುವ ಪ್ರಾಮಾಣಿಕ ಜಾಗತಿಕ ಪ್ರಯತ್ನ ತುರ್ತು ಅಗತ್ಯವಾಗಿದೆ ಎಂದು ಅವರು ಒತ್ತಾಯಿಸಿದರು.

ಇಂತಹ ದುರಂತದ ಸಂದರ್ಭಗಳಲ್ಲಿ ಯಾರೂ ರಾಜಕೀಯ ಲಾಭವನ್ನು ಹುಡುಕಬಾರದು. ಉಗ್ರತೆ ಯನ್ನು ಖಂಡಿಸುವುದರ ಜತೆಗೆ ಕೇಂದ್ರ ಸರಕಾರಕ್ಕೆ ನೈತಿಕ ಬೆಂಬಲ ನೀಡುವ ಮೂಲಕ ರಾಷ್ಟ್ರದ ಹಿತಕ್ಕಾಗಿ ಎಲ್ಲರೂ ಒಂದಾಗಿ ನಿಲ್ಲಬೇಕಾಗಿದೆ, ಇದರ ಮಧ್ಯೆ ಭದ್ರತಾ ವೈಫಲ್ಯ, ಆಂತರಿಕ ಬೇಧಭಾವ ಇತ್ಯಾದಿ ಕಾರಣಗಳನ್ನು ಉಲ್ಲೇಖಿಸಿದರೂ


ಉದಯವಾಹಿನಿ ಚಿತ್ರ

ಇಂತಹ ಸಂದರ್ಭದಲ್ಲಿ ಕಾರಣ ಹುಡುಕುವುದರಲ್ಲಿ ಕಾಲ ಕಳೆಯುವ ಬದಲು ರಾಷ್ಟ್ರದ ಭದ್ರತೆ, ಐಕ್ಯತೆ, ಭಾರತೀಯರ ಭವಿಷ್ಯವನ್ನು ಕಾಪಾಡುವ ಮೇಲೆ ಗಮನ ಹರಿಸಬೇಕಿದೆ ಎಂದು ಎಚ್ಚರಿಸಿದರು.

ಈ ದೇಶದ ಪ್ರಧಾನಿ ನರೇಂದ್ರ ಮೋದಿಯವರ ದೃಢ ನಾಯಕತ್ವವು ಶಕ್ತಿಶಾಲಿಯಾಗಿ, ಧೈರ್ಯವಾಗಿ, ದೂರದೃಷ್ಟಿಯೊಂದಿಗೆ ಈ ಬಿಕ್ಕಟ್ಟಿನ ಸ್ಥಿತಿಯನ್ನು ನಿಭಾಯಿಸುತ್ತಿದ್ದು, ಭಾರತದ ಭವಿಷ್ಯವನ್ನು ಸುರಕ್ಷಿತಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದಾರೆ. ಅವರು ಭಾರತವನ್ನು ಉಗ್ರರ ಸಂತತಿಯಿಲ್ಲದ ವಿಶ್ವಗುರು ವಾಗಿ ಸ್ಥಾಪಿಸಬೇಕೆಂದು ನಾವು ಆಶಿಸುತ್ತೇವೆ, ಭಾರತದ ಹಿತಕ್ಕಾಗಿ ಭದ್ರತೆ, ಮುಂದಿನ ಭವಿಷ್ಯಕ್ಕಾಗಿ ನಾವು ನೀವೆಲ್ಲರೂ ನಿಂತು ಉಗ್ರತೆಯ ವಿರುದ್ಧ ಸಮರ ಸಾರಬೇಕಾಗಿದೆ ಎಂದು ಜನತೆಗೆ ಉತ್ತಮ ಸಂದೇಶ ಸಾರಿದರು.

# ಹಿಂದೂ ಸಂಘಟನೆಗಳ ಪಂಜಿನ ಮೆರವಣಿಗೆ

• **ಉದಯವಾಹಿನಿ, ಚಿಕ್ಕಬಳ್ಳಾಪುರ**

ಇತ್ತೀಚೆಗೆ ಕಾಶ್ಮೀರದ ಪೆಹಲ್ಗಾಮ್‌ನಲ್ಲಿ ನಡೆಸಿದ ಭಯೋತ್ಪಾದಕ ದಾಳಿಯನ್ನು ಖಂಡಿಸಿ ಹಿಂದೂ ಸಂಘಟನೆಗಳು ಪಂಜಿನ ಮೆರವಣಿಗೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು. ನಗರದ ಟೌನ್ ಹಾಲ್ ವೃತ್ತದಿಂದ ಪ್ರಾರಂಭವಾದ ಪಂಜಿನ ಮೆರವಣಿಗೆ ಗಂಗಮ್ಮ ಗುಡಿ ರಸ್ತೆ ಬಜಾರ್ ರಸ್ತೆ ಎಂಜಿ ರಸ್ತೆ ಮಾರ್ಗವಾಗಿ ಶಿಡ್ಲಘಟ್ಟ ವೃತ್ತದಲ್ಲಿ ನೂರಾರು ಸಂಖ್ಯೆಯಲ್ಲಿ ಜಮಾವಣೆಗೊಂಡು ರಸ್ತೆ ತಡೆ ನಡೆಸುವ ಮೂಲಕ ತಮ್ಮ ಆಕ್ರೋಶವನ್ನು ಹೊರಹಾಕಿದರು.

ಮೆರವಣಿಗೆ ಉದ್ದಕ್ಕೂ ಹಿಂದೂ ಸಂಘಟನೆಗಳ ಕಾರ್ಯಕರ್ತರು ಪಾಕಿಸ್ತಾನದ ಕೃತ್ಯವನ್ನು ಖಂಡಿಸಿ ಭಾರತ್ ಮಾತಾ ಕಿ ಜೈ ಘೋಷಣೆಗಳನ್ನು ಮೊಳಗಿಸಿದರು. ಈ ವೇಳೆ ಮಾತನಾಡಿದ ಭಗತ್ ಸಿಂಗ್ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಹಾಗೂ ಬಿಜೆಪಿ ಮುಖಂಡ ಸಂದೀಪ್ ರೆಡ್ಡಿ ಫಸಲ್ಗಾಮ್ ನಲ್ಲಿ ಪಾಕಿಸ್ತಾನ ಉಗ್ರರು ಭಾರತದ ಪ್ರವಾಸಿಗರ ಮೇಲೆ ನಡೆಸಿರುವ ಅಟ್ಟಹಾಸಕ್ಕೆ ನನ್ನ ಖಂಡನೇ ಇದೆ. ಇದೊಂದು ಹೇಡಿಗಳ ಕೃತ್ಯವಾಗಿದೆ.


ಉದಯವಾಹಿನಿ ಚಿತ್ರ

ಅಭಿವೃದ್ಧಿಯ ಮೂಲಕ ಭಾರತವನ್ನು ಎದುರಿಸಲಾಗದ ಪಾಕಿಸ್ತಾನ ಉಗ್ರರನ್ನು ಛೂ ಬಿಟ್ಟು ವಿಕೃತ ಆನಂದ ಪಡುತ್ತಿದೆ. ಭಾರತವು ಇದಕ್ಕೆ ತಕ್ಕ ಪ್ರತ್ಯುತ್ತರ ನೀಡಲಿದೆ ಎಂಬುದನ್ನು ಪಾಕಿಸ್ತಾನ ಮರೆತಂತಿದೆ. ಅತಿ ಶೀಘ್ರದಲ್ಲೇ ಉಗ್ರರ ಹೆಡೆಮುರಿ ಕಟ್ಟುತ್ತೇವೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಭಾರತವು ವಿಶ್ವಗುರುವಾಗುತ್ತಾ ಸಾಗುತ್ತಿರುವುದನ್ನು ಸಹಿಸಿಕೊಳ್ಳಲಾಗದ ಪಾಕಿಸ್ತಾನ ಉಗ್ರರಿಗೆ ಬೆಂಬಲ ನೀಡುತ್ತಾ ಶಾಂತಿಯ ಬೀಡಾಗಿರುವ ಜಮ್ಮು ಮತ್ತು ಕಾಶ್ಮೀರದಲ್ಲಿ ಅಶಾಂತಿಯನ್ನು ಉಂಟುಮಾಡಲು ಪ್ರಯತ್ನಿಸಿದೆ. ಭಾರತದ ಗೃಹ ಸಚಿವರು, ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಭಾರತ ಸರ್ಕಾರ ಇದಕ್ಕೆ ತಕ್ಕ ಶಿಕ್ಷೆ ನೀಡುವ ದಿನಗಳು ದೂರವಿಲ್ಲ ಎಂದರು.

# ಪರಿಸರ ಮಾಲಿನ್ಯದ ವಿರುದ್ಧ ಕ್ರಮ ಕೈಗೊಳ್ಳದಿದ್ದರೆ ಪ್ರತಿಭಟನೆ

• **ಉದಯವಾಹಿನಿ, ಕೋಲಾರ**

ಟಮಕ ಇಂಡಸ್ಟ್ರಿಯಲ್ ಏರಿಯಾದಲ್ಲಿ ಪ್ಲಾಸ್ಟಿಕ್ ತಯಾರಿಸುವ ಕಾರ್ಖಾನೆಗಳಿಂದ ಆಗುತ್ತಿರುವ ಪರಿಸರ ಮಾಲಿನ್ಯದ ಬಗ್ಗೆ ಎರಡು ತಿಂಗಳ ಹಿಂದೆ ದೂರು ನೀಡಿದ್ದರೂ ಪರಿಸರ ಅಧಿಕಾರಿಗಳು ಕ್ರಮ ಕೈಗೊಳ್ಳದೆ ಮೀನಮೇಷ ಎಣಿಸುತ್ತಿದ್ದಾರೆ ಎಂದು ಕರ್ನಾಟಕ ಮಾನವ ಹಕ್ಕುಗಳ ಸಮಿತಿಯ ಆರೋಪಿಸಿದೆ. ಇಂದು ಮನುಷ್ಯ, ಪ್ರಾಣಿ ಮತ್ತು ಪಕ್ಷಿಗಳ ಮೇಲೆ ಪ್ಲಾಸ್ಟಿಕ್‌ನಿಂದ ಆಗುತ್ತಿರುವ ದುಷ್ಪರಿಣಾಮಗಳು ಹೆಚ್ಚಾಗುತ್ತಿವೆ. ಇವುಗಳಲ್ಲಿ ಮಕ್ಕಳ ಎಲುಬುಗಳನ್ನು ನಿರೂಪ ಗೊಳಿಸಬಲ್ಲ ವಿಷಕಾರಿ ವಸ್ತುಗಳಿವೆ. ಇವು ವಿವಿಧ ಬಗೆಯ ಕ್ಯಾನ್ಸರ್ ರೋಗಕ್ಕೆ ಕಾರಣವಾಗಬಹುದಾದ ನರಮಂಡಲಕ್ಕೆ ಧಕ್ಕೆ ಉಂಟು ಮಾಡಿ ಮೆದುಳು ಮತ್ತು ಕಣ್ಣುಗಳಿಗೆ ಹಾನಿ ಉಂಟು ಮಾಡುತ್ತವೆ. ಅದಲ್ಲದೆ ಚರ್ಮಕ್ಕೆ ತೊಂದರೆ ಪ್ಲಾಸ್ಟಿಕ್ ಅಂಶ ದೇಹಕ್ಕೆ ಸೇರಿಕೊಂಡಲ್ಲಿ ಮಕ್ಕಳ ಬೆಳವಣಿಗೆಗೆ ತೊಂದರೆ, ಉಸಿರಾಟದ ತೊಂದರೆ, ತಲೆನೋವು ಮುಂತಾದ ತೊಂದರೆಗಳನ್ನು ಉಂಟು ಮಾಡುತ್ತದೆ. ಈ ಎಲ್ಲಾ


ಉದಯವಾಹಿನಿ ಚಿತ್ರ

ದುಷ್ಪರಿಣಾಮಗಳು ಪ್ಲಾಸ್ಟಿಕ್‌ನಿಂದ ಆಗುತ್ತವೆಂದು ತಿಳಿದರೂ ಸಹ ಟಮಕ ಇಂಡಸ್ಟ್ರಿಯಲ್ ಪ್ಲಾಸ್ಟಿಕ್ ಕಾರ್ಖಾನೆಯವರು ತಮ್ಮ ಕಾರ್ಖಾನೆಯ ಮುಂದೆ ರಾಶಿ ರಾಶಿಯಾಗಿ ಪ್ಲಾಸ್ಟಿಕ್‌ನ್ನು ಸುರಿದು, ಉಳಿದ ಪ್ಲಾಸ್ಟಿಕನ್ನು ತಮ್ಮ ಕಾರ್ಖಾನೆಯ ಮುಂದೆ ಸುಟ್ಟು ಹಾಕುತ್ತಿದ್ದಾರೆ. ಇದು ಗಾಳಿಯಲ್ಲಿ ಸೇರಿಕೊಂಡು ಮನುಷ್ಯ, ಪ್ರಾಣಿ ಮತ್ತು ಪಕ್ಷಿಗಳ ಮೇಲೆ ದುಷ್ಪರಿಣಾಮಗಳನ್ನು ಉಂಟಾಗುತ್ತಿವೆ.

ಆದುದ್ದರಿಂದ ತಾವುಗಳು ಸ್ಥಳ ಪರಿಶೀಲನೆ ಮಾಡಿ ಪ್ಲಾಸ್ಟಿಕ್ ಕಾರ್ಖಾನೆ ಮಾಲೀಕರ ವಿರುದ್ಧ ಕಾನೂನು ರೀತಿ ಕ್ರಿಮಿನಲ್ ಮೊಕದಮ್ಮೆ ದಾಖಲಿಸಿ ಕಾರ್ಖಾನೆಯ ಪರವಾನಿಗೆಯನ್ನು ರದ್ದು ಮಾಡಿ, ಪರಿಸರ ಮಾಲಿನ್ಯವಾಗದಂತೆ ಮತ್ತು ಮಾನವ, ಪ್ರಾಣಿ, ಪಕ್ಷಿಗಳ ಹಕ್ಕುಗಳನ್ನು ಸಂರಕ್ಷಣೆ ಮಾಡಬೇಕಾಗಿ ಎರಡು ತಿಂಗಳ ಹಿಂದೆ ದೂರು ನೀಡಿರುವುದು ಸರಿಯಷ್ಟೇ. ಆದರೆ ಮಾನ್ಯ ಕೋಲಾರ ಜಿಲ್ಲಾ ಪರಿಸರ ಅಧಿಕಾರಿಗಳು ಇದರ ಬಗ್ಗೆ ಬರಿ ನೋಟಿಸ್‌ಗಳನ್ನು ನೀಡಿ ಕಾಲ ಹರಣ ಮಾಡುತ್ತಿರುವುದು ನೋಡಿದರೆ ತಡೆಗಟ್ಟಬೇಕಾದ ಅಧಿಕಾರಿಗಳೇ ಕಾರ್ಖಾನೆ ಅವರ ಜೊತೆ ಸೇರಿ ಕೊಂಡಿದ್ದಾರೆ ಎಂದು ಅನುಮಾನ ಉಂಟಾಗುತ್ತಿದೆ ಇದರಿಂದ ಆಗುತ್ತಿರುವ ದುಷ್ಪರಿಣಾಮಗಳಿಗೆ ನೇರ ಹೊಣೆ ಈ ಅಧಿಕಾರಿಗಳೇ ಆಗಿರುತ್ತಾರೆ.

ಈ ಕೂಡಲೇ ಈ ಕಾರ್ಖಾನೆಗಳ ವಿರುದ್ಧ ಕಾನೂನು ರೀತಿ ಕ್ರಮ ಕೈಗೊಳ್ಳ ದಿದ್ದರೆ ತಮ್ಮ ಇಲಾಖೆಯ ಮುಂದೆ ಹೋರಾಟ ಮಾಡುವುದಾಗಿ ಎಚ್ಚರಿಕೆಯನ್ನು ನೀಡಿ ದ್ದಾರೆ. ನಿಯೋಗದಲ್ಲಿ ಕರ್ನಾಟಕ ಮಾನವ ಹಕ್ಕುಗಳ ಸಮಿತಿಯ ರಾಜ್ಯಾಧ್ಯಕ್ಷ ಗಲ್ಲಪೇಟೆ ಕೆಸಿ ಸಂತೋಷ್, ಕೋಲಾರ ಜಿಲ್ಲಾಧ್ಯಕ್ಷ ಟಮಕ ಶ್ರೀನಾಥ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

## ಬೆಂಗಳೂರು 2ನೇ ಏರ್ಪೋರ್ಟ್ ಸರ್ವೆ– ಮಾಗಡಿಯ ಸೋಲೂರಿನ 19 ಹಳ್ಳಿಗಳ ಮೇಲೆ ಚೌಕಾಕಾರದ ಗುರುತು ರೈತರ ವಿರೋಧ

# ಹಸಿರು ಪೀಠಕ್ಕೂ ಅರ್ಜಿ ಹಾಕಲು ರೈತರ ಸಿದ್ಧತೆ

• **ಉದಯವಾಹಿನಿ, ಮಾಗಡಿ**

ಬೆಂಗಳೂರು ವಿಮಾನ ನಿಲ್ದಾಣದ ವಿಸ್ತರಣೆಗೆ ರೈತರ ಜಮೀನುಗಳ ಮೇಲೆ ನಿತ್ಯ ಹಾರಾಡುತ್ತಿರುವ ಡ್ರೋನ್ ಸರ್ವೆಯಿಂದ ಬೇಸತ್ತಿರುವ ಸೋಲೂರು ಹೋಬಳಿ ರೈತರೀಗ ಹುಟ್ಟೂರು ಹಾಗೂ ಅನ್ನ ನೀಡುವ ಭೂಮಿ ಉಳಿಸಲು ಪ್ರತಿಭಟನೆ ಹಾದಿಗೆ ಮುಂದಾಗಿದ್ದಾರೆ.

ಸೋಲೂರು ಭಾಗದ ಹಳ್ಳಿಗಳ ಮೇಲೆ ಅಧಿಕಾರಿಗಳ ತಂಡ ನಿತ್ಯ ಡ್ರೋನ್ ಹಾರಿಸಿ ಹಾಕುತ್ತಿರುವ ಚೌಕಾಕಾರದ ಬಿಳಿ ಬಣ್ಣದ ಗುರುತು ರೈತರೆದೆಯಲ್ಲಿ ತಲ್ಲಣ ಮೂಡಿಸುತ್ತಿದೆ. ಮೋಟಗಾನಹಳ್ಳಿ ಪಂಚಾಯಿತಿ ಸಮೀಪ ಬಸವೇನಹಳ್ಳಿ, ದಾಸೇಗೌಡನ ಪಾಳ್ಯದಲ್ಲಿ ರೈತರು, ಪ್ರಮುಖ ಸ್ಥಳೀಯ ನಾಯಕರು ಸಭೆ ನಡೆಸಿ ವಿಮಾನ ನಿಲ್ದಾಣ ಯೋಜನೆ ಕೈಬಿಡುವಂತೆ ಸರಕಾರಕ್ಕೆ ಯಾವ ರೀತಿಯಲ್ಲಿ ಮನವರಿಕೆ ಮಾಡಿಕೊಡಬೇಕೆಂದು ಮಾತುಕತೆ ನಡೆಸಿದ್ದಾರೆ.

**19 ಹಳ್ಳಿಗಳ ಮೇಲೆ ಚೌಕಾಕಾರದ ಗುರುತು:** ಅಧಿಕಾರಿಗಳು ಸರ್ವೆ ನಡೆಸಿ ಚೌಕಾಕಾರದ ಗುರುತು ಹಾಕಿರುವ ಚೌಕಟ್ಟಿನೊಳಗೆ ಮಾಗಡಿಯ ಮೋಟಗಾನಹಳ್ಳಿ ಗ್ರಾಮ ಪಂಚಾಯಿತಿಯ ಕಾಟನಪಾಳ್ಯ, ಶ್ರೀರಾಮಪುರ ಕಾಲೊನಿ, ಪೆಮ್ಮನಹಳ್ಳಿ, ಬಸವನಹಳ್ಳಿ, ಗೆಜ್ಜೆಗಲ್ ಪಾಳ್ಯ, ಕಂಬೇಗೌಡನ ಪಾಳ್ಯ, ಕೋಡಿಹಳ್ಳಿ, ತಿರುಮಲಾಪುರ, ಹೊನ್ನಯ್ಯನಪಾಳ್ಯ, ಬೆಟ್ಟಯ್ಯನಪಾಳ್ಯ, ಪುಟ್ಟಯ್ಯನ ಪಾಳ್ಯ. ಗುಡೆಮಾರನಹಳ್ಳಿ ಗ್ರಾಪಂ ವ್ಯಾಪ್ತಿಗೆ ಸೇರುವ ದಾಸೇಗೌಡನ ಪಾಳ್ಯ, ನಾಗನಹಳ್ಳಿ, ಹಕ್ಕಿನಾಳು ಕಾಲೊನಿ, ಶೆಟ್ಟಿಪಾಳ್ಯ, ಗರ್ಗೇಶಪುರ, ಬಾಳಯ್ಯನಪಾಳ್ಯ, ಸುತ್ತೆಹಳ್ಳಿ ಪಾಳ್ಯ, ಲಕ್ಕೇನಹಳ್ಳಿ ಗ್ರಾಪಂ ವ್ಯಾಪ್ತಿಗೆ ಬರುವ ಮರಿಕುಪ್ಪೆ, ಕೆಂಪಚಿಕ್ಕನಹಳ್ಳಿ, ಮಾಗಡ ರಂಗಯ್ಯನ ಪಾಳ್ಯ ಸೇರಿವೆ.

**ನಿಲುವಳಿ ಮಂಡನೆಗೆ ಮುಂದು:** ಸರ್ವೆಯಲ್ಲಿ ಗುಡೆಮಾರನಹಳ್ಳಿ, ಲಕ್ಕೇನಹಳ್ಳಿ, ಮೋಟಗಾನಹಳ್ಳಿ ಮೂರು ಪಂಚಾಯಿತಿ ವ್ಯಾಪ್ತಿಗೆ ಅಧಿಕ ಹಳ್ಳಿಗಳು ಬರುವುದರಿಂದ ಮೂರು ಪಂಚಾಯಿತಿಗಳಲ್ಲಿಯೂ ವಿಶೇಷ ಗ್ರಾಮ ಸಭೆ ಕರೆಸಿ ವಿಮಾನ ನಿಲ್ದಾಣ ಜಾಗ ಬದಲಾಯಿಸುವಂತೆ ಹಾಗೂ ಹಸಿರೀಕರಣ ಭಾಗವಾಗಿರುವುದರಿಂದ ಜಾಗ ನೀಡುವುದಿಲ್ಲ


ಉದಯವಾಹಿನಿ ಚಿತ್ರ

ಎಂಬ ನಿಲುವಳಿ ಮಂಡಿಸಿ ಸರಕಾರಕ್ಕೆ ಮನವಿ ಮಾಡಲು ನೀಡಲು ಮಾತುಕತೆಗಳನ್ನು ನಡೆಸಿದ್ದಾರೆ.

**ಕರಪತ್ರ ಹಂಚಿ ಹೋರಾಟಕ್ಕೆ ಸಿದ್ಧತೆ:** ರೈತರು, ಪರಿಸರವಾದಿಗಳು, ಸಾಮಾಜಿಕ ಕಳಕಳಿ ಹೊಂದಿರುವ ಹೋರಾಟಗಾರರನ್ನು ಮತ್ತು ಸ್ಥಳೀಯರನ್ನು ಹೋರಾಟಕ್ಕೆ ಸಿದ್ಧ ಮಾಡಲು ಈಗಾಗಲೇ ಕರಪತ್ರವನ್ನು ಹೊರಡಿಸಲಾಗಿದೆ. ರೈತರಿಗೆ ವಿಮಾನ ನಿಲ್ದಾಣದ ಯೋಜನೆ ವಿರುದ್ಧ, ಸರ್ವೆ ವಿರುದ್ಧ ಹೋರಾಟಕ್ಕೆ ಸಜ್ಜು ಮಾಡುವ ಕೆಲಸವೂ ಕೂಡ ಒಂದೆಡೆ ನಡೆಯುತ್ತಿದೆ.

**ಎಸ್‌ಆರ್ ಬೆಲೆ:** ಮೋಟಗನಹಳ್ಳಿ ಮತ್ತು ಬಸವನಹಳ್ಳಿ ಭಾಗದಲ್ಲಿ ಸರಕಾರದ ಎಸ್‌ಆರ್ ಬೆಲೆ ಎಕರೆಗೆ 15 ಲಕ್ಷ ರೂ. ಬೆಲೆ ಇದೆ. ಈ ಮೂಲಕ ಕೇಂದ್ರ ಅಥವಾ ರಾಜ್ಯ ಸರಕಾರ 1:3 ರ ಅನುಪಾತದಲ್ಲಿ ಹಣ ನೀಡಿದರು ರೈತರಿಗೆ ಏನೇನು ದಕ್ಕದು ಹಣವನ್ನು ಪಡೆದು ಮಾಡುವುದೇನು ನಿಮ್ಮ ಅಭಿವೃದ್ಧಿ ನಮಗೆ ಬೇಡ. ನಮ್ಮ ಬದುಕೆ ನಮಗೆ ಸಾಕು. ಈ ಜಾಗದಿಂದ ಮೊದಲು ಕಾಲು ತೆಗೆಯಿರಿ ಎಂಬ ಮಾತು ಇಲ್ಲಿನ ರೈತರದ್ದು.

**ಹಳ್ಳಿ ನಾಗರಿಕತೆ ನಶಿಸುವ ಭೀತಿಯಲ್ಲಿ:** ಸರಕರವೇನೊ 1894 ರ ಭೂಸ್ವಾಧೀನ ಕಾಯ್ದೆ ಪ್ರಕಾರ ಸರ್ವೆ ಮಾಡುತ್ತದೆ. ನೋಟಿಸ್ ನೀಡುತ್ತದೆ. ಒಂದು ವೇಳೆ ಜಮೀನು ನೀಡಲೇಬೇಕಾದ ಪ್ರಸಂಗ ಬಂದರೆ 10 ಸಾವಿರಕ್ಕೂ ಅಧಿಕ ಜನರು ನಿರಾಶ್ರಿತರಾಗಿ ಎಲ್ಲಿಗೆ ಹೋಗಬೇಕು 19 ಕ್ಕೂ ಹೆಚ್ಚು ಹಳ್ಳಿಗಳಲ್ಲಿ 15 ಹಾಲು ಡೇರಿ ಮೂಲಕ ಹೈನುಗಾರರು ಬದುಕು ಕಟ್ಟಿಕೊಂಡಿದ್ದಾರೆ. ಹೆಚ್ಚಾಗಿ ಈ ಪ್ರದೇಶದಲ್ಲಿ ಸರಕಾರಿ 10 ರಿಂದ 15 ಸಾವಿರ ರೈತರು ಬೆವರು ಸುರಿಸಿ ಮುಂದಿನ ತಲೆಮಾರಿಗೂ ಅನ್ನ ನೀಡಲಿ ಎಂದ ದೂರದೃಷ್ಟಿಯಿಂದ ತೆಂಗು, ಅಡಕೆ, ಮಾವು ತೋಟಗಾರಿಕೆ ಬೆಳೆ ಬೆಳೆಸಿದ್ದಾರೆ. ಅದು ಅಲ್ಲದೆ ರಾಗಿ, ತೊಗರಿ, ಅಲಸಂದೆ ಮುಂತಾದ ಸಾಂಪ್ರದಾಯಿಕ ಧಾನ್ಯಗಳನ್ನು ತಮ್ಮ ಭೂಮಿಯಲ್ಲಿ ಬೆಳೆದು ಹೊಟ್ಟೆಪಾಡು ನಡೆಸುತ್ತಿದ್ದಾರೆ. ಸರ್ವೆ ವ್ಯಾಪ್ತಿಯ ಒಳಗೆ ಹಳ್ಳಿ ಜನರು ಮನೆದೇವರಾಗಿಸಿಕೊಂಡು ಆರಾಧಿಸುತ್ತಿರುವ 50 ದೇಗುಲಗಳಿವೆ. ಸರಕಾರಿ ಶಾಲೆಗಳು, ಶ್ರೀಶಕ್ತಿ ಸಮುದಾಯ ಭವನಗಳು, ಕೆರೆ, ತೊರೆ, ಹಳ್ಳಿ ಹಾದಿಗಳು, ಪೂರ್ವಜರ ಸಮಾಧಿಗಳು, ಹಳ್ಳಿ ಜನರ ಬದುಕಿನುದ್ದಕ್ಕೂ ಜತೆಯಲ್ಲಿರುವ ಕುರಿ, ಮೇಕೆ, ಎಮ್ಮೆ, ಕೋಳಿ, ಹಸುಗಳಂತ ಜಾನುವಾರುಗಳು ಸೇರಿದಂತೆ ಸ್ಥಳೀಯ ಹಬ್ಬಗಳು ಹಾಗೂ ಹಳ್ಳಿಯ ಹೆಸರೇ ನಾಶವಾಗಿ ಸಂಪೂರ್ಣ ಹಳ್ಳಿ ನಾಗರಿಕತೆಯೇ ವಿಮಾನ ನಿಲ್ದಾಣ ಜಾಗಕ್ಕಾಗಿ ನಶಿಸುವ ಭೀತಿ ಜನರಲ್ಲಿ ಹುಟ್ಟಿದೆ.

**ರಾಷ್ಟ್ರೀಯ ಹಸಿರು ಪೀಠಕ್ಕೆ ಮೊರೆ**

**ಸಾವಿರಾರು ಕುಟುಂಬಗಳನ್ನು ಸಾಕುತ್ತಿರುವ ಕೃಷಿ ಭೂಮಿ ಮೇಲೆ ಸರಕಾರದ ಭೂಸ್ವಾಧೀನ ನೀತಿ ವಿರೋಧಿಸಿ ರಾಷ್ಟ್ರೀಯ ಹಸಿರು ಪೀಠಕ್ಕೆ ಕಾನೂನು ಸಲಹೆಗಾರರ ಸಹಕಾರದೊಂದಿಗೆ ಅರ್ಜಿ ಹಾಕಲು ಬಸವೇನಹಳ್ಳಿ, ದಾಸೇಗೌಡನ ಪಾಳ್ಯದಲ್ಲಿ ನಡೆದ ಸಭೆಯಲ್ಲಿ ತೀರ್ಮಾನ ಮಾಡಿದ್ದಾರೆ. ರೈತರು ಯಾವುದೇ ಕಾರಣಕ್ಕೂ ಹಣದ ಆಮಿಷಗಳಿಗೆ ಒಳಗಾಗದೆ ಕೃಷಿ ಭೂಮಿ ಹಾಗೂ ಹುಟ್ಟೂರು ಮನೆ, ದೇವಾಲಯ ಶಾಲೆ ಒಟ್ಟಾರೆ ಹಳ್ಳಿಗಳನ್ನು ಉಳಿಸಿಕೊಳ್ಳಲು ಕರೆ ನೀಡಿ ದಿಲ್ಲಿಯ ಹಸಿರು ಪೀಠಕ್ಕೂ ಅರ್ಜಿ ಸಲ್ಲಿಸಲು ಮಾತುಕತೆಗಳು ನಡೆದಿವೆ.**

**ಸರಕಾರ ಏರ್‌ಪೋರ್ಟ್ ಹೆಸರಿನಲ್ಲಿ ಹಳ್ಳಿಗಳ ಮೇಲೆ ಗದಾ ಪ್ರಹಾರ ಮಾಡಿದೆ. ಬೆಂಗಳೂರಿನಲ್ಲಿರುವ ದೇವನಹಳ್ಳಿ ಸಮೀಪದ ಜಾಗವನ್ನೇ ಸರ್ವೆ ಮಾಡಿ ವಿಸ್ತರಣೆ ಮಾಡಿಕೊಳ್ಳಬಹುದಲ್ಲವೇ. ಅಲ್ಲಿನ ಜನರಿಗೂ ಸರಕಾರ ದುಡ್ಡನ್ನೇ ತಾನೆ ಕೊಡೊದು**

**–ಬಿ.ಎಸ್ ಗಂಗಾಧರ್, ವಿಎಸ್‌ಎಸ್‌ಎನ್ ಅಧ್ಯಕ್ಷರು, ಬಸವೇನಹಳ್ಳಿ.**

**ಹುಟ್ಟ ಊರನ್ನು ಬಿಟ್ಟು ಎಲ್ಲಿಗೆ ಹೋಗಿ ಬದುಕಬೇಕು. ಒಟ್ಟಾಗಿ ರೈತರು ಪ್ರತಿಭಟನೆ ಮಾಡಿ ಭೂಮಿಯನ್ನು ಉಳಿಸಿಕೊಳ್ಳುತ್ತೇವೆ. ಸಚಿವರಿಂದ ಹಿಡಿದು ಶಾಸಕರು ಬರುವವರೆಗೂ ಧರಣಿ ಕೂರುತ್ತೇವೆ**

**–ಮಹೇಶ್, ಪ್ರಗತಿಪರ ರೈತ ಬಸವೇನಹಳ್ಳಿ.**


**ಉದಯವಾಹಿನಿ**

**ಪ್ರಾದೇಶಿಕ**

ಸೋಮವಾರ 28 ಏಪ್ರಿಲ್ 2025




## ಮಿನಿ ನ್ಯೂಸ್

### ಜೇನಿ ಕಂಪನಿ ಎಂ.ಡಿ ದಿಲೀಪ್ ಕುಮಾರ್ ವಿರುದ್ಧ ಲೈಂಗಿಕ ಕಿರುಕುಳ ಆರೋಪ

• **ಉದಯವಾಹಿನಿ, ತುಮಕೂರು**

ಜನಪ್ರಿಯ 'ಜೇನಿ' ಬ್ರಾಂಡ್ ಪೌಷ್ಠಿಕ ಆಹಾರದ ವ್ಯವಸ್ಥಾಪಕ ನಿರ್ದೇಶಕ ದಿಲೀಪ್ ಕುಮಾರ್ ವಿರುದ್ಧ ಮಹಿಳಾ ಉದ್ಯೋಗಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದ ಮೇಲೆ ತುಮಕೂರಿನ ಸಿರಾ ತಾಲ್ಲೂಕಿನ ಕಲ್ಲಂಬೆಲ್ಲಾ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಪೊಲೀಸ್ ದೂರಿನಲ್ಲಿ, ದಿಲೀಪ್ ಕುಮಾರ್ ಹಲವಾರು ತಿಂಗಳುಗಳಿಂದ ಅತ್ಯಾಚಾರ ನಡೆಸುತ್ತಿದ್ದರು. ಇತ್ತೀಚೆಗೆ ಯರ್‍ರಗುಂಟೆಯಲ್ಲಿರುವ ಕಾರ್ಖಾನೆಯ ಘಟಕದ ಶೆಡ್‌ನಲ್ಲಿ ತನ್ನ ಮೇಲೆ ಲೈಂಗಿಕ ದೌರ್ಜನ್ಯ ಎಸಗಲು ಪ್ರಯತ್ನಿಸಿದ್ದರು ಎಂದು ಮಹಿಳೆ ಆರೋಪಿಸಿದ್ದಾರೆ. ಪೊಲೀಸ್ ತಂಡ ಸ್ಥಳಕ್ಕೆ ಭೇಟಿ ನೀಡಿ ದೂರಿನ ನಂತರ, ರತ್ನಸಂದ್ರ ಗ್ರಾಮ ಪಂಚಾಯತ್ ಉಪಾಧ್ಯಕ್ಷರೂ ಆಗಿರುವ ದಿಲೀಪ್ ಕುಮಾರ್ ತಲೆಮರೆಸಿಕೊಂಡಿದ್ದಾರೆ. ನಂತರ ಈ ಬಗ್ಗೆ ಪತ್ರಿಕಾ ಪ್ರಕಟಣೆ ಹೊರಡಿಸಿರುವ ದಿಲೀಪ್ ಕುಮಾರ್, ನನ್ನ ರಾಜಕೀಯ ಪ್ರತಿಸ್ಪರ್ಧಿಗಳು ನನ್ನ ವಿರುದ್ಧ ಪಿತೂರಿ ನಡೆಸಿದ್ದಾರೆ, ಇದರಲ್ಲಿ ನಾನು ಜಯಿಸಿ ಬರುತ್ತೇನೆ ಎಂದಿದ್ದಾರೆ.

### ಶೆಟ್ಟಹಳ್ಳಿ ಕೆರೆಯಲ್ಲಿ ಕಾಲು ಜಾರಿ ಬಿದ್ದು ಅಪ್ಪ, ಮಗಳು ಸಾವು

• **ಉದಯವಾಹಿನಿ, ಶಿಡ್ಲಘಟ್ಟ**

ತಾಲ್ಲೂಕಿನ ಶೆಟ್ಟಹಳ್ಳಿ ಕೆರೆಯಲ್ಲಿ ಕೈಕಾಲು ತೊಳೆಯಲು ನೀರಿಗೆ ಇಳಿದ ಬಾಲಕಿ ಮೃತಪಟ್ಟಿದ್ದಾಳೆ. ಮಗಳ ರಕ್ಷಿಸಲು ಹೋದ ಅಪ್ಪ ಕೂಡ ನೀರಲ್ಲಿ ಮುಳುಗಿ ಮೃತಪಟ್ಟಿದ್ದಾರೆ. ಶೆಟ್ಟಹಳ್ಳಿ ಗ್ರಾಮದ ರೈತ ನಾಗೇಶ್ (48), ಮಗಳು ಧನುಶ್ರೀ(13) ಕೆರೆಯ ನೀರಲ್ಲಿ ಮುಳುಗಿ ಮೃತಪಟ್ಟವರು. ಶಾಲೆಗೆ ಬೇಸಿಗೆ ಕಾಲದ ರಜೆ ಇದ್ದ ಕಾರಣ ನಾಗೇಶ್ ಶುಕ್ರವಾರ ತನ್ನ ಮಗಳನ್ನು ತೋಟಕ್ಕೆ ಕರೆದುಕೊಂಡು ಹೋಗಿದ್ದರು. ಸಂಜೆ ವಾಪಸ್ ಬರುವ ವೇಳೆ ದಾರಿ ಪಕ್ಕದಲ್ಲೆ ಇದ್ದ ಕೆರೆ ನೀರಲ್ಲಿ ಕೈ ಕಾಲು ತೊಳೆಯಲು ಧನುಶ್ರೀ ನೀರಿಗೆ ಇಳಿದಿದ್ದಾಳೆ. ಕಾಲು ಜಾರಿ ನೀರಿಗೆ ಬಿದ್ದಿದ್ದಾರೆ. ಮುಳುಗುತ್ತಿದ್ದ ಮಗಳನ್ನು ರಕ್ಷಿಸಲು ನೀರಿಗೆ ಇಳಿದ ಅಪ್ಪ ಕೂಡ ಮಗಳೊಂದಿಗೆ ನೀರು ಪಾಲಾಗಿದ್ದಾನೆ ಎಂದು ಮೃತರ ಪುತ್ರ ಪೊಲೀಸ್ ಠಾಣೆಯಲ್ಲಿ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಸ್ಥಳಕ್ಕೆ ಗ್ರಾಮಾಂತರ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮೃತರ ಶವವನ್ನು ತಾಲ್ಲೂಕು ಕೇಂದ್ರದ ಸಾರ್ವಜನಿಕ ಆಸ್ಪತ್ರೆಗೆ ಕಳುಹಿಸಿ ಶವ ಪರೀಕ್ಷೆ ನಡೆಸಿ ಕುಟುಂಬದವರಿಗೆ ಹಸ್ತಾಂತರಿಸಲಾಗಿದೆ. ಶಾಸಕ ಬಿ.ಎನ್.ರವಿಕುಮಾರ್ ಅವರು ಆಸ್ಪತ್ರೆಗೆ ಭೇಟಿ ನೀಡಿ ಮೃತರ ಕುಟುಂಬದವರಿಗೆ ಸಾಂತ್ವನ ಹೇಳಿದರು.

### ಕೆರೆ ಕುಂಟೆ, ರಾಜಕಾಲುವೆ ಒತ್ತುವರಿ ತೆರವಿಗೆ ಆಗ್ರಹ

• **ಉದಯವಾಹಿನಿ, ಮಾಲೂರು**

ತಾಲ್ಲೂಕಿನಾದ್ಯಂತ ಕೆರೆ, ಕುಂಟೆ, ರಾಜಕಾಲುವೆಯನ್ನು ಭೂ ಮಾಫಿಯಗಳ ಒತ್ತುವರಿಯನ್ನು ತೆರವುಗೊಳಿಸಿ, ಸರಹದ್ದು, ಗುರುತಿಸಿ ಗಡಿ ನಿಗಧಿಪಡಿಸಲು ಒತ್ತಾಯಿಸಿ ಕರವೇ ಪ್ರವೀಣ್ ಕುಮಾರ್ ಶೆಟ್ಟಿ ಬಣ ಕಾರ್ಯಕರ್ತರು ತಹಶೀಲ್ದಾರ್ ಎಂ. ವಿ.ರೂಪರಿಗೆ ಮನವಿ ಸಲ್ಲಿಸಿದರು. ಪಟ್ಟಣದ ತಾಲ್ಲೂಕು ಕಚೇರಿ ಮುಂಭಾಗದಲ್ಲಿ ಕರವೇ ಕಾರ್ಯಕತ್ರರು ಜಮಾಯಿಸಿದ ಮನವಿ ಸಲ್ಲಿಸಿದರು. ಇತ್ತೀಚೆಗೆ ತಾಲ್ಲೂಕಿನಲ್ಲಿ ಭೂಮಿ ಬೆಲೆ ಗಗನಕ್ಕೆ ಏರಿದ್ದು, ಕಬಳಿಕೆದಾರರು ಉದ್ಯಮಿಗಳು ಕೆರೆ, ಕುಂಟೆ, ರಾಜಕಾಲುವೆಗಳನ್ನು ಮುಚ್ಚಿ ಅವರ ಅನುಕೂಲಕ್ಕೆ ತಕ್ಕಂತೆ ಮನೆಗಳನ್ನು, ನಿವೇಶನಗಳನ್ನು ಪರಿವರ್ತನೆ ಮಾಡಿಕೊಂಡು ನಿವೇಶನಗಳು ಲಕ್ಷಾಂತರ ರೂಪಾಯಿಗೆ ಮಾರಾಟ ಮಾಡುತಿದ್ದರು ಅಧಿಕಾರಿಗಳ ನಿರ್ಲಕ್ಷ್ಯದಿಂದ ಇದ್ದಾರೆ ಎಂದರು.

ಕೆಲವು ಅಧಿಕಾರಿವರ್ಗದವರೇ ಕೆರೆ, ರಾಜಕಾಲುವೆ, ಗೋ-ಕುಂಟೆ ದಾಖಲೆಗಳನ್ನು ಮಾಡಿಕೊಟ್ಟಿರುತ್ತಾರೆ. ಈ ರೀತಿಯಾಗಿ ಬದಲಾಗುತ್ತಿದ್ದರೆ ಮುಂದಿನ ಪೀಳಿಗೆಗೆ ಕೆರೆ, ಕುಂಟೆ, ರಾಜಕಾಲುವೆ, ಬರೀ ನಕ್ಷೆಯಲ್ಲಿ ಮಾತ್ರ ಉಳಿಯುತ್ತದೆ. ಅನೇಕ ಬಾರಿ ತಹಶೀಲ್ದಾರ್ ರವರಿಗೆ ಹೋರಾಟದ ಮುಖಾಂತರ ಕರ್ನಾಟಕ ರಕ್ಷಣಾ ವೇದಿಕೆ ಹಲವು ಬಾರಿ ಮನವಿ ನೀಡಿದ್ದು, ಇದುವರೆಗೂ ಅದರ ಬಗ್ಗೆ ಯಾವುದೇ ರೀತಿ ಕ್ರಮ ಕೈಗೊಂಡಿಲ್ಲ. ಮುಂದಿನ ದಿನಗಳಲ್ಲಿ ತಾಲ್ಲೂಕಿನ ಕೆರೆ, ಕುಂಟೆ ಉಳಿಸಿ ಎಂಬ ಉಗ್ರ ಹೋರಾಟವನ್ನು ಮಾಡಬೇಕಾಗುತ್ತದೆ. ಕೂಡಲೇ ತಾಲ್ಲೂಕು ಆಡಳಿತಾಧಿಕಾರಿಗಳು ಮತ್ತು ಇದಕ್ಕೆ ಸಂಬಂಧಪಟ್ಟಂತಹ ಇಲಾಖೆ ವರ್ಗದವರು ಸರ್ವೆ ಮಾಡಿ ಕೆರೆಗಳನ್ನು ಉಳಿಸುವಂತಹ ಕೆಲಸ ಮಾಡಬೇಕಾಗಿದೆ, ಇಲ್ಲದಿದ್ದಲ್ಲಿ ಮುಂದಿನ ದಿನಗಳಲ್ಲಿ ಜಿಲ್ಲಾಧಿಕಾರಿ ಕಛೇರಿ ಮುಂದೆ ಅನಿರ್ಧಿಷ ಕಾಲ ನಮ್ಮ ಸಂಘಟನೆ ವತಿಯಿಂದ ಚಳುವಳಿ ಮಾಡಬೇಕಾಗುತ್ತದೆ ಎಂದರು.

### ಶಾಸಕ ಸುಬ್ಬಾರೆಡ್ಡಿ ವಿರುದ್ಧ ಪ್ರತಿಭಟನೆ

• **ಉದಯವಾಹಿನಿ, ಬಾಗೇಪಲ್ಲಿ**

ತಾಲ್ಲೂಕಿನ ಪಾತಪಾಳ್ಯ ಪೊಲೀಸ್ ಠಾಣೆ ವ್ಯಾಪ್ತಿಯ ಶಿವಪುರ, ಗ್ಯಾದಿವಾಂಡ್ಲಪಲ್ಲಿ ಸುತ್ತಮುತ್ತಲಿನ ಗ್ರಾಮಗಳ ರೈತರು ಪಾತಪಾಳ್ಯ ಪೊಲೀಸ್ ಠಾಣೆ ಮುಂಭಾಗದಲ್ಲಿ ಜಮಾಯಿಸಿ ಶಾಸಕ ಸುಬ್ಬಾರೆಡ್ಡಿ ವಿರುದ್ದ ದಿಕ್ಕಾರಗಳು ಕೂಗಿ ಪ್ರತಿಭಟನೆ ನಡೆಸಿ ಹೋರಾಟಗಾರ ಡಾ.ಮುಧುಸೀತಪ್ಪ, ಶಾಂತರಾಜು ವಿರುದ್ದ ದಾಖಲು ಮಾಡಿರುವ ಸುಳ್ಳು ಅಟ್ರಾಸಿಟಿ ಕೇಸನ್ನು ವಾಪಸ್ಸು ಪಡೆದು ರೈತರಿಗೆ ಸೂಕ್ತ ಭದ್ರತೆ ಒದಗಿಸಿ ರೈತರ ಮೇಲೆ ಗೂಂಡಾಗಿರಿ ಮಾಡುತ್ತಿರುವ ವಕೀಲ ಚಂದ್ರಶೇಖರರೆಡ್ಡಿ, ಗಿರೀಶ್ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಿ ಕಾನೂನು ಸುವ್ಯವಸ್ಥೆ ಕಾಪಾಡಬೇಕೆಂದು ಪೊಲೀಸ್ ವೃತ್ತ ನಿರೀಕ್ಷಕ ಪಿ.ಆರ್.ಜನಾರ್ಧನ್‌ರನ್ನು ಒತ್ತಾಯಿಸಿದರು. ರೈತರ ಪ್ರತಿಭಟನೆ ನಂತರ ಚಿಕ್ಕಬಳ್ಳಾಪುರ ಪೊಲೀಸ್ ಡಿವೈಎಸ್ಪಿ ಶಿವಪುರ ಬಳಿಯಲ್ಲಿರುವ ಡಾ.ಮುಧುಸೀತಪ್ಪ ಫಾರ್ಮ್‌ಹೌಸ್‌ಗೆ ಭೇಟಿ ನೀಡಿ ಸಿಸಿ ಕ್ಯಾಮರ ದೃಶ್ಯಾವಳಿಗಳನ್ನು ಪರಿಶೀಲಿಸಿ ಘಟನೆ ಕುರಿತು ಮಾಹಿತಿ ಪಡೆದುಕೊಂಡಿರುತ್ತಾರೆ.


ಉದಯವಾಹಿನಿ ಚಿತ್ರ

ಶಿವಪುರ ಸೂರ್ಯನಾರಾಯಣರೆಡ್ಡಿ ಮಾತನಾಡಿ, ಶಿವಪುರ ಗ್ರಾಮದ ಹೊರವಲಯದಲ್ಲಿರುವ ಡಾ.ಮಧು ಸೀತಪ್ಪ ಫಾರ್ಮ್ ಹೌಸ್ ಬಳಿ ಹೋಗಿರುವ ಶಾಸಕರ ಬೆಂಬಲಿಗರು ಮಧುಸೀತಪ್ಪ ಇಲ್ಲದ ಸಮಯದಲ್ಲಿ ದಾಂಧಲೆ ನಡೆಸಿ, ಗ್ರಾಮದಲ್ಲೆ ಇಲ್ಲದ ಡಾ.ಮಧುಸೀತಪ್ಪ ಮೇಲೆ ಸುಳ್ಳು ಅಟ್ರಾಸಿಟಿ ಕೇಸು ದಾಖಲಿಸಿರುವ ಮಾದರಿಯಲ್ಲಿ ನಾವು ಕೊಟ್ಟಿರುವ ಅಟ್ರಾಸಿಟಿ ಕೇಸನ್ನು ದಾಖಲಿಸಿಕೊಂಡು ನ್ಯಾಯ ಒದಗಿಸಬೇಕು, ಹಲವು ಕ್ರಿಮಿನಲ್ ಕೇಸುಗಳಲ್ಲಿ ಆರೋಪಿಗಳಾಗಿರುವವರು ಕೊಟ್ಟಿರುವ ದೂರುನ್ನು ಸ್ವೀಕರಿಸಿ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಶಾಸಕರ ಮೌಖಿಕ ಆದೇಶದಂತೆ ರೈತರು ನೀಡುವ ದೂರುಗಳನ್ನು ಸ್ವೀಕರಿಸದೆ ಅನ್ಯಾಯ ಮಾಡುತ್ತಿದ್ದಾರೆ ಎಂದರು.

ಅಂತರಾಳದಿಂದ...
EDITORIAL

# ಭದ್ರತಾ ಲೋಪ: ಯಾರು ಹೊಣೆ?



ಇಷ್ಟೊಂದು ದೊಡ್ಡ ದಾಳಿ ನಡೆದಿದೆ. ಆದರೆ ಸರಕಾರದ ಸುದ್ದಿಯೇ ಇಲ್ಲ. ಅವರಿಗೆ ಇದರ ಬಗ್ಗೆ ಗೊತ್ತೇ ಇರಲಿಲ್ಲ. ಪಕ್ಕದಲ್ಲೇ ಇದ್ದ ಸೇನಾ ನೆಲೆಯಿಂದ ಒಂದು ಗಂಟೆ ಕಳೆದರೂ ಯಾರೂ ನೆರವಿಗೆ ಬರಲೇ ಇಲ್ಲ ಹೀಗೆಂದು ಮಾಧ್ಯಮಗಳಿಗೆ ಹೇಳಿಕೆ ನೀಡಿರುವುದು ಗುಜರಾತ್ ನ ಸೂರತ್‌ನ ಪುಟ್ಟ ಬಾಲಕ ನಕ್ಷೆ ಕಲ್ತಿಯಾ. ಪಹಲ್ಗಾಮ್‌ನಲ್ಲಿ ಉಗ್ರರು ನಡೆಸಿದ ಭೀಕರ ದಾಳಿಯಲ್ಲಿ ಈ ಬಾಲಕನ ತಂದೆ ಮೃತಪಟ್ಟಿದ್ದರು. ನೂರಾರು ಪ್ರವಾಸಿಗರು ಪ್ರತಿನಿತ್ಯ ಬಂದು ಹೋಗುವ ಸ್ಥಳದಲ್ಲಿ ಸರಕಾರ ಯಾಕೆ ಒಬ್ಬನೇ ಒಬ್ಬ ಭದ್ರತಾ ಸಿಬ್ಬಂದಿಯನ್ನು ಗಸ್ತಿಗಾಗಿ ಇಟ್ಟಿರಲಿಲ್ಲ? ಎನ್ನುವ ಪ್ರಶ್ನೆ ಇನ್ನೂ ಉತ್ತರವಿಲ್ಲದೆ ಬಿದ್ದುಕೊಂಡಿದೆ. ಉಗ್ರರ ದಾಳಿಯಲ್ಲಿ ತಮ್ಮ ಕುಟುಂಬಸ್ಥರನ್ನು ಕಳೆದುಕೊಂಡವರೆಲ್ಲರ ಕಟ್ಟ ಕಡೆಯ ಪ್ರಶ್ನೆ 'ಸರಕಾರದ ಭದ್ರತೆ'ಯ ಲೋಪವನ್ನೇ ಗುರಿಯಾಗಿಸಿಕೊಂಡಿದೆ. ಬರೇ ನಾಲ್ಕು ಮಂದಿ ಉಗ್ರರು ಕೈಯಲ್ಲಿ ಬಂದೂಕುಗಳನ್ನು ಹಿಡಿದುಕೊಂಡು ಬಂದು, ಪ್ರವಾಸಿಗರ ಮೇಲೆ ದಾಳಿ ನಡೆಸುತ್ತಾರೆ. ಗಸ್ತು ಪಡೆ ಇದ್ದಿದ್ದರೆ ಅವರನ್ನು ಎದುರಿಸುವುದು ಕಷ್ಟ ಸಾಧ್ಯವೇನೂ ಆಗಿರಲಿಲ್ಲ. ಇಷ್ಟೊಂದು ಸಾವು ನೋವಂತೂ ಖಂಡಿತಾ ನಡೆಯುತ್ತಿರಲಿಲ್ಲ. ಕನಿಷ್ಠ ಆ ಉಗ್ರರನ್ನಾದರೂ ಕೊಂದು ಹಾಕಿ ಬಿಡಬಹುದಾಗಿತ್ತು. ಎಲ್ಲಾ ಸಂತ್ರಸ್ತ ಕುಟುಂಬಗಳೂ ಇದನ್ನೇ ಪದೇ ಪದೇ ಉಲ್ಲೇಖಿಸುತ್ತಿವೆ. ಉಗ್ರರ ಹೇಯ ಕೃತ್ಯ ಖಂಡನೀಯ ಎನ್ನುವುದರಲ್ಲಿ ಎರಡು ಮಾತಿಲ್ಲ. ಕಳೆದ ಐದು ವರ್ಷಗಳ ಕಾರ್ಯಾಚರಣೆಯಲ್ಲಿ ಭಯೋತ್ಪಾದಕರ ಮೇಲೆ ಸೇನೆ ಸಂಪೂರ್ಣ ಗೆಲುವು ಸಾಧಿಸಿದೆ ಎಂಬ ಅಮಿತ್ ಶಾ ಮಾತುಗಳನ್ನು ದೇಶ ನಂಬಿದೆ. ಆ ನಂಬಿಕೆಯ ಬಲದಿಂದಲೇ, ಪ್ರವಾಸಿಗರು ಕಾಶ್ಮೀರಕ್ಕೆ ಭೇಟಿ ನೀಡಿದ್ದಾರೆ. ಈಗಲೂ ಕಾಶ್ಮೀರ ಕೇಂದ್ರ ಸರಕಾರದ ನಿಯಂತ್ರಣದಲ್ಲಿದೆ. ಸೇನಾ ಪಡೆಗಳು ಮತ್ತು ಪೊಲೀಸರ ನಿಯಂತ್ರಣ ಕೇಂದ್ರ ಸರಕಾರದ ಬಳಿಯೇ ಇದೆ. ಕಾಶ್ಮೀರಕ್ಕೆ ಇನ್ನೂ ರಾಜ್ಯದ ಸ್ಥಾನಮಾನ ದೊರಕಿಲ್ಲ. ಒಂದು ಚುನಾಯಿತ ಸರಕಾರ ಅಲ್ಲಿ ಅಸ್ತಿತ್ವದಲ್ಲಿದೆಯಾದರೂ, ಅದರ ಅಧಿಕಾರ ಸೀಮಿತವಾದುದು. ಸ್ಥಳೀಯ ಸರಕಾರ ಕಾಶ್ಮೀರಕ್ಕೆ ಭದ್ರತೆ ನೀಡುವುದಕ್ಕೆ ಸಾಮರ್ಥ್ಯವನ್ನು ಹೊಂದಿಲ್ಲ ಎನ್ನುವ ಕಾರಣಕ್ಕಾಗಿಯೇ ಅಲ್ಲಿನ ಸರಕಾರವನ್ನು ವಜಾಗೊಳಿಸಿ ಇಡೀ ಕಾಶ್ಮೀರವನ್ನು ಕೇಂದ್ರ ಸರಕಾರ ತನ್ನ ನಿಯಂತ್ರಣಕ್ಕೆ ತೆಗೆದುಕೊಂಡಿದೆ. ಈ ಕಾರಣದಿಂದ, ಎಲ್ಲೇ ಭದ್ರತಾ ಲೋಪಗಳು ನಡೆದರೂ ಅದರ ಹೊಣೆಗಾರಿಕೆಯನ್ನು ಕೇಂದ್ರ ಸರಕಾರವೇ ಹೊತ್ತುಕೊಳ್ಳಬೇಕಾಗುತ್ತದೆ. ಉಗ್ರರ ದಾಳಿಯ ಕುರಿತಂತೆ ಸಂತ್ರಸ್ತ ಪ್ರವಾಸಿಗರು ನಾಲ್ಕು ವಿಷಯಗಳನ್ನು ದೇಶದ ಮುಂದಿಟ್ಟಿದ್ದಾರೆ. ಒಂದು, ಉಗ್ರರು ದೊಡ್ಡ ಸಂಖ್ಯೆಯಲ್ಲೇನೂ ಇರಲಿಲ್ಲ. ನಾಲ್ಕು ಜನರು ಇಷ್ಟು ದೊಡ್ಡ ಹಿಂಸಾಚಾರವನ್ನು ಎಸಗಿದ್ದರು. ಅವರು ಯಾವುದೇ ಬಾಂಬ್ ಸ್ಫೋಟ ಅಥವಾ ಆತ್ಮಹತ್ಯಾ ದಾಳಿಯ ಮೂಲಕ ಹಿಂಸಾಚಾರ ಎಸಗಿರಲಿಲ್ಲ. ಅತ್ಯಂತ ನಿರ್ಭಯವಾಗಿ, ಸಮಾಧಾನದಿಂದ ಕೆಲವರ ಧರ್ಮಗಳನ್ನು ವಿಚಾರಣೆ ನಡೆಸಿ ಗುಂಡು ಹಾರಿಸಿದ್ದರು. ಎರಡನೆಯದು, ಈ ಸಂದರ್ಭದಲ್ಲಿ ಆ ಪರಿಸರದಲ್ಲಿ ಒಬ್ಬನೇ ಒಬ್ಬ ಭದ್ರತಾ ಸಿಬ್ಬಂದಿಯಿರಲಿಲ್ಲ. ಅಲ್ಲಿಗೆ ಉಗ್ರರು ನುಸುಳಿರುವುದು ಹೇಗೆ ಎನ್ನುವುದು ಇನ್ನೊಂದು ಪ್ರಶ್ನೆ. ಹಿಂಸಾಚಾರ ನಡೆದ ಬಳಿಕವೂ ಸುಮಾರು ಒಂದು ಗಂಟೆಗಳ ಕಾಲ ಯಾವುದೇ ಆ್ಯಂಬ್ಯುಲೆನ್ಸ್ ಅಥವಾ ಭದ್ರತಾ ಪಡೆಗಳು ನೆರವಿಗೆ ಧಾವಿಸಿ ಬಂದಿರಲಿಲ್ಲ. ಇದು ಕೇಂದ್ರ ಸರಕಾರದ ನಿಯಂತ್ರಣದಲ್ಲಿರುವ ಭದ್ರತಾ ಪಡೆಗಳು ಉಗ್ರರನ್ನು ನಿಯಂತ್ರಿಸುತ್ತಿರುವ ಮತ್ತು ನಾಗರಿಕರಿಗೆ ರಕ್ಷಣೆ ನೀಡುತ್ತಿರುವ ರೀತಿ. ಈ ಸಂದರ್ಭದಲ್ಲಿ ಪ್ರವಾಸಿಗರ ಜೊತೆಗೆ ನಿಂತು, ಅವರ ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿದವರು ಸ್ಥಳೀಯ ಕಾಶ್ಮೀರಿಗಳು. ಯೋಧರು ಬರುವವರೆಗೆ ಅವರು ಕಾಯಲಿಲ್ಲ. ಗಾಯಾಳುಗಳನ್ನು ಮತ್ತು ಬದುಕುಳಿದವರನ್ನು ಸುರಕ್ಷಿತ ಸ್ಥಳಗಳಿಗೆ ಸೇರಿಸುವಲ್ಲಿ ಅವರು ತಮ್ಮ ಪ್ರಾಣವನ್ನೇ ಒತ್ತೆಯಿಟ್ಟು ಕೆಲಸ ಮಾಡಿದರು. ಎಲ್ಲಾ ಪ್ರವಾಸಿಗರು ಒಕ್ಕೊರಲಿನಲ್ಲಿ ಕಾಶ್ಮೀರಿಗಳನ್ನು ಶ್ಲಾಘಿಸಿದ್ದಾರೆ ಮತ್ತು ಅವರೆಲ್ಲರೂ ಸರಕಾರದ ಭದ್ರತಾ ಲೋಪಗಳನ್ನು ಆಕ್ರೋಶ ಭರಿತವಾಗಿ ಖಂಡಿಸಿದ್ದಾರೆ.

> **ಉಗ್ರರನ್ನು ಸಂಪೂರ್ಣ ದಮನ ಮಾಡಲು ದೇಶ ಎಲ್ಲಾ ಪಕ್ಷ, ಧರ್ಮ, ಜಾತಿ ಭೇದಗಳನ್ನು ಬದಿಗಿಟ್ಟು ಒಂದಾಗಿವೆ. ಉಗ್ರವಾದಿಗಳ ವೃತ್ತಿಯೇ ಕೊಲ್ಲುವುದಾಗಿದೆ ಮತ್ತು ಸಾಯುವುದಕ್ಕೂ ಅವರು ಸಿದ್ದರಾಗಿಯೇ ಬರುತ್ತಾರೆ. ಆದರೆ ಕಾಯಬೇಕಾಗಿದ್ದ ಭದ್ರತಾ ಸಿಬ್ಬಂದಿ ಎಲ್ಲಿದ್ದರು? ಸಂತ್ರಸರು ಈ ಪ್ರಶ್ನೆಯನ್ನು ದೊಡ್ಡ ಧ್ವನಿಯಲ್ಲಿ ಕೇಳುತ್ತಿದ್ದಾರೆ. ಸರಕಾರ ಸಂತ್ರಸ್ತರಿಗೆ ಉತ್ತರಿಸಲೇಬೇಕಾಗಿದೆ.**

# ದುಷ್ಟರನ್ನು ಸಂಹರಿಸುವ ಬ್ರಾಹ್ಮ ಕ್ಷಾತ್ರ ತೇಜಯುಕ್ತ ಅವತಾರ: ಭಗವಾನ್ ಪರಶುರಾಮ

• ಶ್ರೀ. ವಿನೋದ ಕಾಮತ್



ಭಗವಂತನು ಬೇರೆ ಬೇರೆ ಯುಗಗಳಲ್ಲಿ ಧರ್ಮದ ಸ್ಥಾಪನೆ ಮತ್ತು ಅಧರ್ಮದ ನಾಶಕ್ಕಾಗಿ ಅನೇಕ ಅವತಾರಗಳನ್ನು ತಾಳಿದ್ದಾನೆ. ಈ ಅವತಾರಗಳಲ್ಲಿ ಭಗವಾನ್ ಪರಶುರಾಮರ ಅವತಾರ ಒಂದು ಅತ್ಯಂತ ಪ್ರಭಾವಶಾಲಿ, ತೇಜಸ್ವಿ, ಅದ್ವಿತೀಯ ಯೋದ್ಧಾವತಾರವಾಗಿದೆ. ಭಗವಾನ್ ವಿಷ್ಣುವಿನ ಆರನೆಯ ಅವತಾರ ಪರಶುರಾಮ. ಬ್ರಾಹ್ಮತೇಜ ಮತ್ತು ಕ್ಷಾತ್ರ ತೇಜದ ಸುಂದರ ಸಮ್ಮಿಲನದಿಂದ ಅಧರ್ಮದ ನಾಶ ಮಾಡಿದ್ದಾನೆ.

**ಸಪ್ತ ಚಿರಂಜೀವಿಗಳಲ್ಲಿ ಒಬ್ಬರು, ಕಾಲದ ಮೇಲೆ ವಿಜಯ ಪಡೆದಿರುವ ಅವತಾರ:** ಭಗವಾನ್ ಪರಶುರಾಮ ಸಪ್ತ ಚಿರಂಜೀವಿಗಳಲ್ಲಿ ಒಬ್ಬರಾಗಿದ್ದಾರೆ. ಅವರು ಕಾಲವನ್ನು ಜಯಸಿದ್ದಾರೆ, ಆದಕಾರಣ ಅವರು ಇಂದಿಗೂ ಪೃಥ್ವಿಯಲ್ಲಿ ಅದೃಶ್ಯ ರೂಪದಲ್ಲಿ ವಾಸಿಸುತ್ತಿದ್ದಾರೆ. ಅವರ ಸ್ಮರಣೆಯಿಂದ ಪುಣ್ಯಪ್ರಾಪ್ತಿಯಾಗುತ್ತದೆ. ಇಂದಿನ ಈ ಒತ್ತಡಯುಕ್ತ ಜೀವನದಲ್ಲಿ ಅವರ ಸ್ಮರಣೆ ಮನಃಶಾಂತಿ, ತಾಳ್ಮೆ ಮತ್ತು ಪರಾಕ್ರಮ ಪ್ರೇರಣಾದಾಯಕವಾಗಿದೆ.

**ಬ್ರಾಹ್ಮತೇಜ ಮತ್ತು ಕ್ಷಾತ್ರತೇಜದ ಸಂಗಮ:** ಪರಶುರಾಮ ಬ್ರಾಹ್ಮಣರಾಗಿದ್ದರು, ಆದರೆ ಅವರು ಕ್ಷಾತ್ರತೇಜವನ್ನು ಅಳವಡಿಸಿಕೊಂಡರು. ತಂದೆಯಿಂದ ಬ್ರಾಹ್ಮತೇಜ, ಜ್ಞಾನ, ತಪಸ್ಸಿನ ಶಕ್ತಿ ದೊರೆಯಿತು, ಹಾಗೂ ತಾಯಿಯಿಂದ ಅವರಿಗೆ ಕ್ಷಾತ್ರ ಗುಣ, ಪರಾಕ್ರಮ ಮತ್ತು ನಿರ್ಭಯತೆ ದೊರೆಯಿತು. ಇಂದಿನ ಯುಗದಲ್ಲಿ ಈ ಗುಣಗಳ ಆಧಾರದಲ್ಲಿ ಕರ್ಮದ ಬಗ್ಗೆ ಚರ್ಚೆ ಆಗುತ್ತದೆ, ಪರಶುರಾಮರು ಇದರ ಆದರ್ಶ ಉದಾಹರಣೆಯಾಗಿದ್ದಾರೆ.

**ಅಜೇಯ ಯೋಧ ಮತ್ತು ಶಿಸ್ತಿನ ಶಿಷ್ಯ:** ಪರಶುರಾಮ ಕೇವಲ ಮಹಾಯೋಧ ಅಷ್ಟೇ ಅಲ್ಲದೆ, ಅತ್ಯಂತ ಶಿಸ್ತುಪ್ರಿಯ, ತಪಸ್ವಿ ಶಿಷ್ಯ ಕೂಡ ಆಗಿದ್ದರು. ಅವರು ಕಶ್ಯಪ ಮುನಿಗಳು, ಭಗವಾನ್ ಶಿವನಿಂದ ಜ್ಞಾನ ಪಡೆದಿದ್ದರು, ತಪಸ್ಸಿನ ದಿವ್ಯ ಅಸ್ತ್ರಗಳ ವಿದ್ಯೆಯನ್ನು ಪಡೆದಿದ್ದರು. ಯುವಕರು ಅವರ ಪರಾಕ್ರಮದ ಜೊತೆ ಜೊತೆಗೆ ಸಾಧನೆ ಮತ್ತು ಜ್ಞಾನಾರ್ಜನೆಯ ಭಾವನೆ ಕೂಡ ಅಳವಡಿಸಿಕೊಳ್ಳಬೇಕು.

**ಶಾಸ್ತ್ರ ಮತ್ತು ಶಸ್ತ್ರದ ಆದರ್ಶ ಸಮನ್ವಯ:** ಅಗ್ರತಃ ಚತುರೋ ವೇದಹ, ಪೃಷ್ಠತಃ ಸಶರಂ ಧನು ಈ ಶ್ಲೋಕದಲ್ಲಿ ಪರಶುರಾಮರ ವ್ಯಕ್ತಿತ್ವದ ಸಾರಾಂಶ ಅಡಕವಾಗಿದೆ ಅವರು ಜ್ಞಾನ ಮತ್ತು ಶೌರ್ಯದ ಒಂದು ಅಲೌಕಿಕ ಸಂಗಮ ತೋರಿದ್ದಾರೆ. ಅವರು ಕೆಲವೊಮ್ಮೆ ಶಸ್ತ್ರದಿಂದ, ಹಾಗೂ ಕೆಲವೊಮ್ಮೆ ಶಾಪದಿಂದ ಅಧರ್ಮದ ನಾಶ ಮಾಡಿದ್ದಾರೆ. ಪ್ರಸ್ತುತ ಶಿಕ್ಷೆ ಮತ್ತು ಶೌರ್ಯ ಎರಡೂ ಕಡಿಮೆಯಾಗಿರುವಾಗ ಭಗವಾನ್ ಪರಶುರಾಮನ ಆದರ್ಶ ಪ್ರೇರಣಾದಾಯಕವಾಗಿದೆ.

**ಅಧರ್ಮದ ವಿರುದ್ಧ ಕಠಿಣ ಸಂಘರ್ಷ:** ಅಧರ್ಮಿ ರಾಜ ಕಾರ್ತವೀರ್ಯ ಸಹಸ್ರಾರ್ಜುನನನ್ನು ಸೋಲಿಸಿದ ಒಂದು ಘಟನೆಯಿದೆ, ಪರಶುರಾಮರು ಮೊದಲು ತಪಸ್ಸಿನಿಂದ ಸಹಸ್ರಾರ್ಜುನನ ಪುಣ್ಯ ಶಕ್ತಿಯನ್ನು ಕ್ಷೀಣ ಗೊಳಿಸಿದರು ಮತ್ತು ನಂತರ ಯುದ್ಧದಲ್ಲಿ ಅವನನ್ನು ಸಂಹರಿಸಿದರು. ಇದು ಅಧರ್ಮದ ವಿರುದ್ಧ ಸಂಘರ್ಷದ ಒಂದು ಸುಂದರ ಉದಾಹರಣೆಯಾಗಿದೆ.

**ಗೋಮಾತೆಯ ರಕ್ಷಣೆ ಮತ್ತು ಅಹಂಕಾರಿ ಕ್ಷತ್ರಿಯರ ಸಂಹಾರ:** ಕಾರ್ತವೀರ್ಯ ಕಾಮಧೇನುವನ್ನು ಅಪಹರಿಸಿದಾಗ ಪರಶುರಾಮರು ಮತ್ತೆ ಅದನ್ನು ಪಡೆಯುವುದಕ್ಕಾಗಿ 21 ಬಾರಿ ಪೃಥ್ವಿಯ ಪ್ರದಕ್ಷಿಣೆ ಹಾಕಿ ಅಧರ್ಮಿ ಕ್ಷತ್ರಿಯರ ಸಂಹಾರ ಮಾಡಿದರು. ಇದರಿಂದ ಧರ್ಮದ ರಕ್ಷಣೆಗಾಗಿ ಹಿಡಿದಿರುವ ಶಸ್ತ್ರಗಳು ಪವಿತ್ರವಾಗಿರುತ್ತದೆ ಎಂಬುದು ಗಮನಕ್ಕೆ ಬರುತ್ತದೆ.

> **ಅವತಾರಕ್ಕೆ ಶಿರಸಾಷ್ಟಾಂಗ ನಮಸ್ಕಾರ**
>
> **ಯುವ ಪೀಳಿಗೆ ಪರಶುರಾಮರ ಗುಣಗಳನ್ನು ಅಳವಡಿಸಿಕೊಂಡರೆ ಶಕ್ತಿಶಾಲಿ, ವಿವೇಕಿ, ನಿಸ್ವಾರ್ಥಿಗಳು ಆಗಬಹುದು. ಮಹಿಳೆಯರನ್ನು ಗೌರವಿಸುವುದು, ಧರ್ಮದ ರಕ್ಷಣೆ, ಜ್ಞಾನಪ್ರಾಪ್ತಿ, ತಾಳ್ಮೆ, ಸದಾಚಾರವನ್ನು ಜೀವನದಲ್ಲಿ ಅಳವಡಿಸಿಕೊಂಡು ರಾಷ್ಟ್ರದ ಅಭಿವೃದ್ಧಿಯಲ್ಲಿ ಕೊಡಗೆ ನೀಡಬಹುದು. ಭಗವಾನ್ ಪರಶುರಾಮ ಓರ್ವ ಮಹಾನಯೋಧರಾಗಿದ್ದರು, ಪರಾಕ್ರಮಿ, ತಪಸ್ವಿ, ದೂರ ದೃಷ್ಟಿಯ ಮಹಾನಪುರುಷರಾಗಿದ್ದರು. ಇಂತಹ ಬ್ರಾಹ್ಮಕ್ಷಾತ್ರತೇಜಯುಕ್ತ ಅವತಾರಕ್ಕೆ ಶಿರಸಾಷ್ಟಾಂಗ ನಮಸ್ಕಾರ ಮಾಡುತ್ತಾ, ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದೇ ಅವರ ಪ್ರತಿ ನಿಜವಾದ ಭಕ್ತಿಯಾಗಲಿದೆ.**

**ವೈರಾಗ್ಯ ಮತ್ತು ದಾನಶೀಲತೆ:** ಭಗವಾನ್ ಪರಶುರಾಮ ಅತ್ಯಂತ ದಾನಿಗಳಾಗಿದ್ದರು. ಅಶ್ವಮೇಧ ಯಜ್ಞದ ನಂತರ ಅವರು ಸಂಪೂರ್ಣ ಭೂಮಿಯನ್ನು ಮಹರ್ಷಿ ಕಶ್ಯಪರಿಗೆ ದಾನವಾಗಿ ನೀಡಿದರು ಮತ್ತು ಸ್ವತಹ ಮಹೇಂದ್ರ ಪರ್ವತದಲ್ಲಿ ನಿಂತು ಸಂನ್ಯಾಸ ಜೀವನ ನಡೆಸಿದರು. ಪ್ರಸ್ತುತ ಯುಗದಲ್ಲಿ ಅಧಿಕಾರ, ಧನ, ಅಹಂಕಾರ ಹೆಚ್ಚುತ್ತಿದೆ, ಇದರ ಮುಂದೆ ಅವರ ವೈರಾಗ್ಯ ಪ್ರೇರಣಾದಾಯಕವಾಗಿದೆ.

**ಗುರು ಶಿಷ್ಯ ಪರಂಪರೆಯ ಪಾಲನೆ:** ಪರಶುರಾಮ ಭಗವಾನ್ ಶಿವ, ದತ್ತಾತ್ರೇಯರಂತಹ ಅದ್ವಿತೀಯ ಗುರುಗಳ ಶಿಷ್ಯರಾಗಿದ್ದರು. ಅವರಿಂದ ಅವರು ವೇದ, ಆತ್ಮಜ್ಞಾನ, ಶಸ್ತ್ರವಿದ್ಯೆ, ಯೋಗವಿದ್ಯೆ ಕಲಿತರು. ಪ್ರಸ್ತುತ ಶಿಕ್ಷಣವು ಕೇವಲ ತಾಂತ್ರಿಕ ಜ್ಞಾನದವರೆಗೆ ಸೀಮಿತವಾಗಿರುವಾಗ ಪರಶುರಾಮರ ಗುರುಸೇವೆ, ಸಮರ್ಪಣೆ ಪ್ರೇರಣೆ ನೀಡುತ್ತದೆ.


# ಭೂತಾಯಿಯ ಅಳಲು... ಪಹಲ್ಗಾಮ್ ರಕ್ತ ಪಾತ ಭಯೋತ್ಪಾದಕ ದಾಳಿಯ ದೃಶ್ಯ...

• ಸುಮನಾ

ಜಗತ್ತಿನ ಮಕ್ಕಳೆಲ್ಲರೂ ನನ್ನ ಮಕ್ಕಳೇ, ಯಾವ ಕಂದನಿಗೆ
ತೊಂದರೆಯಾದರೂ ನನ್ನ ಎದೆಗೆ ಇರಿದಂತೆ
ಮನುಕುಲವೇ, ಮರೆಯದಿರು ಮಾನವೀಯತೆ,
ಮಮತೆಯ ಮಡಿಲಿನ, ಅಮೃತ ಸದೃಶ ಮಾತೆ,
ನಾನು, ನೊಂದೆ, ಬೆಂದೆ, ನನ್ನ ಮನ ಕಲಕಿದೆ ,ಕರುಳು
ಕತ್ತರಿಸಿ, ನನ್ನ ಹೃದಯ ವಿಲವಿಲ ವಿಲಪಿಸಿದೆ, ನನ್ನೀ
ಆಕ್ರಂದನ ಕೇಳದೇ ಓ ..ಮನುಕುಲವೇ
ಹೃದಯ ಬೇಧಿಸುವ ಈ ನಿನ್ನ ಕಾರ್ಯ ಈ ಭಯಾನಕ
ಕೃತ್ಯ, ಭೀಭತ್ಸ ರಕ್ತ ಪಾತ..ತರವಲ್ಲ ಮಗುವೇ, ಅವನು,
ಇವನು, ನಾನು, ನೀನು ಎಂಬ ಬೇಧ ಭಾವವೇಕೆ
ನನ್ನ ಮಡಿಲಿಗೆ ಬಿದ್ದ ಕಂದಮ್ಮಗಳ ಆರ್ತನಾದ
ನನ್ನನ್ನೇ ಅಲುಗಾಡಿಸಿದೆ, ಬೆಚ್ಚನೆಯ ರಕ್ತ ..ನನ್ನನು..
ಕಾಪಾಡು ಅಮ್ಮ ಎಂದು ಬೇಡಿದಂತಿದೆ,
ರಕ್ತವೆಲ್ಲರದೂ ಒಂದೇ ಬಣ್ಣವಲ್ಲವೇ
ಮನ ಕಲಕಿ, ಭೋರ್ಗರೆದು ಕಣ್ಣೀರ್ಗರೆದಿದೆ,
ಅರಿವುದಾವಾಗ ನೀನು ಮಾನವತೆಯ ಅಂತರಾಳವ
ಭೂತಾಯಿ ನಾನು ನಿಮಗೆ ಕೈ ಮುಗಿವೆ..
ಮಾಡಬೇಡಿರೆಂದು ಈ ತೆರನ ಕೃತ್ಯ
ಕಳಕಳಿಯಿಂದ ಬೇಡುವೆ ಪ್ರತಿನಿತ್ಯ



# ಮಕ್ಕಳೇ ಮನೆಗೆ ಮಾಣಿಕ್ಯ



ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ



ಮನುಷ್ಯರಲ್ಲಿ ಕೂಸು ಹುಟ್ಟಿದ್ದು ಮೊದಲ್ಗೊಂದು ಲೋಕ ಜ್ಞಾನ ಬರುವ ಹಂತದವರೆಗೆ ಬೆಳೆದು ಬಂದ ಶಿಶುಗಳನ್ನು ಮಕ್ಕಳು ಎಂದು ಗುರುತಿಸುತ್ತಾರೆ. ಒಂದು ದೇಶದ ಪ್ರಜೆಗಳನ್ನು ಆ ದೇಶದ ಮಕ್ಕಳು ಎನ್ನುತ್ತಾರೆ. ಮಕ್ಕಳಲ್ಲಿ ಗಂಡು –ಹೆಣ್ಣು, ಮೇಲು –ಕೀಳು, ಬಡವ– ಬಲ್ಲಿದ ಇತ್ಯಾದಿ ತಾರತಮ್ಯ ಭೇದಗಳಿಲ್ಲ. ಮಕ್ಕಳೆಂದರೆ ಮಕ್ಕಳೇ ನೀವು ಗಮನಿಸಿಯೇ ಇರುತ್ತೀರಿ.

ಹೆಣ್ಣು ಮಕ್ಕಳು ಹೆರವರ ಮನೆಗೆ ಹೋಗುತ್ತವೆ ಅಥವಾ ಗಂಡು ಮಕ್ಕಳು ವಂಶದ ಉದ್ಧಾರಕರೆಂಬ ಕಾರಣದಿಂದ, ಹೆಣ್ಣು ಸಂತಾನಗಳನ್ನು ದ್ವೇಷಿಸುವುದನ್ನು, ಹೆಣ್ಣು ಶಿಶುಗಳ ಹತ್ಯೆಗಳನ್ನು ನಾವಿಂದು ಗಮನಿಸುತ್ತಿದ್ದೇವೆ . ಆದರೆ ಸರಕಾರವು ಹೆಣ್ಣು ಮಕ್ಕಳ ರಕ್ಷಣೆಗೆ ಹಾಗೂ ಶಿಕ್ಷಣಕ್ಕೆ ಹೆಚ್ಚು ಪ್ರೋತ್ಸಾಹ ನೀಡುತ್ತಿರುವುದು ಸಂತೋಷದ ಸಂಗತಿ . ಅವಕಾಶ ಕಲ್ಪಿಸಿದರೆ ಪುರುಷರಿಗಿಂತ ನಾವು ಯಾವುದರಲ್ಲೂ ಕಡಿಮೆಯಿಲ್ಲ ಎಂಬುದನ್ನು ಇಂದಿನ ಮಹಿಳೆಯರು ಸಾಧಿಸಿ ತೋರಿಸುತ್ತಿದ್ದಾರೆ. ಕ್ರೀಡೆಯಲ್ಲಿ, ಸಾಹಸದಲ್ಲಿ ಯಾವುದೇ ಉದ್ಯೋಗದಲ್ಲಿ, ತಮ್ಮ ಪ್ರತಿಭೆಯನ್ನು ಮೆರೆಯುತ್ತಿದ್ದಾರೆ. ಕಾಲ ಬದಲಾಗುತ್ತಿದೆ, ಸಮಾನತೆಯು ವ್ಯಾಪಕವಾಗಿ ಹರಡುತ್ತಿದೆ ಇಂದಿನ ಮಕ್ಕಳು ಹತ್ತನೇ ತರಗತಿ ಪರೀಕ್ಷೆಯಲ್ಲಿ ಎಲ್ಲಾ ವಿಷಯಗಳಲ್ಲೂ ನೂರಕ್ಕೆ ನೂರು ಅಂಕ ಪಡೆದು ತಮ್ಮ ಪ್ರತಿಭೆ ತೋರುತ್ತಿದ್ದಾರೆ. ಇದು ಬದಲಾದ ಶಿಕ್ಷಣ ಪದ್ಧತಿ ಹಾಗೂ ಆಧುನಿಕ ತಂತ್ರಜ್ಞಾನದ ಫಲವೆಂದು ಹೇಳಬಹುದು ನಾವು ಐದಾರು ದಶಕಗಳ ಹಿಂದೆ ಓದುವಾಗ ಶಿಕ್ಷಣದಲ್ಲಿ ಇಷ್ಟೊಂದು ಸವಲತ್ತುಗಳು, ವಿವಿಧ ಗ್ರಂಥಗಳು, ಉಪಕರಣಗಳು ಇರಲಿಲ್ಲ. ಇಂದಿನ ಎಳೆಯ ಮಕ್ಕಳೂ ಸಹ ಇಂಗ್ಲಿಷ್ ಭಾಷೆಯಲ್ಲಿ ಅರಳು ಹುರಿದಂತೆ ಮಾತನಾಡುತ್ತವೆ ಮೊಬೈಲ್ ಆಟಗಳನ್ನು ಆಡುತ್ತವೆ, ಸಂದೇಶಗಳನ್ನು ರಚಿಸುತ್ತವೆ. ಇಂದಿನ ಮಕ್ಕಳೇನೋ ಹೆಚ್ಚು ಜಾಣರಾಗುತ್ತಿದ್ದಾರೆ ನಿಜ !ಆದರೆ ಪರಸ್ಪರ ಪ್ರೀತಿ , ವಿಶ್ವಾಸ, ದಯೆ, ಗುರು ಹಿರಿಯರಲ್ಲಿ ತೋರುವ ಗೌರವ ನಶಿಸುತ್ತಿವೆ. ಐಷಾರಾಮಿ ಜೀವನದ ಥಾಂಬೆ ಆಸೆ, ಸ್ವಾರ್ಥ ಕುಟುಂಬಗಳಲ್ಲಿ ಬೆಳೆಯುತ್ತಿವೆ, ವೃದ್ಧಾಶ್ರಮಗಳ ಸಂಖ್ಯೆ ಹೆಚ್ಚುತ್ತಿವೆ .

ಆದ್ದರಿಂದ ಹಿರಿಯ ಅನುಭವಿಗಳು ಹೇಳುವಂತೆ ಮಕ್ಕಳಿಗೆ ಆಸ್ತಿ ಮಾಡಬೇಡಿ, ಮಕ್ಕಳನ್ನೇ ದೇಶದ ಆಸ್ತಿ ಯನ್ನಾಗಿ ಮಾಡಿರಿ, ಆಸ್ತಿ ಮಾಡುವುದು ತಪ್ಪು ಎಂದು ಹೇಳುವುದಿಲ್ಲ ನಾವು ಬದುಕಲು ಬೇಕೇ ಬೇಕು. ಆದರೆ ಅದರ ಹಿಂದಿನ ಪರಿಶ್ರಮದ ಕಥೆಯನ್ನು ಮಕ್ಕಳು ಅರಿತಿರಬೇಕು. ಬೆವರಿನ ಬೆಲೆಯನ್ನು ತಿಳಿದಾಗ ಆಸ್ತಿ ಹಣವನ್ನು ವೆಚ್ಚ ಮಾಡುವ ಮೊದಲು ಯೋಚಿಸುತ್ತಾರೆ ಪ್ರಜ್ಞಾವಂತ ಮಕ್ಕಳು. ಅವರು ದೇಶದ ಆಸ್ತಿಯಾಗುತ್ತಾರೆ, ಸಮಾಜದ ಕಣ್ಣಾಗುತ್ತಾರೆ . ಈ ಗುಣ ಬರಬೇಕಾದರೆ ಚಿಕ್ಕ ವಯಸ್ಸಿನಲ್ಲಿ ಸಂಸ್ಕಾರ ಕೊಡಬೇಕು, ಬದುಕುವ ಮಾರ್ಗದರ್ಶನ ನೀಡಬೇಕು. ದೇವರನ್ನು, ಹೆತ್ತವರನ್ನು, ಹಿರಿಯರನ್ನು, ಗೌರವಿಸುವ ಭಕ್ತಿ ಅವರಲ್ಲಿ ತುಂಬಿರಬೇಕು. ಒಳ್ಳೆಯ ಮಕ್ಕಳು ನಮಗೆ ಸದಾ ಸಂತೋಷ ನೀಡುತ್ತಾರೆ. ಕೆಟ್ಟ ಮಕ್ಕಳು ದುಃಖಕ್ಕೆ ಕಾರಣರಾಗುತ್ತಾರೆ. ಮಕ್ಕಳಿಂದ ನಾವು ಯಾವ ನಿರೀಕ್ಷೆ ಪ್ರತಿಫಲಪೇಕ್ಷೆ ಗಳನ್ನು ಇಟ್ಟುಕೊಳ್ಳಬಾರದು, ನಾವು ಹಕ್ಕಿಗಳ ಹಾಗೆ ಬದುಕಲು ಪ್ರಯತ್ನಿಸಬೇಕು, ಅಂದಾಗ ಮಾತ್ರ ನಮ್ಮ ಬದುಕು ಸುಂದರವಾಗಿರುತ್ತದೆ, ನೆಮ್ಮದಿಯಿಂದ ತುಂಬಿರುತ್ತದೆ.

# ಮುತ್ತಿನಂಥ ಮುಕ್ತಕಗಳು



ಸಾಮಾಜಿಕ ಕಳಕಳಿ
ಹೆಚ್.ಎಸ್. ಪ್ರತಿಮಾ
ಲೇಖಕರು
ಸಾಮಾಜಿಕ ಚಿಂತಕಿ ಹಾಗೂ
ಶಿಕ್ಷಕಿ, ಹಾಸನ

ಕಿತ್ತೂರು ರಾಣಿ ಚೆನ್ನಮ್ಮ ನೆಲೆಸಿದ ನಾಡು ಉತ್ತಮರ
ಬೀಡು ಸೊಗಸಾದ ನಾಡು ಮುತ್ತಂಥ ಮನದ
ಕವಯಿತ್ರಿ ನೆಲೆಸಿದ ನಾಡು ಬತ್ತ ಬೆಳೆಯುವ ತಾಣ
ಲಕ್ಷ್ಮಿದೇವಿ...
ಮೈಸೂರು ಬೆಟ್ಟದಲಿ ನಿಂತ ತಾಯಿಯ ನೋಡು
ನೇಸರನ ಕಿರಣ ಚೆಲ್ಲುವುದು ನಿತ್ಯ
ರಾಶಿ ಹೊನ್ನನು ಹಾಕಿ ಮೆರೆದ ಕನ್ನಡನಾಡು
ಬೇಸರವ ಸರಿಸುವುದು ಲಕ್ಷ್ಮಿದೇವಿ....
ಪತಿತಪಾವನನಾದ ಹರಿಯು ನೆಲೆಸಿದ ನಾಡು
ಚತುರಮತಿ ಕವಿಗೆ ಆಶ್ರಯದ ಬೀಡು
ಪ್ರತಿಮಳಿಗೆ ನೆರಳಾಗಿ ನಿಂತಿರುವ ಕರುನಾಡು
ಅತಿಶಯದ ಸಿರಿನಾಡು ಲಕ್ಷ್ಮಿದೇವಿ...
ಮುಕ್ತಕವ ರಚಿಸಿದರು ಡಿವಿಜಿ ನಿಜಗುಣಕುವರ
ಮುಕ್ತಕಕೆ ನೀರುಣಿಸೆ ಕಮಲಕ್ಕಳು
ರಕ್ತ ಹಸ್ತಕೆ ಶಕ್ತಿ ತುಂಬೆ ಮುತ್ತುಸ್ವಾಮಿ
ಭಕ್ತಿ ತೋರಣ ಕಟ್ಟು ಲಕ್ಷ್ಮಿದೇವಿ...
ಪುಸ್ತಕದ ಸಾರವನು ಅರಿಯುತ್ತ ನಡೆಯುತಿರೆ
ಮಸ್ತಕದ ಒಳಗಿರುವ ವಿಷಯವನ್ನು
ಹಸ್ತದಲಿ ಬರೆಯುತ್ತ ಸಾಗುತಿರೆ ಜೀವನದಿ
ಗಸ್ತನೇನು ತೋರದೆಯೆ ಲಕ್ಷ್ಮಿ ದೇವಿ...
ರಂಗೋಲಿ ಇಡುತಲಿಯೆ ಸಾಗುವಳು ಬದುಕಿನಲಿ
ಸಂಘವನು ನೋಡುತಲಿ ಮಾಡುತಲಿಯೆ ಮಂಗಳದ
ಬುದ್ಧಿಯನು ಕಲಿಯುತ್ತ ಸಾಗುತಿರೆ ಭಂಗವದು
ಆಗದಿರೆ ಲಕ್ಷ್ಮಿದೇವಿ ...

# ರಾಮಾಯಣ



ಪ್ರಜೆಗಳು ಅಯೋಧ್ಯೆಗೆ ಹಿಂದಿರುಗಿದುದು

• ಹಿಂದಿನ ಸಂಚಿಕೆಯಿಂದ 78ನೆಯ ಅಧ್ಯಾಯ

ನಾವು ಆತನ ಜೊತೆಯಲ್ಲಿ ಪಟ್ಟಣದಿಂದ ಹೊರಟುಬಂದವರಾದ್ದರಿಂದ ಪಟ್ಟಣಕ್ಕೆ ಹಿಂದಿರುಗಿ ಶೂನ್ಯವಾದ ಪಟ್ಟಣವನ್ನು ಹೇಗೆ ನೋಡುವುದು ಎಂದು ತಮ್ಮ ಭುಜಗಳನ್ನು ಮೇಲಕ್ಕೆ ನೆಗಹಿಕೊಂಡು ಅತ್ಯಂತ ದುಃಖಾಕ್ರಾಂಶರಾಗಿ ಕರುವನ್ನು ಕಾಣದ ಹಸುವಿನಂತೆ ಹಂಬಲಿಸುತ್ತ ಶ್ರೀರಾಮನ ರಥವು ಹೋದ ಧಾರಿ ಹಿಡಿದು ಸ್ವಲ್ಪದೂರ ಹೋದರು. ಮುಂದೆ ಆ ರಥವು ಹೋದ ದಾರಿಯನ್ನು ಕಾಣದೆ ರಥವು ಎಲ್ಲಿ ಹೋಯಿತು ನಾವು ಇನ್ನೆಲ್ಲಿಗೆ ಹೋಗೋಣ ನಮಗೆ ದೈವಗತಿ ಹೀಗಿತ್ತು ಶ್ರೀರಾಮನನ್ನು ಕಾಣುವುದಕ್ಕೆ ಪುಣ್ಯವಿಲ್ಲದೆ ಹೋಯಿತು ಎಂದು ತಾವು ಹೋದ ದಾರಿಗೊಂಡೇ ತಿರುಗಿ ಬಂದರು. ಅವರು ಆತನ ವಿಯೋಗದಿಂದ ವ್ಯಥೆಪಡುತ್ತ ಗರುಡನು ಬಲಾತ್ಕರಿಸಿ ಸರ್ಪಗಳನ್ನೆಲ್ಲ ಸೆಳೆದುಹಾಕಿದ ನದಿಯಂತೆಯೂ ಚಂದ್ರನಿಲ್ಲದ ಆಕಾಶದಂತೆಯೂ ಉದಕವಿಲ್ಲದ ಸಮುದ್ರದಂತೆಯೂ ಕಾಣುತ್ತಿದ್ದ ಅಯೋಧ್ಯಾ ಪಟ್ಟಣವನ್ನು ಕಂಡು ಕಂಗೆಟ್ಟು ಧನಧಾನ್ಮಗಳಿಂದ ಪರಿಪೂರ್ಣವಾಗಿದ್ದ ತಮ್ಮ ಮನೆಗಳನ್ನು ಅಧಿಕವಾದ ದುಃಖದಿಂದ ಪ್ರವೇಶಿಸಿದರು. ಅಲ್ಲಿ ತಮ್ಮ ಸ್ತ್ರೀಯರು ಮಕ್ಕಳು ಬಂಧುಗಳಲ್ಲಿ ಇಚ್ಛೆಯಿಲ್ಲದೆ ಇದ್ದರು.

## ಅಯೋಧ್ಯಾ ಪಟ್ಟಣದ ಸ್ತ್ರೀಯರ ಪ್ರಲಾಪ

ಈ ಪ್ರಕಾರ ಪುರಜನರು ಶ್ರೀರಾಮನ ಅಗಲಿಕೆ ಯಿಂದುಂಟಾದ ದುಃಖಾತಿಶಯದಿಂದ ನೊಂದು ಮುಖಕಾಂತಿಗುಂದಿ ಆತನನ್ನು ಹುಡುಕಿ ಕಾಣದೆ ತಿರುಗಿ ಬಂದು ತಮ್ಮ ಮನೆಗಳಲ್ಲಿ ತಮ್ಮ ಸ್ತ್ರೀಪುತ್ರ ಸಮೇತರಾಗಿ ದುಃಖದಿಂದ ಕಣ್ಣೀರುಬಿಡುತ್ತ ಇದ್ದರು. ಅಂಗಡಿಯವರು ಚಿತ್ತಸ್ವಾಸ್ಥ್ಯವಿಲ್ಲದೆ ಅಂಗಡಿಗಳನ್ನಿಡದಿದ್ದರು. ಗೃಹಸ್ಥರು ಅಡಿಗೆ ಮಾಡಲಿಲ್ಲ. ವಿಪುಲವಾದ ಧನೆಲ: ಭವಾದರೂ ಜನರು ಸಂತೋಷಿಸಲಿಲ್ಲ. ಮೊಟ್ಟಮೊದಲು ಗಂಡುಮಗುವನ್ನು ಹಡೆದ ತಾಯಿಯೂ ಅದರಿಂದ ಆನಂದಿಸಲಿಲ್ಲ. ಅಯೋಧ್ಯಾಪಟ್ಟಣದಲ್ಲಿದ್ದ ಸ್ತ್ರೀಯರು ರೋದ್ರನಮಾದುತ್ತ ತಮ್ಮ ಪತಿಗಳು ಮನೆಗಳಿಗೆ ಬಂದರೆ ಅಂಕುಶಗಳಿಂದ ಆನೆಯನ್ನು ಚುಚ್ಚುವಂತೆ ಅವರನ್ನು ನಿಷ್ಠುರೋಕ್ತಿಗಳಿಂದ ಮಾತನಾಡಿಸಿದರು. ಶ್ರೀರಾಮನಿಲ್ಲದಾಗ ನಮಗೆ ಈ ಮನೆಯಿಂದಲೂ ಮನೆಯಲ್ಲಿರುವ ವಸ್ತುಗಳಿಂದಲೂ ಪುತ್ರಧನಾದಿಗಳಿಂದಲೂ ಏನು ಪ್ರಯೋಜನ? ಲೋಕದಲ್ಲಿ ಲಕ್ಷ್ಮಣನೊಬ್ಬನೇ ಸತ್ಪುರುಷನ್ಮು ಕೃತಾರ್ಥನು, ಸೀತಾದೇವಿಯೊಬ್ಬಳೇ ಪತಿವ್ರತೆ, ಕೃತಾರ್ಥ, ಪುಣ್ಯೋದಯ ವುಳ್ಳವಳು; ವನದಲ್ಲಿಯೂ ತನ್ನ ಪತಿಯ ಸೇವೆ ಸತ್ಕಾರಗಳನ್ನೇ ಮಾಡಿಕೊಂಡಿರುವಳು. ಶ್ರೀರಾಮನಿಂದ ವನದಲ್ಲಿರುವ ನದಿಗಳೂ ಕೊಳಗಳೂ ಪುಣ್ಮತೀರ್ಥಗಳಾಗುವುವು. ವನಗಳೂ ಮನೋಹರವಾದ ತಪ್ಪಲುಗಳುಳ್ಳ ಪರ್ವತಗಳೂ ಆತನ ವಾದಸಂಚಾರದಿಂದ ಪವಿತ್ರವಾಗುವುದಕ್ಕೆ ಜನ್ಮಾಂತರದಲ್ಲಿ ಯಾವ ಪುಣ್ಯವನ್ನು ಮಾಡಿದ್ದವೊ ಶ್ರೀರಾಮನು ವನದಲ್ಲಿ ಸಂಚರಿಸುತ್ತ ಒಂದು ಪರ್ವತಕ್ಕೆ ಹೋದರೆ ಅದು ತನ್ನ ಇಷ್ಟದೇವತೆಯನ್ನು ಕಂಡಂತೆ ಎದುರುಗೊಂಡು ಅಭಿವಂದಿಸಿ ಅರ್ಘ್ಯ ಪಾದ್ಯಾದಿ ಸತ್ಕಾರಗಳನ್ನು ಮಾಡುವುದು. ನಾನಾಪ್ರಕಾರವಾದ ಹೂದೋಟಗಳೂ ತಮ್ಮ ಪುಷ್ಪಫಲಗಳಿಂದ ಆತನಿಗೆ ಸತ್ಕಾರಗಳನ್ನು ಮಾಡುವುವು. ಅರಣ್ಯದಲ್ಲಿ ಮದದಿಂದ ಸೊಕ್ಕಿ ರೋಂಕರಿಸುತ್ತಿರುವ ತುಂಬಿ ಹಿಂಡುಗಳಿಂದ ಒಪ್ಪುತ್ತಿರುವ ಮದ್ದಾನೆಗಳೂ ಆತನನ್ನು ಕಂಡು ಸತ್ಕಾರಗಳನ್ನು ಮಾಡುವುವು! ಪರ್ವತಗಳು ಶ್ರೀರಾಮನ ಶರೀರತಾಪಕ್ಕೆ ಶಾಂತಿಯಾಗುವಂತೆ ಆನಂದಾತಿಶಯದಿಂದ ನಿರರ್ಬದ್ಧರೋದಕಗಳನ್ನು ಕೊಡುವುವು ಮಹಾಭುಜಬಲಪರಾಕ್ರಮವುಳ್ಳ ಅತ್ಯಂತ ಶೂರನಾದ ಶ್ರೀರಾಮನು ಯಾವ ಸ್ಮಳದಲ್ಲಿರುವನೋ ಅಲ್ಲಿ ಭಯವೇ ಇಲ್ಲ. ಅಂಥವನ ಸಂಗಡ ನಾವು ಹೋಗೋಣ ಆ ಮಹಾತ್ಮನ ಪಾದಗಳ ನೆಳಲೇ ನಮಗೆ ಗತಿಯೂ ಪರಮಸುಖವೂ ಅಲ್ಲದೆ ಈ ಮನೆಗಳಿಂದ ನಮಗೇನು ಪ್ರಯೋಜನ ನಮಗೆಲ್ಲರಿಗೂ ಆತನೇ ಒಡೆಯ. ಆತನೇ ಗತಿ. ಆತನೇ ರಕ್ಷಕ. ಆದ್ದರಿಂದ ನಾವು ಆತನ ಸಮೀಪಕ್ಕೆ ಹೋಗೋಣ ನಾವು ಸೀತಾದೇವಿಯ ಸೇವೆಯನ್ನು ಮಾಡಿಕೊಂಡಿರುತ್ತೇದೆ.

**ಮುಂದುವರಿಯುವುದು...**

# ಬೇಸಿಗೆಯಲ್ಲಿ ಸೋಂಪು ಕಾಳಿನ ಶರಬತ್ತು ಕುಡಿಯೋದರ ಪ್ರಯೋಜನಗಳು ಒಂದೆರಡಲ್ಲ



ಬೇಸಿಗೆಯಲ್ಲಿ ಪ್ರತಿಯೊಬ್ಬರೂ ಮನೆಯಲ್ಲಿ ಸೋಂಪು ಕಾಳಿನ ಶರಬತ್ತು ತಯಾರಿಸಿ ಕುಡಿಯಬೇಕು. ಇದು ದೇಹವನ್ನು ತಂಪಾಗಿಸುವುದಲ್ಲದೆ, ಇನ್ನೂ ಹಲವು ಪ್ರಯೋಜನಗಳನ್ನು ನೀಡುತ್ತದೆ.

ಊಟವಾದ ಬಳಿಕ ಆಹಾರ ಬೇಗನೇ ಜೀರ್ಣವಾಗಲೆಂದು ಸೋಂಪು ಕಾಳನ್ನು ತಿನ್ನೋದು ನಮಗೆ ಗೊತ್ತೇ ಇದೆ. ಸೋಂಪು ಕಾಳು ಜ್ಯೂಸ್ ಅಥವಾ ಶರಬತ್ತಿನ ಬಗ್ಗೆ ಕೇಳಿದ್ದೀರಾ? ಬೇಸಿಗೆಯಲ್ಲಿ ಈ ಶರಬತ್ತು ಕುಡಿಯೋದು ಆರೋಗ್ಯಕ್ಕೆ ಪ್ರಯೋಜನಕಾರಿ ಎನ್ನಲಾಗುತ್ತದೆ. ಬೇಸಿಗೆಯಲ್ಲಿ ನಿರ್ಜಲೀಕರಣದ ಸಮಸ್ಯೆ ಹೆಚ್ಚಾಗಿ ಕಾಡುತ್ತದೆ. ಅದಕ್ಕಾಗಿ ದೇಹವನ್ನು ಹೈಡ್ರೇಟ್ ಆಗಿಡುವುದು ಬಹಳ ಮುಖ್ಯ. ನೀರಿನಾಂಶದಿಂದ ಕೂಡಿರುವ ಹಣ್ಣಿನ ಸೇವನೆ, ಸೂಪ್, ಜ್ಯೂಸ್ ನಂತಹ ಪದಾರ್ಥಗಳನ್ನು ಯತೇಚ್ಛವಾಗಿ ಸೇವಿಸಬೇಕಾಗುತ್ತದೆ. ಇವು ದೇಹದಲ್ಲಿನ ಪೋಷಕಾಂಶಗಳ ಕೊರತೆಯನ್ನೂ ನಿವಾರಿಸುತ್ತದೆ.

**ಸೋಂಪು ಕಾಳು:** ಬೇಸಿಗೆಯಲ್ಲಿ ನಿರ್ಜಲೀಕರಣ, ಶಾಖದ ಹೊಡೆತ, ಅತಿಸಾರ, ಟೈಫಾಯಿಡ್‌ನಂತಹ ಸಮಸ್ಯೆಗಳ ಅಪಾಯವು ಹೆಚ್ಚಾಗುತ್ತದೆ. ಇವು ದೇಹದ ಮೇಲೆ ಬಹಳ ಗಂಭೀರ ಮತ್ತು ದೀರ್ಘಕಾಲೀನ ಪರಿಣಾಮಗಳನ್ನು ಬೀರುತ್ತವೆ. ಆದ್ದರಿಂದ, ಬೇಸಿಗೆಯಲ್ಲಿ ಹೆಚ್ಚುವರಿ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳುವಂತೆ ಸೂಚಿಸಲಾಗಿದೆ.



ನಮ್ಮ ಅಡುಗೆಮನೆಯಲ್ಲಿ ಆರೋಗ್ಯಕ್ಕೆ ತುಂಬಾ ಪ್ರಯೋಜನಕಾರಿಯಾದ ಇಂತಹ ಅನೇಕ ಮಸಾಲೆಗಳಿವೆ. ಅವುಗಳಲ್ಲಿ ಒಂದು ಸೋಂಪು ಕಾಳು. ಇಂದು ನಾವು ಬೇಸಿಗೆಯಲ್ಲಿ ಸೋಂಪು ಜ್ಯೂಸ್ ಅಥವಾ ಸೋಂಪು ಶರಬತ್ತು ಕುಡಿಯುವುದರಿಂದಾಗುವ ಪ್ರಯೋಜನಗಳ ಬಗ್ಗೆ ತಿಳಿಯೋಣ.

**ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ:** ಬೇಸಿಗೆಯಲ್ಲಿ, ಸೋಂಪು ಜ್ಯೂಸ್ ಕುಡಿಯುವುದು ನಿಮ್ಮ ರೋಗನಿರೋಧಕ ವ್ಯವಸ್ಥೆಗೆ ಉತ್ತಮವೆಂದು ಪರಿಗಣಿಸಲಾಗುತ್ತದೆ. ಇದರಲ್ಲಿರುವ ವಿಟಮಿನ್ ಸಿ ಮತ್ತು ಆಂಟಿಆಕ್ಸಿಡೆಂಟ್‌ಗಳು ದೇಹದ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ. ಇದು ಶೀತ ಮತ್ತು ಇತರ ವೈರಲ್ ಸೋಂಕುಗಳನ್ನು ತಡೆಯಲು ಸಹಾಯ ಮಾಡುತ್ತದೆ.

**ಡಿಟಾಕ್ಸ್ ಆಗಿ ಕೆಲಸ ಮಾಡುತ್ತದೆ:** ಸೋಂಪು ರಸವನ್ನು ಕುಡಿಯುವುದರಿಂದ ದೇಹದಿಂದ ವಿಷವನ್ನು ಹೊರಹಾಕಲು ಸಹಾಯವಾಗುತ್ತದೆ. ಇದು ಯಕೃತ್ತನ್ನು ಶುದ್ಧಗೊಳಿಸುತ್ತದೆ. ಇದು ದೇಹವನ್ನು ಒಳಗಿನಿಂದ ನಿರ್ವಿಷಗೊಳಿಸುತ್ತದೆ. ಪ್ರತಿದಿನ ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಒಂದು ಲೋಟ ಸೋಂಪು ಶರಬತ್ತು ಕುಡಿಯಬೇಕು.

**ದೇಹಕ್ಕೆ ತಂಪು ನೀಡುತ್ತದೆ:** ಫೆನ್ನೆಲ್ ತಂಪಾಗಿಸುವ ಪರಿಣಾಮವನ್ನು ಹೊಂದಿದೆ. ಇದರ ಸಿರಪ್ ಕುಡಿಯುವುದರಿಂದ ದೇಹದ ಉಷ್ಣತೆ ಸಾಮಾನ್ಯವಾಗಿರುತ್ತದೆ. ಇದನ್ನು ಕುಡಿಯುವುದರಿಂದ, ದೇಹವು ತೀವ್ರವಾದ ಶಾಖದಲ್ಲಿ ಒಳಗಿನಿಂದ ತಂಪಾಗುತ್ತದೆ. ಶಾಖವು ನಿಮ್ಮನ್ನು ಕಾಡುತ್ತಿರುವಾಗ ಅಥವಾ ಬಿಸಿಲಿನಲ್ಲಿ ಹೊರಗೆ ಹೋಗಬೇಕಾದಾಗ ನೀವು ಖಂಡಿತವಾಗಿಯೂ ಅದನ್ನು ಕುಡಿಯಬೇಕು.

**ಜೀರ್ಣಕ್ರಿಯೆಯನ್ನು ಸುಧಾರಿಸುತ್ತದೆ:** ಸೋಂಪು ತಿನ್ನೋದ್ರಿಂದ ಜೀರ್ಣಕ್ರಿಯೆ ಉತ್ತಮವಾಗುತ್ತದೆ ಎನ್ನುವುದು ನಿಮಗೆ ಗೊತ್ತೇ ಇದೆ. ಬೇಸಿಗೆಯಲ್ಲಿ ಸೋಂಪು ಶರಬತ್ತು ಕುಡಿಯುವುದರಿಂದ ಜೀರ್ಣಕ್ರಿಯೆ ಸುಧಾರಿಸುತ್ತದೆ. ಇದರಲ್ಲಿ ಉತ್ತಮ ಪ್ರಮಾಣದ ಫೈಬರ್ ಮತ್ತು ಉತ್ಕರ್ಷಣ ನಿರೋಧಕಗಳಿವೆ. ಇವು ಜೀರ್ಣಕ್ರಿಯೆಯನ್ನು ಸುಧಾರಿಸಲು ಸಹಾಯ ಮಾಡುತ್ತವೆ. ನೀವು ಈ ಶರಬತ್ತು ಪ್ರತಿದಿನ ಕುಡಿದರೆ, ಗ್ಯಾಸ್, ಅಜೀರ್ಣ, ಮಲಬದ್ಧತೆ ಮತ್ತು ಆಮ್ಲೀಯತೆಯಂತಹ ಸಮಸ್ಯೆಗಳಿಂದ ಪರಿಹಾರ ಸಿಗುತ್ತದೆ.

**ತೂಕ ಇಳಿಸಿಕೊಳ್ಳಲು ಸಹಾಯಕ:** ಸೋಂಪು ಕಾಳಿನಲ್ಲಿರುವ ಮೆಥನಾಲ್ ಚಯಾಪಚಯ ಕ್ರಿಯೆಯನ್ನು ವೇಗಗೊಳಿಸಲು ಸಹಾಯ ಮಾಡುತ್ತದೆ. ಇದರ ರಸ ಕುಡಿಯುವುದರಿಂದ ಹೊಟ್ಟೆ ಬಹಳ ಹೊತ್ತು ತುಂಬಿರುವಂತೆ ಭಾಸವಾಗುತ್ತದೆ. ಈ ಸಂದರ್ಭದಲ್ಲಿ, ನೀವು ಅತಿಯಾಗಿ ತಿನ್ನುವುದನ್ನು ತಪ್ಪಿಸಬಹುದು. ನೀವು ತೂಕ ಇಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರೆ, ಸಕ್ಕರೆ ರಹಿತ ಸೋಂಪು ಸಿರಪ್ ಅನ್ನು ನಿಮ್ಮ ಆಹಾರದಲ್ಲಿ ಸೇರಿಸಿಕೊಳ್ಳಬಹುದು.

**ಚರ್ಮವನ್ನು ಕಾಂತಿಯುತವಾಗಿಸುತ್ತದೆ:** ಬೇಸಿಗೆಯಲ್ಲಿ ಚರ್ಮವು ಡ್ರೈ ಆಗುತ್ತದೆ. ಅಂತಹ ಪರಿಸ್ಥಿತಿಯಲ್ಲಿ ಸೋಂಪು ರಸವು ಸಹಕಾರಿಯಾಗಿದೆ. ಸೋಂಪು ಬೀಜದಲ್ಲಿರುವ ಉತ್ಕರ್ಷಣ ನಿರೋಧಕಗಳು ಮತ್ತು ಜೀವಸತ್ವಗಳು ಚರ್ಮವನ್ನು ಆರೋಗ್ಯಕರ ಮತ್ತು ಹೊಳೆಯುವಂತೆ ಮಾಡಲು ಸಹಾಯ ಮಾಡುತ್ತದೆ. ಇದು ದೇಹವನ್ನು ಒಳಗಿನಿಂದ ತಂಪಾಗಿಸುವ ಮೂಲಕ ಚರ್ಮದ ಮೇಲಿನ ಮೊಡವೆಗಳು ಮತ್ತು ದದ್ದುಗಳನ್ನು ಕಡಿಮೆ ಮಾಡುತ್ತದೆ.

# ಮೀನಿನ ಹೆಜ್ಜೆ

• ಗುರಾನಿ



ನಾನರಿಯೇ
ಮೀನಿನ ಹೆಜ್ಜೆ
ನೀರಿನಾಳವ
ಅರಿವ ತಜ್ಞ ನೀನು
ನೀರೇ ಉಸಿರು ಬಸಿರು
ನಾನರಿಯೇ ಮೀನಿನ ಹೆಜ್ಜೆ...
ಬಿಸಿಲು ನೆರಳ
ಚಳಿ ತಂಪಿನ ಪರಿ
ಅರಿಯದ ಚತುರ
ಬಂಧು ಬಳಗವಿಲ್ಲದ
ಕಪಟವರಿಯದ
ಭಾವ ಜೀವಿ ನೀ
ನಾನರಿಯೇ ಮೀನಿನ ಹೆಜ್ಜೆ...
ಬದುಕುವೆನು
ಬಲುಕಾಲವೆಂದರಿತು
ಸ್ವಚ್ಛಂದದಲಿ
ನಲಿದಾಡಿ ಸುಳಿದಾಡಿ
ಬಾಯಾರಿಕೆ ಅರಿಯದೇ
ಬದುಕು ಕಟ್ಟಿಕೊಂಡು
ನಿದ್ರಿಸದೆ ,ಧುತ್ತನೆ
ಮೀನುಗಾರನ ಬಲೆಗೆ
ಸೆಲೆಯಾಗಿ
ಸೆಳೆದೆಳೆದು ಉಸಿರುಸಿರ
ಪರಿತಪಿಸಿ ಪಡಿಯಾಗಿ
ದಡ ಸೇರಿ ಮೂಕನಾಗುವೆ
ನಾನರಿಯೇ ಮೀನಿನ ಹೆಜ್ಜೆ...
ಜೀವವಿರದ
ತಾಜಾ ಮೀನಾಗಿ
ಮಾರ್ಕೆಟ್ ಸೇರಿ
ಇತರೆ ನಿರ್ಜೀವಿಗಳೊಂದಿಗೆ
ಚಂದದಿ ಸಿಂಗರಿಸಿ
ಕೊಳ್ಳುಗರಿಗೆ ದರವಾಗಿ
ತಿನ್ನುಗರಿಗೆ ರುಚಿಯಾಗಿ
ಉಳ್ಳವರ ಬೆಳ್ಳಿಯ ತಟ್ಟೆಯ ತೋರಣವಾಗಿ
ಬಾಯಿ ಚಪ್ಪರಿಸುವ ಬಾಯಲಿ
ಬದುಕು ಅಂತ್ಯಗೊಳಿಸುವೆ
ನಾನರಿಯೇ ಮೀನಿನ ಹೆಜ್ಜೆ...

# ಒಂದು ವಿಶ್



ಟಿ.ನಿರಂಜನಮೂರ್ತಿ

ಯುಗಾಂತ್ಯದಲ್ಲಿ ಬಂದು
ಹೊಸ ಯುಗ ಕಂಡವನಿಗೆ
ಎರಡರ ಅಚ್ಚರಿ ತಾಳೆ
ನೋಡಬೇಕು
ಕೂಡಿ ಕಳೆದರೂ
ಅಜಗಜಾಂತರ ವ್ಯತ್ಯಾಸ
ಮಾತು ಮೌನ ವೇಗ
ರೂಪಾಂತರ ಹೊಂದಿವೆ
ಬೆರಳ ತುದಿಯಲ್ಲೆ
ಕುಣಿಸುತ್ತಿರುವಾಗ
ಕಣ್ಣಿಗೆ ಅಚ್ಚರಿ ಇದೆ
ಜಗತ್ತಿನ ವೇಗ
ನಾಗಾಲೋಟ ಪಡೆದಿದೆ
ಅತ್ತ ದರಿ ಇತ್ತ ಪುಲಿಯಾಗಿ
ನೆಟ್ಟಿಗರು ಇದ್ದಾರೆ
ಯುಗದ ಕಾಲು ಭಾಗ
ದಾಟುತ್ತಿದ್ದೆನೆ. ಆದರೆ
ಒಮ್ಮೆ ಬೆರಗು ಮೂಡಿಸುವ
ದೃಶ್ಯಗಳು ಹಾದು ಹೋದಾಗ
ಎಣಿಕೆ ಮಾಡಿ ಮೈಯೆಲ್ಲ ಕಣ್ಣಾಗಿ
ನಿರೀಕ್ಷಿಸುತ್ತಾ ಕಾವಲಾಗಿ
ಕಾಯುತ್ತಿದ್ದೇನೆ.
ಸಂಭವನೀಯ ಕಾರಣವೇನೇ
ಇರಲಿ ಯುಗಾಂತ್ಯದ
ಕಾಲು ಭಾಗ ಆರಂಭದ
ಕಾಲು ಭಾಗದ
ಹೊಸ್ತಿಲಲ್ಲಿ ಇದ್ದೇನೆ
ಅರ್ಥ ಹೇಳಬೇಕಿಲ್ಲ
ಒಂದು ವಿಶ್ ಸಾಕು...



● ವಾಹನ ಸವಾರರಿಗೆ ವೃತ್ತವನ್ನು ಬಳಸಿಹೋಗಲು ತೊಡಕು ಉಂಟಾಗುತ್ತದೆ ಎಂಬುದು ವಾಹನ ಸವಾರರ ಅಭಿಪ್ರಾಯ

# ಚತುಷ್ಪಥ ರಸ್ತೆ ಕಾಮಗಾರಿ, ವೃತ್ತ ನಿರ್ಮಾಣ: ಅಪಘಾತದ ಅಪಾಯ

• **ಉದಯವಾಹಿನಿ ಶೃಂಗೇರಿ**

ಪಟ್ಟಣದ ಮೂಲಕ ಹಾದುಹೋಗಿರುವ ರಾಷ್ಟ್ರೀಯ ಹೆದ್ದಾರಿ 169ರಲ್ಲಿ ವೀರಪ್ಪಗೌಡ ವೃತ್ತದ (ಶಂಕರಾಚಾರ್ಯ ವೃತ್ತ) ಬಳಿಯ ರಸ್ತೆ ನಿರ್ಮಾಣ ಕಾಮಗಾರಿ ಅವೈಜ್ಞಾನಿಕವಾಗಿದ್ದು, ಅಪಘಾತ ವಲಯವಾಗಿ ಮಾರ್ಪಡುವ ಸಾಧ್ಯತೆಗಳಿಗೆ ಎಂದು ಸ್ಥಳೀಯರು ದೂರಿದ್ದಾರೆ.

ಶೃಂಗೇರಿ- ಆಗುಂಬೆ ಕಡೆಯಿಂದ ಬರುವ ರಾಜ್ಯ ಹೆದ್ದಾರಿ. ಇನ್ನೊಂದು ಭಾಗದಲ್ಲಿ ಶೃಂಗೇರಿ- ಜಯಪುರ ಕಡೆಯಿಂದ ಬರುವ ರಾಜ್ಯ ಹೆದ್ದಾರಿ, ಶಿವಮೊಗ್ಗ-ಮಂಗಳೂರು ಕಡೆಗೆ ಹಾದುಹೋಗುವ ರಾಷ್ಟ್ರೀಯ ಹೆದ್ದಾರಿ ಚತುಷ್ಪಥ ರಸ್ತೆ, ಮಧ್ಯದಲ್ಲಿ ವೀರಪ್ಪಗೌಡ ವೃತ್ತವಿದ್ದು, ವಾಹನ ಸವಾರರಿಗೆ ವೃತ್ತವನ್ನು ಬಳಸಿಹೋಗಲು ತೊಡಕು ಉಂಟಾಗುತ್ತದೆ ಎಂಬುದು ವಾಹನ ಸವಾರರ ಅಭಿಪ್ರಾಯ.

ಈ ವೃತ್ತದ ಒಂದು ಪಾರ್ಶ್ವದಲ್ಲಿ ನರ್ಸಿಂಗ್ ಶಾಲೆಯಿದ್ದು ಮತ್ತೊಂದು ಪಾರ್ಶ್ವದಲ್ಲಿ ವಸತಿ ಗೃಹ ಹಾಗೂ ಆದಿಚುಂಚನಗಿರಿ ಮಠಕ್ಕೆ ಹೋಗುವ ಪ್ರವೇಶದ್ವಾರವಿದೆ. ಮತ್ತೊಂದೆಡೆ ಪ್ರವಾಸಿ ಕೇಂದ್ರದ ಸಮುಚ್ಚಯ ಹಾಗೂ ಜಲಮಾಪನ ಕೇಂದ್ರ ಇರುವುದರಿಂದ 4 ದಿಕ್ಕುಗಳಲ್ಲಿ ಬರುವ ವಾಹನ ಸವಾರರಿಗೆ ತೊಂದರೆ ಉಂಟಾಗದಂತೆ ವಿಶಾಲವಾದ ವೃತ್ತ ನಿರ್ಮಿಸಬೇಕು. ವೃತ್ತವು ಶಿವಮೊಗ್ಗ-ಮಂಗಳೂರು ಕಡೆಗೆ ಹೋಗುವ ಚತುಷ್ಪತ ರಸ್ತೆಯ ಮಧ್ಯದಲ್ಲಿಯೇ ನೇರವಾಗಿ ಹಾದುಹೋಗಿದೆ.


ಉದಯವಾಹಿನಿ ಚಿತ್ರ

**ರಸ್ತೆ ನಿರ್ಮಾಣ ಕಾಮಗಾರಿ ಅವೈಜ್ಞಾನಿಕ**


ರಸ್ತೆಯ ಪಕ್ಕದಲ್ಲಿಯೇ ತಡೆ ಗೋಡೆ ನಿರ್ಮಿಸಲಾಗಿದೆ. ತಡೆಗೋಡೆ ನಿರ್ಮಿಸಿರುವುದರಿಂದ ಶೃಂಗೇರಿ ಅಥವಾ ಆಗುಂಬೆ ಕಡೆಯಿಂದ ಬರುವ ವಾಹನ ಸವಾರರಿಗೆ ತಡೆಗೋಡೆಯೇ ಅಡ್ಡವಾಗುವುದರಿಂದ ಎದುರಿನಿಂದ ಬರುವ ವಾಹನ ಸವಾರರಿಗೆ ಗಲಿಬಿಲಿಯಾಗಿ ಅಪಘಾತ ಉಂಟಾಗುವ ಸಾಧ್ಯತೆ ಇದೆ. ಈಗಾಗಲೇ ಸಣ್ಣಪುಟ್ಟ ಅಪಘಾತಗಳು ಉಂಟಾಗಿವೆ. ಶೃಂಗೇರಿಗೆ ಪ್ರತಿನಿತ್ಯ ಸಾವಿರಾರು ಪ್ರವಾಸಿಗರು ಬರುವುದರಿಂದ ವೃತ್ತವನ್ನು ವೈಜ್ಞಾನಿಕವಾಗಿ ನಿರ್ಮಿಸಬೇಕು. ಕೆಲವೆಡ ಜಾಗವನ್ನು ಖಾಸಗಿಯವರಿಗೆ ಬಿಟ್ಟು ಅಂಕುಡೊಂಕಾಗಿ ರಸ್ತೆ ನಿರ್ಮಿಸಿರುವ ಬಗ್ಗೆಯೂ ಆಕ್ಷೇಪ ವ್ಯಕ್ತವಾಗಿದೆ. ವೃತ್ತವನ್ನು ಅವೈಜ್ಞಾನಿಕವಾಗಿ ನಿರ್ಮಾಣ ಮಾಡಲಾಗಿದೆ. ಶೃಂಗೇರಿ-ಆಗುಂಬೆ ಮಾರ್ಗದಿಂದ ಬರುವ ವಾಹನ ಸವಾರರಿಗೆ ನಿರ್ಮಿಸಿದ ತಡೆಗೋಡೆಯೇ ಅಡ್ಡವಾಗುತ್ತದೆ. ಸಂಬಂಧಪಟ್ಟ ಇಲಾಖೆ ಈ ಬಗ್ಗೆ ಗಮನ ಹರಿಸಬೇಕು ಎಂದು ಸರ್ಕಾರಿ ಪದವಿ ಪೂರ್ವ ಕಾಲೇಜಿನ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಉಮೇಶ್ ಪುದುವಾಳ್ ಹೇಳಿದರು.

ಪಟ್ಟಣದ ಹೊರವಲಯದಲ್ಲಿ ಈ ಹಿಂದೆ ನಿರ್ಮಾಣ ಮಾಡಿದ್ದ ವೃತ್ತವನ್ನು ಚತುಷ್ಪತ ರಸ್ತೆ ಕಾಮಗಾರಿ ಸಂದರ್ಭದಲ್ಲಿ ತೆಗೆಯಲಾಗಿದೆ. ಶೃಂಗೇರಿಗೆ ಬರುವ ಪ್ರವಾಸಿಗರಿಗೆ ಸ್ವಾಗತ ಕೋರುವ ಈ ವೃತ್ತವು ಸುಸಜ್ಜಿತವಾಗಿ ನಿರ್ಮಾಣ ಮಾಡಬೇಕು ಎಂದು ಪಟ್ಟಣ ಪಂಚಾಯಿತಿ ನಾಮ ನಿರ್ದೇಶಿತ ಸದಸ್ಯ ದಿನೇಶ್ ಶೆಟ್ಟಿ ಒತ್ತಾಯಿಸಿದರು.

**ಎಚ್ಚರಿಕೆ ಫಲಕ ಅಳವಡಿಕೆ**

**ರಾಷ್ಟ್ರೀಯ ಹೆದ್ದಾರಿ 169ರ ಚತುಷ್ಪಥ ರಸ್ತೆ ಕಾಮಗಾರಿ ಈ ಭಾಗದಲ್ಲಿ ನಿರ್ಮಾಣವಾಗುತ್ತಿದ್ದು ಜಯಪುರ ಮತ್ತು ಆಗುಂಬೆ ರಸ್ತೆ ಎತ್ತರವಾಗಿರುವುದರಿಂದ ಸಮಸ್ಯೆಯಾಗಿದೆ. ಈಗ ಆ ಎತ್ತರಕ್ಕೆ ತಕ್ಕಂತೆ ಸಾಧ್ಯವಾದಷ್ಟು ವೃತ್ತ ನಿರ್ಮಿಸುತ್ತಿದ್ದೇವೆ. ವೃತ್ತದ ಬಳಿ ಅಪಘಾತವಾಗದಂತೆ ರಸ್ತೆಯನ್ನು ನಿರ್ಮಾಣ ಮಾಡುತ್ತೇವೆ ಹಾಗೂ ವೃತ್ತವನ್ನು ಬಳಸಿ ವಾಹನಗಳು ಸಂಚರಿಸುವ ಎಚ್ಚರಿಕೆ ಮಾರ್ಗಸೂಚಿ ಫಲಕಗಳನ್ನು ಅಳವಡಿಸಲಾಗುತ್ತದೆ ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಮಂಜುನಾಥ್ ಕೆ.ವಿ ಹೇಳಿದರು.**

## ಪಹಲ್ಗಾಮ್ ಭಯೋತ್ಪಾದಕ ದಾಳಿಯ ಬಳಿಕ ಕರಾವಳಿ ಭಾಗದಲ್ಲಿ ಭದ್ರತೆ ಬಿಗಿ


ಉದಯವಾಹಿನಿ ಚಿತ್ರ

• **ಉದಯವಾಹಿನಿ ಉಡುಪಿ**

ಜಮ್ಮು ಮತ್ತು ಕಾಶ್ಮೀರದ ಅನಂತನಾಗ್ ಜಿಲ್ಲೆಯ ಪಹಲ್ಗಾಮ್‌ನಲ್ಲಿ ಅಮಾಯಕ ಪ್ರವಾಸಿಗರ ಪ್ರಾಣ ಕಳೆದುಕೊಂಡ ಭಯೋತ್ಪಾದಕ ದಾಳಿಯ ನಂತರ, ಕರ್ನಾಟಕದ ಕರಾವಳಿಯಲ್ಲಿ ಹೆಚ್ಚಿನ ಭದ್ರತಾ ಕ್ರಮಗಳನ್ನು ಜಾರಿಗೊಳಿಸಲಾಗಿದೆ. ಉಡುಪಿ ಜಿಲ್ಲೆಯ ವಿವಿಧ ಕರಾವಳಿ ಪ್ರದೇಶಗಳಲ್ಲಿ ಭದ್ರತೆಯನ್ನು ತೀವ್ರಗೊಳಿಸಲಾಗಿದೆ.

ಭಾರತೀಯ ಕರಾವಳಿ ಕಾವಲು ಪಡೆ ಮತ್ತು ಉಡುಪಿ ಜಿಲ್ಲಾ ಕರಾವಳಿ ಭದ್ರತಾ ಪೊಲೀಸರು ಜಂಟಿಯಾಗಿ ಗುಪ್ತಚರ ಮಾಹಿತಿಯನ್ನು ವಿನಿಮಯ ಮಾಡಿಕೊಳ್ಳುತ್ತಿದ್ದಾರೆ ಮತ್ತು ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಸಂಘಟಿತ ಕಾರ್ಯಾಚರಣೆಗಳನ್ನು ನಡೆಸುತ್ತಿದ್ದಾರೆ.

**ನಿರಂತರ ಗಸ್ತು:** ಕರಾವಳಿ ಮಾರ್ಗದ ಮೂಲಕ ಭಯೋತ್ಪಾದಕ ಚಟುವಟಿಕೆಗಳು ನಡೆಯುವ ಸಾಧ್ಯತೆ ಇರುವುದರಿಂದ, ಕರಾವಳಿ ಭದ್ರತಾ ಪೊಲೀಸರು ನಿರಂತರ ಗಸ್ತು ಕಾರ್ಯಾಚರಣೆ ನಡೆಸುತ್ತಿದ್ದಾರೆ. ಉಡುಪಿ ಜಿಲ್ಲೆಯಲ್ಲಿ ಒಂಬತ್ತು ಕರಾವಳಿ ಭದ್ರತಾ ಪೊಲೀಸ್ ಠಾಣೆಗಳಿದ್ದು, 13 ದೋಣಿಗಳನ್ನು ಬಳಸಿ ಗಸ್ತು ತಿರುಗುತ್ತಿದ್ದಾರೆ.

**ಮೀನುಗಾರರಿಗೆ ಸಲಹೆ:** ಆಳ ಸಮುದ್ರ ಮೀನುಗಾರಿಕೆಯಲ್ಲಿ ತೊಡಗಿರುವ ಮೀನುಗಾರರಿಗೆ ಜಾಗರೂಕರಾಗಿರಲು ಸೂಚಿಸಲಾಗಿದೆ. ಯಾವುದೇ ಅನುಮಾನಾಸ್ಪದ ದೋಣಿ ಚಲನವಲನಗಳು ಅಥವಾ ಸಮುದ್ರದಲ್ಲಿ ಅನುಮಾನಾಸ್ಪದ ವಿದೇಶಿ ಪ್ರಜೆಗಳು ಕಂಡುಬಂದರೆ ತಕ್ಷಣ ವರದಿ ಮಾಡಲು ಅವರಿಗೆ ಸೂಚಿಸಲಾಗಿದೆ.

**ಉಡುಪಿ ಜಿಲ್ಲೆಯಲ್ಲಿ ಯಾವುದೇ ಪಾಕಿಸ್ತಾನಿ ಪ್ರಜೆಗಳಿಲ್ಲ:** ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಿರ್ದೇಶನಗಳನ್ನು ಅನುಸರಿಸಿ, ಪಾಕಿಸ್ತಾನಿ ಪ್ರಜೆಗಳನ್ನು ಪತ್ತೆಹಚ್ಚಲು ದೇಶಾದ್ಯಂತ ತಪಾಸಣೆ ನಡೆಸಲಾಗುತ್ತಿದೆ. ಉಡುಪಿ ಜಿಲ್ಲೆಯಲ್ಲಿ ಯಾವುದೇ ಪಾಕಿಸ್ತಾನಿ ಪ್ರಜೆಗಳು ವಾಸಿಸುತ್ತಿಲ್ಲ ಎಂದು ಪೊಲೀಸ್ ಇಲಾಖೆ ದೃಢಪಡಿಸಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಅರುಣ್ ಕೆ. ಹೇಳಿದರು.

**ಧಾರ್ಮಿಕ ಮತ್ತು ಪ್ರವಾಸಿ ತಾಣಗಳಲ್ಲಿ ತಪಾಸಣೆ**

**ವಿವಿಧ ಗುಪ್ತಚರ ಸಂಸ್ಥೆಗಳು ಈಗಾಗಲೇ ಬಹು ಮಾರ್ಗಗಳ ಮೂಲಕ ಮಾಹಿತಿಯನ್ನು ಸಂಗ್ರಹಿಸಲು ಪ್ರಾರಂಭಿಸಿವೆ. ಮಲ್ಪೆ ಬೀಚ್, ಬಂದರು ಪ್ರದೇಶಗಳು, ಶ್ರೀ ಕೃಷ್ಣ ಮಠ, ರೈಲ್ವೆ ನಿಲ್ದಾಣಗಳು ಮತ್ತು ಇತರ ಧಾರ್ಮಿಕ ಮತ್ತು ಪ್ರವಾಸಿ ತಾಣಗಳಲ್ಲಿ ಶ್ವಾನ ದಳಗಳನ್ನು ಬಳಸಿಕೊಂಡು ಶೋಧ ಕಾರ್ಯಾಚರಣೆ ನಡೆಸಲಾಗುತ್ತಿದೆ. ಸಮುದ್ರ ರಕ್ಷಣಾ ವಿಭಾಗದ ಸದಸ್ಯರು ಗ್ರಾಮೀಣ ಪ್ರದೇಶಗಳಲ್ಲಿ ಬೀಡುಬಿಟ್ಟು ಸ್ಥಳೀಯ ಜನರಿಂದ ಮಾಹಿತಿ ಸಂಗ್ರಹಿಸುತ್ತಿದ್ದಾರೆ. ಇಲ್ಲಿಯವರೆಗೆ, ಯಾವುದೇ ಅನುಮಾನಾಸ್ಪದ ವ್ಯಕ್ತಿಗಳು ಕಂಡುಬಂದಿಲ್ಲ.**

## ಸಶಕ್ತ ರಾಷ್ಟ್ರವನ್ನಾಗಿ ರೂಪಿಸುವ ಸಂಕಲ್ಪ ಮಾಡಬೇಕು


ಉದಯವಾಹಿನಿ ಚಿತ್ರ

• **ಉದಯವಾಹಿನಿ ಕಮಲನಗರ**

ಯಾರು ತಮ್ಮ ತಂದೆ ತಾಯಿಯನ್ನು ಪ್ರೀತಿಸುತ್ತಾರೋ ದೇಶವನ್ನ ಯಾರು ಪ್ರೀತಿಸುತ್ತಾರೋ ಅವರೇ ದೇಶ ಭಕ್ತರು ಇಂದಿನ ಯುವಕರು ಮುಂದೆ ಬಂದು ದೇಶಭಕ್ತಿಯನ್ನು ಮಾಡಬೇಕು ಹ .ಭ. ಪ. ಮೌಲಿ ಹೇಳಿದರು.

ತಾಲ್ಲೂಕಿನ ಹೊಳೆಸಮುದ್ರ ಗ್ರಾಮದಲ್ಲಿ ಪ್ರತಿ ವರ್ಷದಂತೆ ಈ ವರ್ಷ ಕೂಡಾ ಎಪ್ರಿಲ್ 20 ರಿಂದ ಜರಗುತ್ತಿರುವ ಏಳನೇ ದಿನದ 53ನೇ ವರ್ಷದ ಅಖಂಡ ಹರಿನಾಮ ಸಪ್ತಾಹ ಮತ್ತು ಜ್ಞಾನೇಶ್ವರಿ ಪಾರಾಯಣ ನಿಮಿತ್ತ ಮಂಡಳಿ ವತಿಯಿಂದ ನಡೆಯುವ ಕೀರ್ತನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ಉದ್ದೇಶಿಸಿ ಈ ದಿಸೆಯಲ್ಲಿ ಪ್ರಯತ್ನವನ್ನು ಮುಂದುವರೆದು ದೇಶ ಪ್ರೇಮವನ್ನು ಕಾಪಾಡಿಕೊಂಡು ಭಾರತಮಾತೆಯ ಕೊಟ್ಟಿರುವ ಸಂಸ್ಕೃತಿಯನ್ನು ಮರೆಯದೆ ಬದುಕು ಬಾಳುವ ಬದುಕು ನಮ್ಮದಾಗಬೇಕೆಂದು ಬಾಲಕೀರ್ತನ ಕಾರರಾದ ಹ.ಭ.ಪ. ಮಾವುಲಿ ಮಹಾರಾಜ್ ಜಾಹುರ್ಕರ್ ಹೇಳಿದರು. ವಯಸ್ಸು ಚಿಕ್ಕದಾದರೂ ಮಹಾರಾಜರು ಇಂದಿನ ಪರಿಸ್ಥಿತಿಯ ಅನುಗುಣವಾಗಿರುವ ದೃಷ್ಟಾಂತವನ್ನು ನೀಡುವ ಮೂಲಕ ಯುವಕರನ್ನು ಎಚ್ಚರಗೊಳ್ಳುವಂತೆ ಯುವ ಶಕ್ತಿಯಲ್ಲಿ ಆನೆ ಶಕ್ತಿ ಇರುವಂತೆ ತಮ್ಮ ಕಾರ್ಯವನ್ನು ತಾವು ಮಾಡಬೇಕು ಎಂದು ಸಲಹೆ ನೀಡಿದರು. ಮತ್ತೊಬ್ಬರಿಗೆ ಉಪಕಾರ ಮಾಡುವಂತಹ ಕೆಲಸ ಮಾಡಬೇಕು ತಾಯಿ ತಂದೆಯವರಿಗೆ ಎಂದು ಮರೆಯಬಾರದು ನಮ್ಮ ನೆಮ್ಮದಿ ಜೀವನ ಹಾಳು ಮಾಡದೆ ಜೀವನ ಪ್ರಯತ್ನ ನಗುನಗುತ್ತಾ ನೆಮ್ಮದಿ ಶಾಂತಿ ಸಮಾಧಾನದಿಂದ ಇರುವುದನ್ನು ಕಲಿಯಬೇಕು.

ಒತ್ತಡದ ಜಗತ್ತನ್ನು ಬಿಟ್ಟು ಮಾನವ ಜೀವಿ ಎಲ್ಲಾ ಜೀವಿಗಳಿಗಿಂತ ಸರ್ವಶ್ರೇಷ್ಠ ಜೀವಿ ಅದಕ್ಕಾಗಿ ಅಹಂಕಾರಕ್ಕೆ ಒಳಗಾಗದೆ ಪ್ರೀತಿ ಪ್ರೇಮದಿಂದ ಗುರುಹಿರಿಯರನ್ನ ಹಾಗೂ ದೇಶವನ್ನು ಪ್ರೀತಿಸುವದು ಅವಶ್ಯಕತೆ ಇದೆ ಎಂದು ಕಿವಿ ಮಾತು ಹೇಳಿದರು.

## ಪಹಲ್ಗಾಮ್ ಭಯೋತ್ಪಾದಕ ಕೃತ್ಯ ಖಂಡಿಸಿ ಬೀದಿಬದಿ ವ್ಯಾಪಾರಸ್ಥರಿಂದ ತೀವ್ರ ಪ್ರತಿಭಟನೆ

• **ಉದಯವಾಹಿನಿ ಅಥಣಿ**

ಜಮ್ಮು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ಉಗ್ರರು ನಡೆಸಿದ ದಾಳಿಯನ್ನು ಖಂಡಿಸಿ, ಪಟ್ಟಣದ ಬೀದಿಬದಿ ವ್ಯಾಪಾರಿಗಳ ಸಂಘದಿಂದ ರಾತ್ರಿ ಕ್ಯಾಂಡಲ್ ಮಾರ್ಚ್ ಮೂಲಕ ಪ್ರತಿಭಟನೆ ನಡೆಸಲಾಯಿತು. ಇದೇ ವೇಳೆ ದಾಳಿಯಲ್ಲಿ ಮೃತರಾದವರಿಗೆ ಮೌನಾಚರಣೆ ಮಾಡುವ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಅಮಾಯಕ ಜನರ ಸಾವಿಗೆ ಕಾರಣರಾದ ಉಗ್ರರಿಗೆ ಹಾಗೂ ಕೃತ್ಯ ನಡೆಸಲು ಸಹಕರಿಸಿದವರಿಗೆ ತಕ್ಕ ಶಿಕ್ಷೆ ನೀಡಬೇಕು ಎಂದು ಪ್ರತಿಭಟನಾಕಾರರು ಕೇಂದ್ರ ಸರ್ಕಾರವನ್ನು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಬೀದಿ ಬದಿ ವ್ಯಾಪಾರಿಗಳ ಸಂಘದ ಅಧ್ಯಕ್ಷ ಮನ್ಸೂರ್ ಬಾಗವಾನ ಮಾತನಾಡಿ ಈ ದಾಳಿಯು ಮಾವೀಯತೆಯ ಮೇಲಿನ ದಾಳಿಯಾಗಿದ್ದು ಭಾರತದಲ್ಲಿರುವ ನಾವು ಹಿಂದೂ ಮುಸ್ಲಿಂ ಬಾಯಿ ಬಾಯಿ ಎಂದು ವಿವಿಧತೆಯಲ್ಲಿ ಏಕತೆಯಿಂದ ಬದುಕುತ್ತಿದ್ದು ಶಾಂತಿ ಕದಡುವ ಹುನ್ನಾರವನ್ನು ನಡೆಸುತ್ತಿರುವ ಕೆಲವು ಕ್ಷುದ್ರಶಕ್ತಿಗಳನ್ನು ಕೇಂದ್ರ ಸರ್ಕಾರ ಕೂಡಲೇ ಸೇದೆ ಬಡಿಯುವ ಕೆಲಸವನ್ನು ಮಾಡಬೇಕು ಮತ್ತು ಇಂತಹ ವಿಧ್ವಂಸಕ ಕೃತ್ಯದಲ್ಲಿ ತೊಡಗಿದವರನ್ನು ಸಾಧ್ಯವಾದರೆ ಬಂಧಿಸಿ ಸಾರ್ವಜನಿಕವಾಗಿ ಅವರ ದೇಹದ ಅಂಗಗಳನ್ನು ಕತ್ತರಿಸುವ ಮೂಲಕ ಕಠಿಣ ಕ್ರಮ ಕೈಗೊಳ್ಳುವ ಮೂಲಕ ಭಯೋತ್ಪಾದನೆ ಕೃತ್ಯಕ್ಕೆ ಕಠಿಣ ಶಿಕ್ಷೆ ಇದೆ ಎಂಬುದನ್ನು ಸಾಬೀತು ಮಾಡಬೇಕು ಎಂದು ಸರ್ಕಾರವನ್ನು ಆಗ್ರಹಿಸಿದ ಅವರು ಉಗ್ರವಾದವನ್ನು ಬೇರು ಸಹಿತ ಕಿತ್ತೆಸೆಯಲು ಸರ್ಕಾರ ಕಠಿಣ ಕ್ರಮಗಳನ್ನು ಜಾರಿಗೊಳಿಸುತ್ತಿದ್ದು ಅದಕ್ಕೆ ಭಾರತೀಯರು ಬೆಂಬಲವಾಗಿ ನಿಲ್ಲಬೇಕು ಎಂದರು. ಪಟ್ಟಣದ ನೂರಾರು ಬೀದಿಬದಿಯ ವ್ಯಾಪಾರಸ್ಥರು ಭಾಗಿಯಾಗಿದ್ದು ಪಟ್ಟಣದ ಹಂಜಿ ಆಸ್ಪತ್ರೆಯಿಂದ ಪ್ರಾರಂಭವಾದ ಕ್ಯಾಂಡಲ್ ಮಾರ್ಚ್ ಪ್ರತಿಭಟನೆಯು ಅಂಬೇಡ್ಕರ್ ವೃತ್ತದಲ್ಲಿ ಜಮಾವಣೆಗೊಂಡು ಮೌನಾಚರಣೆ ಮಾಡುವ ಮೂಲಕ ಸಮಾರೋಪಗೊಂಡಿತು.




ಉದಯವಾಹಿನಿ ಚಿತ್ರ

## ನಿರ್ವಹಣೆ ಇಲ್ಲದ ಶೌಚಾಲಯ: ಜನರ ಪರದಾಟ

• **ಉದಯವಾಹಿನಿ ರಾಣೆಬೆನ್ನೂರು**

ನಗರದ ಸಾರ್ವಜನಿಕ ಶೌಚಾಲಯಗಳು ಮೂಲ ಸೌಕರ್ಯ ಮತ್ತು ಸಮರ್ಪಕ ನಿರ್ವಹಣೆ ಇಲ್ಲದೇ ಸೊರಗುತ್ತಿವೆ. ಗ್ರಾಮೀಣ ಪ್ರದೇಶಗಳಿಂದ ನಗರಕ್ಕೆ ಬರುವ ಮಹಿಳೆಯರು, ಮಕ್ಕಳು ಮತ್ತು ವಯೋವೃದ್ಧರು ಪರದಾಡುವಂತಾಗಿದೆ.

ನಗರಕ್ಕೆ ಬೇರೆ ಜಿಲ್ಲೆ, ತಾಲ್ಲೂಕಿನ ವಿವಿಧ ಗ್ರಾಮಗಳಿಂದ ನಿತ್ಯವೂ ಸಾವಿರಾರು ಜನರು ಬಂದು ಹೋಗುತ್ತಾರೆ. ಇಂಥವರ ಅನುಕೂಲಕ್ಕಾಗಿ ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಆದರೆ, ನಿರ್ವಹಣೆ ಮಾಡಬೇಕಾದ ನಗರಸಭೆ ಅಧಿಕಾರಿಗಳು ಹೊಣೆಗಾರಿಕೆ ಮರೆತು ನಿರ್ಲಕ್ಷ ತೋರಿದ್ದಾರೆ. ಸ್ವಾಮಿ ವಿವೇಕಾನಂದ ಮಳಿಗೆಯಲ್ಲಿರುವ ಶೌಚಾಲಯ ನಿರ್ವಹಣೆ ಇಲ್ಲದೇ. ಅನೇಕ ವರ್ಷಗಳಿಂದ ಅದರ ಬಾಗಿಲನ್ನು ಶಾಶ್ವತವಾಗಿ ಬಂದ್ ಮಾಡಲಾಗಿದೆ. ಇದರಿಂದಾಗಿ ತಾಲ್ಲೂಕು ಪಂಚಾಯಿತಿ ಕಚೇರಿಯ ಶೌಚಾಲಯವನ್ನೇ ಸಾರ್ವಜನಿಕರು ಬಳಸುವಂತಾಗಿದೆ. ಸಂಗಮ ವೃತ್ತ ಬಳಿಯ ನಗರಸಭೆ ಶೌಚಾಲಯ ಗಬ್ಬು ನಾರುತ್ತಿದೆ. ಶೌಚಾಲಯದ ಗೋಡೆಗಳು, ಮೆಟ್ಟಿಲು ಕಲ್ಲು ಕಿತ್ತಿದ್ದರಿಂದ ಶಿಥಿಲಗೊಂಡಿದೆ. ಮದ್ಯದ ಪೊಟ್ಟಣ, ಶೌಚಾಲಯದ ಒಳಗಡೆ ಎಲೆ ಅಡಿಕೆ, ಗುಟ್ಕಾ ತಿಂದು ಉಗುಳಿದ್ದರಿಂದ ಕೆಟ್ಟ ವಾಸನೆ ಬೀರುತ್ತಿದೆ. ಜನತೆ ಮೂಗು ಮುಚ್ಚಿಕೊಂಡು ಓಡಾಡುವಂತಾಗಿದೆ.


ಉದಯವಾಹಿನಿ ಚಿತ್ರ

**ಹೊಣೆಗಾರಿಕೆ ಮರೆತು ನಿರ್ಲಕ್ಷ್ಯ**

**ರಂಗನಾಥ ನಗರ ರಸ್ತೆ:** ಇಲ್ಲಿರುವ ಪುರುಷ ಮತ್ತು ಮಹಿಳೆಯರ ಪ್ರತ್ಯೇಕ ಶೌಚಾಲಯ ಬಳಕೆಯಾಗದೇ ಹಾಳು ಬಿದ್ದಿವೆ. ಪುರುಷರ ಶೌಚಾಲಯಲಕ್ಕೆ ಬೀಗ ಜಡಿಯಲಾಗಿದೆ. ನಿರ್ವಹಣೆ ಇಲ್ಲದಿದ್ದಕ್ಕೆ ಆವರಣದಲ್ಲಿ ಕಸ, ಪ್ಲಾಸ್ಟಿಕ್, ರಟ್ಟು, ಖಾಲಿ ಬಾಟಲಿ ತಂದು ಹಾಕಿದ್ದಾರೆ. ಹಗಲಿನಲ್ಲಿ ಜನರು ಮೂತ್ರ ವಿಸರ್ಜನೆ ಮಾಡುತ್ತಾರೆ.

**ಶೌಚಾಲಯವಿಲ್ಲದ ರಸ್ತೆಗಳು:** ದೊಡ್ಡಪೇಟೆ ತರಕಾರಿ ಮಾರುಕಟ್ಟೆ, ರೈಲ್ವೆ ನಿಲ್ದಾಣ, ಎಂ.ಜಿ. ರಸ್ತೆ, ದೊಡ್ಡಪೇಟೆ ಮುಖ್ಯ ರಸ್ತೆ, ಹುಣಸೀಕಟ್ಟಿ ರಸ್ತೆಯಿಂದ ಉರ್ದು ಹೈಸ್ಕೂಲ್‌ವರೆಗೆ, ಗುತ್ತಲ ಬಸ್ ನಿಲ್ದಾಣ ವೃತ್ತ, ಹಲಗೇರಿ ವೃತ್ತ ಡಾ. ಪುನೀತ್ ರಾಜ್‌ಕುಮಾರ್ ವೃತ್ತ, ಬೈಪಾಸ್ ರಸ್ತೆಯಿಂದ ಹಲಗೇರಿ ವೃತ್ತದವರೆಗೆ, ಹಳೇ ಪಿ.ಬಿ.ರಸ್ತೆಯ ಮಾಗೋಡ ವೃತ್ತದಿಂದ ಸಿದ್ದೇಶ್ವರನಗರದ ವೃತ್ತದ ವರೆಗೆ, ಸರ್ಕಾರಿ ಪದವಿ ಕಾಲೇಜಿನಿಂದ ಬಸ್ ನಿಲ್ದಾಣದವರೆಗೆ ಶೌಚಾಲಯಗಳೇ ಇಲ್ಲ. ಇದರಿಂದ ಈ ರಸ್ತೆಗಳಲ್ಲಿ ಸಂಚರಿಸುವ ಜನರು, ಮೂತ್ರ ವಿಸರ್ಜನೆಗೆ ಪರದಾಡುತ್ತಿದ್ದಾರೆ.

ಬೆರಳೆಣಿಕೆಯಲ್ಲಿ ಇರುವ ಶೌಚಾಲಯಗಳು, ನೀರು ಮತ್ತು ನಿರ್ವಹಣೆ ಕೊರತೆಯಿಂದ ಹಾಳಾಗುತ್ತಿವೆ. ನಗರಕ್ಕೆ ಬಂದ ಎಲ್ಲರಿಗೂ ಬಸ್ ನಿಲ್ದಾಣದ ಶೌಚಾಲಯವೇ ಗತಿಯಾಗಿದೆ. ಪುರುಷರು ರಸ್ತೆ ಬದಿ, ಖಾಲಿ ನಿವೇಶನ, ಪಾಳು ಬಿದ್ದ ಕಟ್ಟಡ ಬಳಿ ಮೂತ್ರ ವಿಸರ್ಜನೆ ಮಾಡುತ್ತಿದ್ದಾರೆ. ಮಹಿಳೆಯರು ಪಾಡು ಹೇಳತೀರದಾಗಿದೆ.

**ರಾಣೆಬೆನ್ನೂರಿನ ವಿವಿಧೆಡೆ ಶೌಚಾಲಯ ನಿರ್ಮಿಸಲಾಗಿದ್ದು ಅದರ ಬಾಗಿಲು ಹಾಕಲಾಗಿದೆ. ಬಾಗಿಲು ತೆರೆದು ಬಳಕೆಗೆ ಮುಕ್ತಗೊಳಿಸಬೇಕು**
**-ಗಣೇಶ ಕೆ. ಸ್ಥಳೀಯ ನಿವಾಸಿ**

## ಸಿವಿಲ್ ಕಾಮಗಾರಿ ಚಾಲನೆ

• **ಉದಯವಾಹಿನಿ ಹುಕ್ಕೇರಿ**

ತಾಲ್ಲೂಕಿನ ಹಿರಣ್ಯಕೇಶಿ ಸಹಕಾರ ಸಕ್ಕರೆ ಕಾರ್ಖಾನೆಯಲ್ಲಿ ಶನಿವಾರ ಕಾಮಗಾರಿ ವಿಭಾಗದ ಸಿವಿಲ್ ಕೆಲಸಗಳಾದ ಮಿಲ್ ಮತ್ತು ಬೈಲಿಂಗ್ ಹೌಸ್‌ಗಳಲ್ಲಿ ಚರಂಡಿ ಮತ್ತು ಟ್ರೀಮಿಕ್ಸ್ ಫ್ಲೋರಿಂಗ್ ಮಾಡುವ ಕೆಲಸಗಳ ಭೂಮಿಪೂಜೆಗೆ ಮಲ್ಲಿಕಾರ್ಜುನ ಬಾಬಾಗೌಡ ಪಾಟೀಲ (ಹಿರಾ ಶುಗರ್ಸ್ ಸಂಸ್ಥಾಪಕ ಅಧ್ಯಕ್ಷ ಅಪ್ಪಣಗೌಡ ಪಾಟೀಲ ಅವರ ಮೊಮ್ಮಗ) ಚಾಲನೆ ನೀಡಿದರು.

**ಷೇರು ವರ್ಗಾವಣೆಗೆ ಹಣ ಇಲ್ಲ?:** 'ನಮ್ಮ ಕಾರ್ಖಾನೆಯ ಸದಸ್ಯರ ಷೇರು ವರ್ಗಾವಣೆ ಸಂದರ್ಭದಲ್ಲಿ ಠೇವು ಹಣ 5,000 ತುಂಬಿಸಿಕೊಂಡು ಷೇರು ವರ್ಗಾವಣೆ ಮಾಡಲಾಗುತ್ತಿತ್ತು. ಆದರೆ ಇನ್ನು ಮುಂದೆ ಸದಸ್ಯರ ಠೇವು ಹಣ 5,000ವನ್ನು ರದ್ದು ಮಾಡಿ ಷೇರು ವರ್ಗಾವಣೆಗೆ ಅರ್ಜಿ ತೆಗೆದುಕೊಳ್ಳಲು ಮಾಜಿ ಸಂಸದ ಅಣ್ಣಾಸಾಹೇಬ ಜೊಲ್ಲೆ ಅವರ ಮಾರ್ಗದರ್ಶನದಲ್ಲಿ ಆಡಳಿತ ಮಂಡಳಿ ನಿರ್ಧರಿಸಿದೆ ಎಂದು ವೈಸ್ ಚೇರಮನ್ ಅಶೋಕ ಪಟ್ಟಣಶೆಟ್ಟಿ ತಿಳಿಸಿದರು. ಸದಸ್ಯರು ಇದರ ಸದುಪಯೋಗ ಪಡೆಯಬೇಕು ಎಂದು ತಿಳಿಸಿದರು.


ಉದಯವಾಹಿನಿ ಚಿತ್ರ

## ಸೇವಾ ಮನೋಭಾವ ರೂಢಿಸುವ ಎನ್‌ಎಸ್‌ಎಸ್: ಸಂಜಯ

• **ಉದಯವಾಹಿನಿ ಚಿಕ್ಕೋಡಿ**

ಎನ್‌ಎಸ್‌ಎಸ್ ಶಿಬಿರವು ವಿದ್ಯಾರ್ಥಿಗಳಲ್ಲಿ ದೇಶಭಕ್ತಿ, ಸೇವಾ ಮನೋಭಾವ, ನಾಯಕತ್ವದ ಗುಣ, ಧೈರ್ಯವನ್ನು ಬೆಳೆಸುವ ಮೂಲಕ ಪ್ರಬುದ್ಧ ನಾಗರಿಕರನ್ನಾಗಿಸುತ್ತದೆ. ಇಡೀ ಜಗತ್ತು ಇಂದು ದೇಶದತ್ತ ನೋಡುತ್ತಿದ್ದು, ದೇಶದ ಪ್ರಗತಿಯಲ್ಲಿ ಯುವ ಜನಾಂಗದ ಕೊಡುಗೆ ಮಹತ್ತರವಾಗಿದೆ' ಎಂದು ಚಿಕ್ಕೋಡಿಯ ಸಿಟಿಇ ಸಂಸ್ಥೆಯ ನಿರ್ದೇಶಕ ಸಂಜಯ ಅಡಕೆ ಹೇಳಿದರು. ತಾಲ್ಲೂಕಿನ ಮಲಿಕವಾಡ ಗ್ರಾಮದಲ್ಲಿ ಚಿಕ್ಕೋಡಿಯ ಶ್ರೀಮತಿ ಎ.ಎ. ಪಾಟೀಲ ಮಹಿಳಾ ಮಹಾವಿದ್ಯಾಲಯ ಹಾಗೂ ವಿಜಯಪುರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಎನ್‌ಎಸ್‌ಎಸ್ ಶಿಬಿರದ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಾನ್ನಿಧ್ಯ ವಹಿಸಿದ್ದ ಚಿಕ್ಕೋಡಿ ಚರಮೂರ್ತಿ ಮಠದ ಸಂಪಾದನಾ ಸ್ವಾಮೀಜಿ ಮಾತನಾಡಿ, 'ದೇಶದ ಬೆನ್ನೆಲುಬಾಗಿರುವ ಕೃಷಿ ಹಾಗೂ ಕೃಷಿಕರ ಏಳಿಗೆ ಸರ್ಕಾರ ವಿವಿಧ ಕಾರ್ಯಕ್ರಮ ಹಾಕಿಕೊಳ್ಳಬೇಕು. ಅಲ್ಲದೇ, ಯುವ ಜನಾಂಗ ಎಂಜಿನಿಯರ್, ಡಾಕ್ಟರ್ ಆಗುವುದಷ್ಟೇ ಅಲ್ಲದೇ ರೈತರಾಗಿ ಕೃಷಿ ಕ್ಷೇತ್ರದಲ್ಲೂ ಪ್ರಗತಿ ಸಾಧಿಸುವಂತವರಾಗಬೇಕು' ಎಂದು ಹೇಳಿದರು. ಮಧು ಹಿರೇಮಠ, ಪ್ರತಿಭಾ ಭೋಗಲೆ, ವಿಕಾಸ ಲಕ್ಕೋಳೆ ಅನಿಸಿಕೆ ವ್ಯಕ್ತಪಡಿಸಿದರು. ಸಿಟಿಇ ಸಂಸ್ಥೆಯ ನಿರ್ದೇಶಕ ವಿ.ಸಿ. ಕುಲಕರ್ಣಿ, ಮಲಿಕವಾಡ ಇದ್ದರು.

● ಗಡಿ ಪ್ರದೇಶಲ್ಲಿ ಈಗಾಗಲೇ ಟೋಲ್‌ಗೇಟ್ ಇದ್ದು, 20 ಕಿ.ಮೀ ಅಂತರದಲ್ಲಿ ಮತ್ತೊಂದು ನಿರ್ಮಾಣ

# ಟೋಲ್‌ಗೇಟ್ ನಿರ್ಮಾಣಕ್ಕೆ ಸಿದ್ಧತೆ: ಸ್ಥಳೀಯರ ಅಸಮಾಧಾನ, ಪ್ರತಿಭಟನೆ

• **ಉದಯವಾಹಿನಿ ಕಾಸರಗೋಡು**

ಕುಂಬಳೆಯ ಅರಿಕ್ಕಾಡಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಟೋಲ್‌ಗೇಟ್ ನಿರ್ಮಿಸುವ ಸಂಬಂಧ ಪ್ರಯತ್ನ ನಡೆಯುತ್ತಿದ್ದು, ಸಾರ್ವಜನಿಕರಿಂದ ಪ್ರತಿರೋಧ ವ್ಯಕ್ತವಾಗುತ್ತಿದೆ. ಗಡಿ ಪ್ರದೇಶ ತಲಪಾಡಿಯಲ್ಲಿ ಈಗಾಗಲೇ ಟೋಲ್‌ಗೇಟ್ ಇದ್ದು, 20 ಕಿ.ಮೀ ಅಂತರದಲ್ಲಿ ಮತ್ತೊಂದು ಟೋಲ್‌ಗೇಟ್ ನಿರ್ಮಾಣವಾದರೆ ಪ್ರತಿದಿನ ಓಡಾಡುವ ಪ್ರಯಾಣಿಕರಿಗೆ ತೊಂದರೆ ಆಗಲಿದೆ. ರಾಷ್ಟ್ರೀಯ ಹೆದ್ದಾರಿಯಲ್ಲಿ 60 ಕಿ.ಮೀ ಅಂತರದಲ್ಲಿ ಒಂದು ಟೋಲ್‌ಗೇಟ್ ಮಾತ್ರ ಇರಬಹುದು ಎಂಬ ನಿಯಮ ಇದೆ. ಜತೆಗೆ ರಾಷ್ಟ್ರೀಯ ಹೆದ್ದಾರಿಯ ಕಾಮಗಾರಿ ಪೂರ್ಣಗೊಳ್ಳುವ ಮುನ್ನವೇ ಟೋಲ್‌ಗೇಟ್ ನಿರ್ಮಾಣಕ್ಕೆ ಮುಂದಾಗಿರುವುದು ಜನರ ಅಸಮಾಧಾನಕ್ಕೆ ಕಾರಣವಾಗಿದೆ.

ಈ ಬಗ್ಗೆ ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ವಿಭಾಗದ ಅಧಿಕಾರಿಗಳಲ್ಲಿ ವಿಚಾರಿಸಿದಾಗ ಪೆರಿಯ ವಿಶ್ವವಿದ್ಯಾಲಯ ಬಳಿ ಟೋಲ್‌ಗೇಟ್ ನಿರ್ಮಾಣ ನಡೆಯಬೇಕಿದೆ. ಆದರೆ, ಈ ಸಂಬಂಧ ಕಾಮಗಾರಿ ಪೂರ್ಣಗೊಳ್ಳದೆ ಇರುವ ಕಾರಣ ಕುಂಬಳೆಯಲ್ಲಿ ತಾತ್ಕಾಲಿಕವಾಗಿ ಟೋಲ್‌ಗೇಟ್ ನಿರ್ಮಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ. ಆದರೆ, ಪೆರಿಯದಲ್ಲಿ ಯಾವಾಗ ಕಾಮಗಾರಿ ಪೂರ್ಣಗೊಳ್ಳಲಿದೆ ಅಥವಾ ಕುಂಬಳೆಯಲ್ಲಿ ಎಷ್ಟು ಸಮಯ ಸುಂಕ ವಸೂಲಾತಿ ನಡೆಯಲಿದೆ ಎಂಬ ಬಗ್ಗೆ ಉತ್ತರ ಸಿಕ್ಕಿಲ್ಲ.

**ಓಡಾಡುವ ಪ್ರಯಾಣಿಕರಿಗೆ ತೊಂದರೆ**

ಕುಂಬಳೆಯಲ್ಲೂ ಟೋಲ್‌ಗೇಟ್ ನಿರ್ಮಾಣವಾದರೆ ಮಂಗಳೂರಿಗೆ ಪ್ರತಿದಿನ ವಾಹನದಲ್ಲಿ ಓಡಾಡುವವರು ತಲಪಾಡಿ ಟೋಲ್‌ಗೇಟ್‌ನಲ್ಲಿ ತಲಾ 120 ರಂತೆ ಶುಲ್ಕ ನೀಡುತ್ತಿದ್ದು, ಕುಂಬಳೆಯಲ್ಲೂ ಅದೇ ಪ್ರಮಾಣದಲ್ಲಿ ಶುಲ್ಕ ತೆರಬೇಕಾಗಿ ಬರಲಿದೆ. 20 ಕಿ.ಮೀ ಅಂತರದಲ್ಲಿ ಎರಡು ಕಡೆ ಟೋಲ್ ಪಾವತಿಸುವುದು ದುಬಾರಿಯಾಗಲಿದೆ. ಊರಾಲುಂಗಾಲ್ ಸೊಸೈಟಿ ಎಂಬ ಸಂಸ್ಥೆ ರಾಷ್ಟ್ರೀಯ ಹೆದ್ದಾರಿ ನಿರ್ಮಾಣದ ಹೊಣೆ ಹೊತ್ತಿದೆ.

**ಕಾಮಗಾರಿಗೆ ಯೂತ್ ಲೀಗ್ ತಡೆ:** ಈ ಕ್ರಮವನ್ನು ಪ್ರತಿಭಟಿಸಿ ಆರಿಕ್ಕಾಡಿಯಲ್ಲಿ ಟೋಲ್‌ಬೂತ್ ನಿರ್ಮಿಸುವ ಕಾಮಗಾರಿಗೆ ಮುಸ್ಲಿಂ ಯೂತ್ ಲೀಗ್ ಕಾರ್ಯಕರ್ತರು ತಡೆಒಡ್ಡಿ ಪ್ರತಿಭಟಿಸಿದರು. ಅಝೀಜ್ ಕಳತ್ತೂರು, ಎಂ.ಪಿ.ಖಾಲಿದ್ ನೇತೃತ್ವದಲ್ಲಿ ಈ ಪ್ರತಿಭಟನೆ ನಡೆಯಿತು. ನಂತರ ಕುಂಬಳೆ ಪೊಲೀಸರು, ಶಾಸಕ ಎ.ಕೆ.ಎಂ.ಅಶ್ರಫ್ ಅವರು ಮಾತುಕತೆ ನಡೆಸಿದ್ದು, ಪ್ರತಿಭಟನೆ ಕೈಬಿಡಲಾಗಿದೆ.


ಉದಯವಾಹಿನಿ ಚಿತ್ರ

**ಕ್ರಮ ಹಿಂತೆಗೆಯದಿದ್ದರೆ ಅಂದೋಲನ:** ಕುಂಬಳೆಯ ಆರಿಕ್ಕಾಡಿಯಲ್ಲಿ ಟೋಲ್‌ಗೇಟ್ ನಿರ್ಮಾಣ ಅವೈಜ್ಞಾನಿಕವಾಗಿದೆ. ಈ ಕ್ರಮ ವಾಪಸ್ ಪಡೆಯದಿದ್ದರೆ ಸಾರ್ವಜನಿಕರನ್ನು ಒಗ್ಗೂಡಿಸಿ ಅಂದೋಲನ ನಡೆಸುವೆ. ಈಗಾಗಲೇ ಕೇಂದ್ರ ಸಚಿವ ನಿತಿನ್ ಗಡ್ಕರಿ, ಮುಖ್ಯಮಂತ್ರಿ ಪಿಣರಾಯಿ ವಿಜಯನ್, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ರಾಜ್ಯ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು, ಸಂಸದ ರಾಜ್ ಮೋಹನ್ ಉಣ್ಣಿತ್ತಾನ್ ಅವರ ಜೊತೆಗೆ ಮಾತುಕತೆ ನಡೆಸಿದ್ದೇನೆ ಎಂದು ಮಂಜೇಶ್ವರ ಶಾಸಕ ಎ.ಕೆ.ಎಂ.ಅಶ್ರಫ್ ತಿಳಿಸಿದ್ದಾರೆ.

ಜನತೆಯನ್ನು ಸುಲಿಯುವ ಕುತಂತ್ರದ ಫಲವಿದು. ತಕ್ಷಣ ಈ ಕ್ರಮ ಕೈಬಿಡದೆ ಇದ್ದರೆ ಉಗ್ರ ಹೋರಾಟ ನಡೆಸಲಾಗುವುದು ಎಂದು ಮುಸ್ಲಿಂ ಯೂತ್ ಲೀಗ್ ಮುಖಂಡ ಅಝೀಜ್ ಕಳತ್ತೂರು ತಿಳಿಸಿದರು. ಜನಹಿತಕ್ಕೆ ವಿರೋಧವಾಗಿರುವ ಯಾವ ಕ್ರಮವನ್ನೂ ಪಕ್ಷ ಸಹಿಸದು. ಸಾರ್ವಜನಿಕರ ಅಭಿಪ್ರಾಯ ಪಡೆದು, ಸಂಬಂಧಪಟ್ಟ ಕೇಂದ್ರ ಸಚಿವರಲ್ಲಿ, ಅಧಿಕಾರಿಗಳಲ್ಲಿ ಚರ್ಚಿಸಿ, ಕ್ರಮ ಕೈಗೊಳ್ಳಲಾಗುವುದು ಎಂದು ಬಿಜೆಪಿ ಜಿಲ್ಲಾ ಸಮಿತಿ ಅಧ್ಯಕ್ಷೆ ಎಂ.ಎಲ್.ಅಶ್ವಿನಿ ತಿಳಿಸಿದರು.

**ಕ್ರಮ ಹಿಂತೆಗೆಯದಿದ್ದರೆ ಆಂದೋಲನ**

**ಕುಂಬಳೆಯ ಆರಿಕ್ಕಾಡಿಯಲ್ಲಿ ಟೋಲ್‌ಗೇಟ್ ನಿರ್ಮಾಣ ಅವೈಜ್ಞಾನಿಕವಾಗಿದೆ. ಈ ಕ್ರಮ ವಾಪಸ್ ಪಡೆಯದಿದ್ದರೆ ಸಾರ್ವಜನಿಕರನ್ನು ಒಗ್ಗೂಡಿಸಿ ಅಂದೋಲನ ನಡೆಸುವೆ. ಈಗಾಗಲೇ ಕೇಂದ್ರ ಸಚಿವ ನಿತಿನ್ ಗಡ್ಕರಿ, ಮುಖ್ಯಮಂತ್ರಿ ಪಿಣರಾಯಿ ವಿಜಯನ್, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ರಾಜ್ಯ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು, ಸಂಸದ ರಾಜ್ ಮೋಹನ್ ಉಣ್ಣಿತ್ತಾನ್ ಅವರ ಜೊತೆಗೆ ಮಾತುಕತೆ ನಡೆಸಿದ್ದೇನೆ ಎಂದು ಮಂಜೇಶ್ವರ ಶಾಸಕ ಎ.ಕೆ.ಎಂ.ಅಶ್ರಫ್ ತಿಳಿಸಿದ್ದಾರೆ.**

**ಕಾಮಗಾರಿಗೆ ಯೂತ್ ಲೀಗ್ ತಡೆ**

**ಈ ಕ್ರಮವನ್ನು ಪ್ರತಿಭಟಿಸಿ ಆರಿಕ್ಕಾಡಿಯಲ್ಲಿ ಟೋಲ್‌ಬೂತ್ ನಿರ್ಮಿಸುವ ಕಾಮಗಾರಿಗೆ ಮುಸ್ಲಿಂ ಯೂತ್ ಲೀಗ್ ಕಾರ್ಯಕರ್ತರು ತಡೆ ಒಡ್ಡಿ ಪ್ರತಿಭಟಿಸಿದರು. ಅಝೀಜ್ ಕಳತ್ತೂರು, ಎಂ.ಪಿ.ಖಾಲಿದ್ ನೇತೃತ್ವದಲ್ಲಿ ಈ ಪ್ರತಿಭಟನೆ ನಡೆಯಿತು. ನಂತರ ಕುಂಬಳೆ ಪೊಲೀಸರು, ಶಾಸಕ ಎ.ಕೆ.ಎಂ.ಅಶ್ರಫ್ ಅವರು ಮಾತುಕತೆ ನಡೆಸಿದ್ದು, ಪ್ರತಿಭಟನೆ ಕೈಬಿಡಲಾಗಿದೆ. ಜನತೆಯನ್ನು ಸುಲಿಯುವ ಕುತಂತ್ರದ ಫಲವಿದು. ತಕ್ಷಣ ಈ ಕ್ರಮ ಕೈಬಿಡದೆ ಇದ್ದರೆ ಉಗ್ರ ಹೋರಾಟ ನಡೆಸಲಾಗುವುದು ಎಂದು ಮುಸ್ಲಿಂ ಯೂತ್ ಲೀಗ್ ಮುಖಂಡ ಅಝೀಜ್ ಕಳತ್ತೂರು ತಿಳಿಸಿದರು.**

## ಮಿನಿ ನ್ಯೂಸ್

### ಪತ್ರಕರ್ತ ಮಲ್ಲಿಕಾರ್ಜುನ ಕೆಂಭಾವಿಗೆ ಶ್ರೀಶೈಲ ಜಗದ್ಗುರುಗಳಿಂದ ಆಶೀರ್ವಾದ

• **ಉದಯವಾಹಿನಿ ಸಿಂದಗಿ**

ಸಿಂದಗಿ ತಾಲ್ಲೂಕು ಸುಕ್ಷೇತ್ರ ಹೊನ್ನಳ್ಳಿ - ಬ್ರಹ್ಮದೇವನಮಡು ಗ್ರಾಮದ ಕಲ್ಯಾಣದೇಶ್ವರ ಜಾತ್ರಾ ಮಹೋತ್ಸವ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ವಿಜಯವಾಣಿ ಪತ್ರಕರ್ತ ಮಲ್ಲಿಕಾರ್ಜುನ ಎನ್. ಕೆಂಭಾವಿ ಅವರಿಗೆ ಶ್ರೀಶೈಲ ಜಗದ್ಗುರು ಡಾ.ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದರು ಸನ್ಮಾನಿಸಿ ಆಶೀರ್ವದಿಸಿದರು. ಈ ಸಂದರ್ಭದಲ್ಲಿ ಸಣ್ಣ ಕೈಗಾರಿಕಾ ಸಚಿವ ಶರಣಬಸಪ್ಪಗೌಡ ದರ್ಶನಾಪುರ,ಮಾಗಣಗೇರಿ ಬೃಹನ್ಮಠದ ಡಾ.ವಿಶ್ವರಾಧ್ಯ ಶಿವಾಚಾರ್ಯರು,ಯಂಕಂಚಿ ಹಿರೇಮಠದ ಅಭಿನವ ರುದ್ರಮುನಿ ಶಿವಾಚಾರ್ಯರು,ಕೆಂಭಾವಿ ಶ್ರೀಗಳು, ಶ್ರೀಮಠದ ಕಲ್ಯಾಣದಯ್ಯ ಸ್ವಾಮೀಜಿ, ಪ್ರವಚನಕಾರ ಶಂಭುಲಿಂಗ ಹಿರೇಮಠ ಶಾಸ್ತ್ರಿಗಳು,ಚಂದ್ರಶೇಖರ ಪುರಾಣಿಕ, ಮತ್ತಿತ್ತರಿದ್ದರು.


ಉದಯವಾಹಿನಿ ಚಿತ್ರ

### ನಿಂತಿದ್ದ ಲಾರಿಗೆ ಕಾರು ಡಿಕ್ಕಿ: ಮೂವರ ಸಾವು

• **ಉದಯವಾಹಿನಿ ಕಲಬುರಗಿ**

ಸಂಬಂಧಿಕರಿಗೆ ಮದುವೆ ಆಮಂತ್ರಣ ಪತ್ರಗಳನ್ನು ನೀಡಲು ತೆರಳುತ್ತಿದ್ದ ವೇಳೆ ರಸ್ತೆ ಬಂದಿ ನಿಂತಿದ್ದ ಲಾರಿಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಕಾರಿನಲ್ಲಿದ್ದ ಮೂವರು ಸ್ಥಳದಲ್ಲೇ ಸಾವಿಗೀಡಾದ ದಾರುಣ ಘಟನೆ ಸೇಡಂ ತಾಲ್ಲೂಕಿನ ಮಳಖೇಡ ಬಳಿ ಸಂಭವಿಸಿದೆ.

ಮಹೇಶ್ (32) ಪ್ರೇಮಕುಮಾರ್ (25) ಅನ್ನದಾನಯ್ಯ (25) ಸಾವನ್ನಪ್ಪಿದ ದುರ್ದೈವಿಗಳು ಎಂದು ಪೊಲೀಸರು ತಿಳಿಸಿದ್ದಾರೆ. ಘಟನೆಯಲ್ಲಿ ನಿತ್ಯಾನಂದ ಎಂಬಾತ ಗಂಭೀರವಾಗಿ ಗಾಯಗೊಂಡಿದ್ದು ಕಲಬುರಗಿಯ ಜಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ದಾಖಲಿಸಲಾಗಿದೆ. ಕೆಲವೇ ದಿನಗಳಲ್ಲಿ ಮದುವೆ ನಡೆಯಬೇಕಿದ್ದ ಕಾರಣ ಎಲ್ಲಾ ನಾಲ್ವರು ಕಾರಿನಲ್ಲಿ ಸಂಬಂಧಿಕರಿಗೆ ಮದುವೆ ಆಮಂತ್ರಣ ಪತ್ರಗಳನ್ನು ನೀಡಲು ಹೊರಟಿದ್ದರು. ಈ ಮಧ್ಯೆ, ಮಳಖೇಡ ಸಮೀಪದ ರಾಜ್ಯ ಹೆದ್ದಾರಿ ಪಕ್ಕದಲ್ಲಿ ನಿಂತಿದ್ದ ಲಾರಿಗೆ ಕಾರು ಅಪ್ಪಳಿಸಿದ್ದರಿಂದ ಈ ದುರಂತ ನಡೆದಿದೆ. ಮಳಖೇಡ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ವಿದ್ಯುತ್ ತಗುಲಿ ಮಗು ಸಾವು

• **ಉದಯವಾಹಿನಿ ಸೇಡಂ**

ಕುರಿ ಓಡಿಸಲು ಹೋದ ಎರಡೂವರೆ ವರ್ಷದ ಆಯೇಷಾ ಸಿದ್ದಿಖಾ ವಿದ್ಯುತ್ ತಗೂಲಿ ಮಗು ಸಾವು ಒಪ್ಪಿದ ಘಟನೆ ನಿನ್ನೆ ನಡೆದಿದೆ. ತಾಲ್ಲೂಕಿನ ಮಳಖೇಡ ಗ್ರಾಮದಲ್ಲಿರುವ ರಾಷ್ಟ್ರಕೂಟರ ಕೋಟೆ ಒಳಗೆ ಕುರಿ ಮೇಯಿಸಲು ಹೋಗಿದ ದೊಡ್ಡಮ್ಮನ ಜೊತೆ ಮಗು ಹೋಗಿದ್ದು, ಮೊನ್ನೆ ರಾತ್ರಿ ಅತಿ ಹೆಚ್ಚು ಗಾಳಿ ಮಳೆ ಬಂದಿರುವುದರಿಂದ ವಿದ್ಯುತ್ ಕಂಬದ ತಂತಿ ಕಡಿದು ಬಿದ್ದಿರುವುದು ನೋಡದೆ ಇರುವುದರಿಂದ ಮಗುವಿಗೆ ವಿದ್ಯುತ್ ತಗೂಲಿ ಸಾವನ್ನಪ್ಪಿದ್ದು ಮಗುವನ್ನು ರಕ್ಷಿಸಲು ಹೋದ ದೊಡ್ಡಮ್ಮನಿಗೂ ವಿದ್ಯುತ್ ತಗಲಿದ್ದು ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ತಿಳಿದುಬಂದಿದೆ.

### ಜೂನ್ 9 ರವರೆಗೆ ಕಾಲುಬಾಯಿ ರೋಗ ಲಸಿಕಾ ಕಾರ್ಯಕ್ರಮ

• **ಉದಯವಾಹಿನಿ ಚಡಚಣ**

ಪಶುಪಾಲನಾ ಮತು ಪಶುವೈದ್ಯ ಸೇವಾ ಇಲಾಖೆ ವತಿಯಿಂದ ರಾಷ್ಟೀಯ ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮದಡಿ 7ನೇ ಸುತ್ತಿನ ಕಾಲುಬಾಯಿ ರೋಗ ಲಸಿಕಾ ಕಾರ್ಯಕ್ರಮ ಏಪ್ರಿಲ್ 26 ರಿಂದ ಪ್ರಾರಂಭವಾಗಿದ್ದು ಜೂನ್ 9 ರವರಗೆ ನಡೆಯಲಿದೆ ಎಂದು ಮುಖ್ಯ ಪಶುವೈದ್ಯಧಿಕಾರಿ ಡಾ ಎಂ.ಎಸ್ ಗಂಗನಳಿ ತಿಳಿಸಿದರು. ಕಾಲುಬಾಯಿ ಲಸಿಕಾ ಕಾರ್ಯಕ್ರಮದ ಜೊತೆಗೆ ಚರ್ಮಗಂಟು ರೋಗದ ವಿರುದ್ಧ ಲಸಿಕೆಯನ್ನು ಉಚಿತವಾಗಿ ರೈತರ ಮನೆಗೆ ತೆರಳಿ ಹಾಕಲಾಗುತ್ತಿದು ರೈತರು ಇದರ ಸದುಪಯೋಗ ಪಡೆದು ಕೊಳ್ಳಬೇಕು.

ಚಡಚಣ ತಾಲ್ಲೂಕಿನಲಿ 15482 ದನಗಳು 18466 ಎಮ್ಮೆಗಳು ಸೇರಿ ಒಟ್ಟು 33948 ಜಾನುವಾರುಗಳಿವೆ ಒಟ್ಟು ಲಸಕೆದಾರರು 19 ಮತು ಮೇಲೀಚಾರಕರು 4 ಜನರಿದ್ದಾರೆ ಲಸಿಕಾ ಕಾರ್ಯಕ್ರಮಕ್ಕೆ ಪಟ್ಟಣ ಪಂಚಾಯತಿ ಸದಸ್ಯರುಗಳಾದ ಚಂದ್ರಶೇಖರ ಕಲಮನಿ,ರಾಜು ಕೋಳಿ ಅವರು ಗೋವು ಪೂಜೆ ಮಾಡುವದರ ಮೂಲಕ ಚಾಲನೆ ನೀಡಿದರು ಧುರೀಣ ಮಹಾದೇವ ಯಂಕಂಚಿ ಉಪಸ್ಥಿತರಿದ್ದರು .

ಇದೇ ಸಂದರ್ಭದಲ್ಲಿ ಲಸಿಕಾ ಅಭಿಯಾನದ ಕರಪತ್ರವನ್ನು ಬಿಡುಗಡೆ ಮಾಡಲಾಯಿತು.ಸಿಬ್ಬಂದಿಗಳಾದ ಅಶೋಕ ಮಾನೆ, ಎಸ್ ಡಿ ಮೋತಿಭಾಯಿ, ಸಂಗಮೇಶ ಜಾಮಗೊಂಡ, ರಾಜಶೇಖರ ಹಿರೇಮಠ, ಪ್ರೇಮಾ ಬನಸೋಡೆ ಉಪಸ್ಥಿತರಿದ್ದರು.

### ಮೇಣದ ಬತ್ತಿ ಬೆಳಗಿ ಪ್ರತಿಭಟನೆ

• **ಉದಯವಾಹಿನಿ ಮುಂಡರಗಿ**

ಪಹಲ್ಗಾಮ್‌ನಲ್ಲಿ ಹಿಂದೂ ಪ್ರವಾಸಿಗರನ್ನು ಅಮಾನುಷವಾಗಿ ಹತ್ಯೆ ಮಾಡಿರುವ ಉಗ್ರರಿಗೆ ಕಠಿಣ ಶಿಕ್ಷೆ ನೀಡಬೇಕು ಎಂದು ಒತ್ತಾಯಿಸಿ ಪಟ್ಟಣದ ಕೊಪ್ಪಳ ವೃತ್ತದ ಬಳಿ ಪಟ್ಟಣದ ಇಸ್ಲಾಂ ಸಮುದಾಯದವರು ಶನಿವಾರ ರಾತ್ರಿ ಮೇಣದ ಬತ್ತಿ ಬೆಳಗಿ ಪ್ರತಿಭಟನೆ ನಡೆಸಿದರು.

ಪುರಸಭೆಯ ಸ್ಥಾಯಿ ಸಮಿತಿ ಅಧ್ಯಕ್ಷ ರಫೀಕ್ ಮುಲ್ಲಾ, ಎ.ಕೆ.ಮುಲ್ತಾನವರ, ಹುಸೇನಸಾಬ್ ಮುಲ್ಲಾ, ಮಾಬುಸಾಬ್ ವಕಾರದ, ಎಂ.ಕೆ.ತಳಗಡೆ, ರಾಜಾಭಕ್ತಿ ಬೆಟಗೇರಿ, ಜಂದಿಸಾಬ್ ಬಸ್ತಿ, ಮಾಬುಸಾಬ್ ನಾಗರಳ್ಳಿ, ಎಂ.ಎಚ್.ತಳಗಡೆ, ಮೊಹಮ್ಮದಸಾಬ್ ಲೈನದ್, ಶಂಶುದ್ದೀನ್ ವಡ್ಡಟ್ಟಿ, ಖಾಜಾಸಾಬ್ ಕೆಂಪಸಾಬಣ್ಣವರ, ಅಕ್ಬರಸಾಬ್ ಹೋಯಿಲಗೊಳ, ರಿಯಾಜ್ ಕಡ್ಡಿ, ಅಸ್ಲಾಂ ಲಕುಂಡ್ಲಿ, ದಾವಲ್ ಬೆಟಗೇರಿ, ಜಮೀರ್ ಸಯ್ಯದ್ ಉಪಸ್ಥಿತರಿದ್ದರು.


ಉದಯವಾಹಿನಿ ಚಿತ್ರ

ಉದಯ ವಾಹಿನಿ

ದೇಶ/ವಿದೇಶ

ಸೋಮವಾರ
28 ಎಪ್ರಿಲ್ 2025



## ಪಹಲ್ಗಾಮ್ ಭಯೋತ್ಪಾದಕ ದಾಳಿ ಪ್ರಕರಣವನ್ನು ಕೇಂದ್ರ ಗೃಹ ಸಚಿವಾಲಯ ಎನ್‌ಐಎ ತನಿಖೆಗೆ ವಹಿಸಿದೆ

# ಜಮ್ಮು ಮತ್ತು ಕಾಶ್ಮೀರದಲ್ಲಿ 14 ಸ್ಥಳೀಯ ಉಗ್ರರಿಗಾಗಿ ಭದ್ರತಾ ಪಡೆಯಿಂದ ಶೋಧ

**ನವದೆಹಲಿ:** ಪಹಲ್ಗಾಮ್ ಭಯೋತ್ಪಾದಕ ದಾಳಿ ಪ್ರಕರಣವನ್ನು ಕೇಂದ್ರ ಗೃಹ ಸಚಿವಾಲಯ ಎನ್‌ಐಎ ತನಿಖೆಗೆ ವಹಿಸಿದ್ದು, ರಾಷ್ಟ್ರೀಯ ತನಿಖಾದಳದ ಅಧಿಕಾರಿಗಳು ತನಿಖೆಯನ್ನು ಚುರುಕು ಗೊಳಿಸಿದ್ದಾರೆಂದು ತಿಳಿದುಬಂದಿದೆ.

ಏ. 22ರಂದು ಜಮುಕಾಶೀರದ ಪಹಲ್ಗಾಮ್‌ನಲ್ಲಿರುವ ಬೈಸರನ್ ಹುಲ್ಲುಗಾವಲಿನಲ್ಲಿ ಭಯೋತ್ಪಾದಕರ ದಾಳಿಗೆ 26 ಮಂದಿ ಪ್ರವಾಸಿಗರು ಮೃತಪಟ್ಟಿದ್ದರು. ದಾಳಿಯಲ್ಲಿ ಒಬ್ಬ ನೇಪಾಳಿ ಪ್ರಜೆ ಸೇರಿದಂತೆ 26 ಪ್ರವಾಸಿಗರು ಸಾವನ್ನಪ್ಪಿದ್ದರು. ಅಲ್ಲದೆ, 36ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದರು. ದಾಳಿಯ ಹೊಣೆಯನ್ನು ಪಾಕಿಸ್ತಾನ ಮೂಲದ ಉಗ್ರ ಸಂಘಟನೆ ಲಷ್ಕರ್-ಇ-ತೊಬಾಗೆ ಸಂಬಂಧಿಸಿದ ರೆಸಿಸ್ಟೆನ್ಸ್ ಫ್ರಂಟ್ ಹೊತ್ತುಕೊಂಡಿದೆ.

ಈ ಹಿನ್ನೆಲೆಯಲ್ಲಿ ಪ್ರಕರಣದ ಗಂಭೀರತೆಯನ್ನು ಪರಿಗಣಿಸಿ ಗೃಹ ಸಚಿವಾಲಯದ ಭಯೋತ್ಪಾದನಾ ನಿಗ್ರಹ ಮತ್ತು ಪ್ರತಿ-ಆಮೂಲಾಗ್ರೀಕರಣ ವಿಭಾಗವು ತನಿಖೆಯನ್ನು ಎನ್‌ಐಗೆ ವಹಿಸಿದ್ದು, ಹೊಸ ಎಫ್‌ಐಆರ್ ಅನ್ನೂ ಕೂಡ ದಾಖಲಿಸಿದೆ.

ಈ ಉಗ್ರರು, ಹಿಜ್ಬುಲ್ ಮುಜಾಹಿದ್ದೀನ್, ಲಷ್ಕರ್-ಇ-ತೊಬಾ , ಮತ್ತು ಜೈಶ್-ಎ-ಮೊಹಮದ್ ಉಗ್ರ ಸಂಘಟನೆಯೊಂದಿಗೆ ನಂಟು ಹೊಂದಿದ್ದಾರೆಂದು ತಿಳಿದುಬಂದಿದೆ. 14 ಮಂದಿ ಉಗ್ರರನ್ನು ಆದಿಲ್ ರೆಹಮಾನ್ ಡೆಂಟೂ (21), ಆಸಿಫ್ ಅಹದ್ ಶೇಖ್ (28), ಅಹ್ಸಾನ್ ಅಹದ್ ಶೇಖ್ (23), ಹ್ಯಾರಿಸ್ ನಜೀರ್ (20), ಆಮಿರ್ ನಜೀರ್ ವಾನಿ (20), ಯಾವರ್ ಅಹದ್ ಭಟ್, ಆಸಿಫ್ ಅಹದ್ ಖಾಂಡೇ (24), ನಾಸೀರ್ ಅಹದ್ ವಾನಿ (21), ಶಾಹಿದ್ ಅಹದ್ ಕುಟ್ಟೈ (27), ಆಮಿರ್ ಅಹದ್ ದಾರ್, ಅದ್ನಾನ್ ಸಫಿ ದಾರ್, ಜುಬೈರ್ ಅಹದ್ ವಾನಿ (39), ಹರೂನ್ ರಶೀದ್ ಗನೈ (32), ಮತ್ತು ಜಾಕಿರ್ ಅಹದ್ ಗನಿ (29) ಎಂದು ಗುರುತಿಸಲಾಗಿದೆ.

ಆದಿಲ್ ರೆಹಮಾನ್ ಡೆಂಟೂ 2021ರಲ್ಲಿ ಎಲ್‌ಇಟಿಗೆ ಸೇರಿದ್ದು, ಸೋಪೋರ್ ಜಿಲ್ಲಾ ಕಮಾಂಡರ್ ಆಗಿ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದ್ದಾನೆಂದು ತಿಳಿದುಬಂದಿದೆ. ಜೆಇಎಂನ ಭಯೋತ್ಪಾದಕ ಆಸಿಫ್ ಅಹದ್ ಶೇಖ್ ಅವಂತಿಪೋರಾದ ಜಿಲ್ಲಾ ಕಮಾಂಡರ್ ಆಗಿದ್ದು, 2022 ರಿಂದ ನಿರಂತರವಾಗಿ ಭಯೋತ್ಪಾದಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾನೆ. ಅಹ್ಸಾನ್ ಅಹದ್ ಶೇಖ್ ಪುಲ್ವಾಮಾದಲ್ಲಿ ಎಲ್‌ಇಟಿ ಭಯೋತ್ಪಾದಕನಾಗಿ ಸಕ್ರಿಯನಾಗಿದ್ದು, 2023 ರಿಂದ ನಿರಂತರ ವಾಗಿ ಭಯೋತ್ಪಾದಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾನೆ. ಹ್ಯಾರಿಸ್ ನಜೀರ್ ಪುಲ್ವಾಮಾದ ಭಯೋತ್ಪಾದಕ ಮತ್ತು 2023 ರಿಂದ ಎಲ್‌ಇಟಿಯಲ್ಲಿ ಸಕ್ರಿಯನಾಗಿದ್ದಾನೆ, ಆಮಿರ್ ನಜೀರ್ ವಾನಿ ಕೂಡ 2024 ರಿಂದ ಪುಲ್ವಾಮಾದಲ್ಲಿ ಸಕ್ರಿಯ ಭಯೋತ್ಪಾದಕನಾಗಿದ್ದಾನೆ.

ಯಾವರ್ ಅಹದ್ ಭಟ್ ಕೂಡ ಪುಲ್ವಾಮಾದಲ್ಲಿ ಸಕ್ರಿಯನಾಗಿದ್ದು, 2024 ರಿಂದ ಜೆಇಎಂ ಜೊತೆ ನಂಟು ಹೊಂದಿದ್ದಾನೆ. ಆಸಿಫ್ ಅಹದ್ ಖಾಂಡೇ ಜಮು ಮತ್ತು ಕಾಶೀರದ ಶೋಪಿಯಾನ್ ಜಿಲ್ಲೆಯ ಭಯೋತ್ಪಾದಕನಾಗಿದ್ದು, ಜುಲೈ 2015ರಲ್ಲಿ ಹಿಜ್ಬುಲ್ ಮುಜಾಹಿದ್ದೀನ್ ಉಗ್ರ ಸಂಘಟನೆಗೆ ಸೇರ್ಪಡೆಯಾಗಿದ್ದಾನೆ. ಪ್ರಸ್ತುತ ಪಾಕಿಸ್ತಾನಿ ಭಯೋತ್ಪಾದಕರಿಗೆ ಸಹಾಯ ಮಾಡುವ ಭಯೋತ್ಪಾದಕ ಗುಂಪಿನ ಸಕ್ರಿಯ ಸದಸ್ಯನಾಗಿದ್ದಾನೆ. ನಸೀರ್ ಅಹದ್ ವಾನಿ 2019ರಿಂದ ಶೋಪಿಯಾನ್‌ನಲ್ಲಿ ಭಯೋತ್ಪಾದಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾನೆ, ಶಾಹಿದ್ ಅಹದ್ ಕುಟ್ಟೈ, 2023 ರಿಂದ ಎಲ್‌ಇಟಿ ಮತ್ತು ಅದರ ಪ್ರಾಕ್ಸಿ ಗುಂಪು ದಿ ರೆಸಿಸ್ಟೆನ್ಸ್ ಫ್ರಂಟ್ (ಟಿಆರ್‌ಎಫ್) ನೊಂದಿಗೆ ಸಂಪರ್ಕ ಹೊಂದಿದ್ದಾನೆ.



ಪ್ರಕರಣದ ತನಿಖೆ ಚುರುಕು

### ಪ್ರವಾಸಿಗರ ಸಂಖ್ಯೆ ಗಣನೀಯ ಏರಿಕೆ

ಇಪ್ಪತ್ತು ವರ್ಷಗಳಲ್ಲಿ ಈ ಪ್ರದೇಶದಲ್ಲಿ ನಾಗರಿಕರ ಮೇಲೆ ನಡೆದ ಅತ್ಯಂತ ಮಾರಕ ದಾಳಿ ಇದಾಗಿದೆ ಎನ್ನಲಾಗುತ್ತಿದ್ದು, ಘಟನೆ ನಡೆದ ಐದು ದಿನಗಳ ಬಳಿಕ ತನಿಖೆಯನ್ನು ಎನ್‌ಐಎಗೆ ಹಸ್ತಾಂತರಿಸಲಾಗಿದೆ. ಇನ್ನು ಪ್ರಕರಣದ ತನಿಖೆಯನ್ನು ಚುರುಕುಗೊಳಿಸಿರುವ ಎನ್‌ಐಎ, ಭಯೋತ್ಪಾದಕ ದಾಳಿಯಲ್ಲಿ ಬದುಕುಳಿದವರ ಹೇಳಿಕೆಗಳನ್ನು ದಾಖಲಿಸಿದೆ .ಉಪ ಇನ್‌ಸ್ಪೆಕ್ಟರ್ ಜನರಲ್ ಶ್ರೇಣಿಯ ಅಧಿಕಾರಿಯ ನೇತೃತ್ವದ ಎನ್‌ಐಎ ತಂಡವು ದಾಳಿಯ ಮರುದಿನ ಏ.23 ರಂದು ಬೈಸರನ್‌ಗೆ ಭೇಟಿ ನೀಡಿತ್ತು. ಹಲವು ವರ್ಷಗಳ ನಂತರ ಕಾಶೀರದಲ್ಲಿ ಪ್ರವಾಸಿಗರ ಸಂಖ್ಯೆ ಗಣನೀಯವಾಗಿ ಏರಿಕೆಯಾಗುತ್ತಿರುವ ಸಮಯದಲ್ಲಿ ಈ ದಾಳಿ ನಡೆದಿದೆ.

### ಐಎ ತನಿಖೆ ಆರಂಭ

ಈ ನಡುವೆ ಗುಪ್ತಚರ ಸಂಸ್ಥೆಗಳು ಕೇಂದ್ರಾಡಳಿತ ಪ್ರದೇಶದಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿರುವ 14 ಸ್ಥಳೀಯ ಭಯೋತ್ಪಾದಕರ ಪಟ್ಟಿಯನ್ನು ಸಂಗ್ರಹಿಸುತ್ತಿದ್ದು, ಇದರ ನಡುವಲ್ಲೇ ಎನ್‌ಐಎ ತನಿಖೆ ಆರಂಭವಾಗಿದೆ. ಪ್ರಸ್ತುತ ಗುರುತಿಸಲಾಗಿರುವ ಭಯೋತ್ಪಾದಕರು, ಪಾಕಿಸ್ತಾನದ ವಿದೇಶಿ ಭಯೋತ್ಪಾದಕರಿಗೆ ಸಕ್ರಿಯವಾಗಿ ಸಹಾಯ ಮಾಡುತ್ತಿದ್ದಾರೆಂದು ತಿಳಿದುಬದಿದೆ.

---

# ಜಮ್ಮು ಕಾಶ್ಮೀರದಲ್ಲಿ ಪಾಕ್ ಉಗ್ರರ ಬೆಂಬಲಿಗರ ಬೇಟೆ

**ಶ್ರೀನಗರ:** ಪಹಲ್ಯಾಮ್ ದಾಳಿಗೆ ಪ್ರತೀಕಾರವಾಗಿ ಭದ್ರತಾ ಪಡೆಗಳ ಸ್ವಚ್ಛ ಕಾಶ್ಮೀರ ಅಭಿಯಾನ ಮತ್ತಷ್ಟು ತೀವ್ರಗೊಂಡಿದೆ. ಉಗ್ರರ ಮನೆಗಳನ್ನು ಹುಡುಕಿ ಹುಡುಕಿ ಧ್ವಂಸ ಮಾಡುತ್ತಿರುವ ಭದ್ರತಾ ಪಡೆ ಇಬ್ಬರು ಉಗ್ರರ ಮನೆಗಳನ್ನು ಸ್ಫೋಟಿಸಿದೆ.

ಬಂಡಿಪೋರಾದಲ್ಲಿ ಲಷ್ಕರ್-ಎ-ತೈಬಾ ಭಯೋತ್ಪಾದಕ ಜಮೀಲ್ ಅಹ್ಮದ್ ಮನೆಯನ್ನು ಭದ್ರತಾ ಪಡೆಗಳು ಸ್ಫೋಟಿಸಿವೆ. ಈ ಮೂಲಕ ಕಳೆದ ಮೂರು ದಿನಗಳಲ್ಲಿ 9 ಉಗ್ರರ ಮನೆಗಳನ್ನು ಧ್ವಂಸಗೊಳಿಸಿದಂತಾಗಿದೆ. 2016ರಿಂದ ಸಕ್ರಿಯ ಸದಸ್ಯರಾಗಿರುವ ಜಮೀಲ್ ಅವರ ಮನೆಯನ್ನು ಸ್ಫೋಟಿಸುವುದು ಒಂಬತ್ತನೇ ಘಟನೆಯಾಗಿದೆ.

ಭದ್ರತಾ ಪಡೆಗಳು ಈಗ ಅನುಮಾನ ಬಂವರ ಮನೆಗಳನ್ನು ಹುಡುಕಿ ಶಸ್ತ್ರಾಸ್ತ್ರ ಪತ್ತೆ ಮಾಡುತ್ತಿದ್ದಾರೆ. ಉಗ್ರರಿಗೆ ಸಹಕಾರ ನೀಡಿದ ಆರೋಪದ ಅಡಿ ನೂರಾರು ಮಂದಿ ಸಹಚರರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.



ಏತನ್ಮಧ್ಯೆ, ಭದ್ರತಾ ಪಡೆಗಳು ಕಳೆದ ರಾತ್ರಿ ತ್ರಾಲ್‌ನಲ್ಲಿ ಪಾಕಿಸ್ತಾನ ಮೂಲದ ಜೈಶ್-ಎ -ಮೊಹಮ್ಮದ್ ಜೊತೆ ಶಾಮೀಲಾಗಿರುವ ಭಯೋತ್ಪಾದಕ ಅಮೀರ್ ನಜೀರ್‌ನ ಮನೆಯನ್ನು ಸ್ಫೋಟಿಸಿದ್ದಾರೆ. ಕಾಶ್ಮೀರದಲ್ಲಿ ಇಬ್ಬರು ಸಕ್ರಿಯ ಎಲಇಟಿ ಭಯೋತ್ಪಾದಕರ ಮನೆಗಳ ಮೇಲೆ ಬಾಂಬ್ ದಾಳಿ ನಡೆಸಿದ ನಂತರ ಈ ಇತ್ತೀಚಿನ ಬೆಳವಣಿಗೆಗಳು ಸಂಭವಿಸಿವೆ.

ಕಳೆದ ಮೂರು ದಿನಗಳಲ್ಲಿ ಪಹಲ್ಯಾಮ್ ಭಯೋತ್ಪಾದನಾ ದಾಳಿಯ ನಂತರ, ಭದ್ರತಾ ಪಡೆಗಳು, ಜಿಲ್ಲೆಯ ಅಧಿಕಾರಿಗಳ ಜೊತೆಯಲ್ಲಿ ಕಣಿವೆಯಾದ್ಯಂತ ಹಲವಾರು ಭಯೋತ್ಪಾದಕರನ್ನು ಗುರಿಯಾಗಿಸಿ ಅವರ ಆಸ್ತಿಗಳನ್ನು ಧ್ವಂಸಗೊಳಿಸಿದರು ಮತ್ತು ಐಇಡಿಗಳಿಂದ ಸ್ಫೋಟಿಸಿದ್ದಾರೆ.

### ಭಯೋತ್ಪಾದಕರಿಗೆ ಸಹಾಯ

ಶುಕ್ರವಾರ, ಕಾಶ್ಮೀರದ ಬಿಜ್ಜೆಹರಾದಲ್ಲಿ ಪಹಲ್ಯಾಮ್ ಘಟನೆಯಲ್ಲಿ ಭಾಗಿಯಾಗಿರುವ ಪ್ರಮುಖ ಸಂಚುಕೋರ ಲಷ್ಕ್ಯ ಭಯೋತ್ಪಾದಕ ಆದಿಲ್ ಹುಸೇನ್ ಥೋಕರ್ ಅವರ ನಿವಾಸದ ಮೇಲೆ ಭದ್ರತಾ ಪಡೆಗಳು ಬಾಂಬ್ ದಾಳಿ ನಡೆಸಿದ್ದವು. ಏ.22ರಂದು ಪಹಲ್ಗಾಮ್‌ನ ಬೈಸರನ್ ಮೆಡೋಸ್‌ನಲ್ಲಿ ಪ್ರವಾಸಿಗರ ಹತ್ಯೆಯಲ್ಲಿ ಭಾಗಿಯಾಗಿರುವ ಭಯೋತ್ಪಾದಕರಿಗೆ ಸಹಾಯ ಮಾಡುವಲ್ಲಿ ಥೋಕರ್ ನಿರ್ಣಾಯಕ ಪಾತ್ರವಹಿಸಿದ್ದಾರೆ ಎಂದು ನಂಬಲಾಗಿದೆ.


---

# ರಕ್ತದಾಹಿಗಳಿಗೆ ನೀರಿನ ದಾಹ ತೋರಿಸಿದ ಭಾರತ

**ಇಸ್ಲಾಮಬಾದ್:** ಭಾರತವು ಸಿಂಧೂನದಿ ನೀರು ಒಪ್ಪಂದ ಸ್ಥಗಿತಗೊಳಿಸಿದ್ದಕ್ಕೆ ಕೋಪದಲ್ಲಿ ನವದೆಹಲಿಯೊಂದಿಗಿನ ಎಲ್ಲಾ ವ್ಯಾಪಾರ ಸಂಬಂಧವನ್ನೂ ಇಸ್ಲಾಮಾಬಾದ್ ಕಡಿತಗೊಳಿಸಿದ್ದು, ಪಾಕಿಸ್ತಾನ ಕೇವಲ ನೀರಿಗಾಗಿ ಅಲ್ಲ, ಔಷಧಿಗಾಗಿಯೂ ಹಾತೊರೆಯುವ ಸಾಧ್ಯತೆ ಹೆಚ್ಚಿದೆ.

ಪಾಕಿಸ್ತಾನದ ಔಷಧ ನಿಯಂತ್ರಣ ಪ್ರಾಧಿಕಾರ (ಡಿಆರ್‌ಎಪಿ) ಔಷಧ ಕ್ಷೇತ್ರದ ಮೇಲಿನ ನಿರ್ಬಂಧಗಳ ಪರಿಣಾಮದ ಕುರಿತು ಯಾವುದೇ ಔಪಚಾರಿಕ ಅಧಿಸೂಚನೆಯನ್ನು ಹೊರಡಿಸಿಲ್ಲ. ಆದರೆ ಔಷಧಿಗಳ ಕೊರತೆ ಉಂಟಾಗದಂತೆ ತುರ್ತು ಕ್ರಮಗಳನ್ನು ಜಾರಿಗೆ ತರಲಾಗುತ್ತಿದೆ. ನಮ್ಮ ಔಷಧ ಅಗತ್ಯಗಳನ್ನು ಪೂರೈಸಲು ನಾವು ಪರ್ಯಾಯ ಮಾರ್ಗಗಳನ್ನು ನೋಡುತ್ತಿದ್ದೇವೆ ಎಂದು ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಪಾಕಿಸ್ತಾನ, ಚೀನಾ, ರಷ್ಯಾ ಮತ್ತು ಹಲವಾರು ಯುರೋಪಿಯನ್ ದೇಶಗಳಿಂದ ಪರ್ಯಾಯ ಮೂಲಗಳನ್ನು ಹುಡುಕುತ್ತಿದೆ. ರೇಬೀಸ್ ವಿರೋಧಿ ಲಸಿಕೆ, ಹಾವಿನ ವಿಷ ವಿರೋಧಿ, ಕ್ಯಾನ್ಸರ್ ಔಷಧಿಗಳು ಇತ್ಯಾದಿಗಳ ನಿರಂತರ ಪೂರೈಕೆಯನ್ನು ಖಚಿತಪಡಿಸಿಕೊಳ್ಳುವ ಗುರಿಯನ್ನು ಇದು ಹೊಂದಿದೆ.



ಮೈಕೈ ಪರಚಿಕೊಳ್ಳುತ್ತಿರುವ 'ಪಾಪಿ'ಸ್ತಾನ

ವ್ಯವಹಾರ ಸ್ಥಗಿತಗೊಳಿಸುವಿಕೆಯ ಪರಿಣಾಮಗಳನ್ನು ಎದುರಿಸಲು ತಕ್ಷಣದ ಕ್ರಮಗಳನ್ನು ತೆಗೆದುಕೊಳ್ಳದಿದ್ದರೆ, ದೊಡ್ಡ ಸಮಸ್ಯೆ ಉದ್ಭವಿಸಬಹುದು ಎಂದು ಉದ್ಯಮ ಮೂಲಗಳು ಮತ್ತು ಆರೋಗ್ಯ ತಜ್ಞರು ಎಚ್ಚರಿಸಿದ್ದಾರೆ.

ಔಷಧಿಗಳ ಕಾಳಸಂತೆ ಹೆಚ್ಚಳವಾಗುವ ಭಯವೂ ಇದೆ. ಪೂರೈಕೆ ಸರಪಳಿಯಲ್ಲಿನ ಅಡಚಣೆಯಿಂದಾಗಿ ತೀವ್ರ ಕೊರತೆ ಉಂಟಾಗಬಹುದು ಎಂದು ಔಷಧ ವಲಯವು ಭಯ ಪಡುತ್ತಿದೆ. ಅಲ್ಲಿ ಔಷಧಿಗಳಿಗೆ ಬೇಕಾಗುವ ಕಚ್ಚಾ ವಸ್ತುಗಳ ಶೇ.30 ರಿಂದ 40 ರಷ್ಟು ಭಾರತದಿಂದ ಬರುತ್ತವೆ.

---

# ಸೇನಾ ಸಮವಸ್ತ್ರಗಳ ಮಾರಾಟ, ಶೇಖರಣೆಗೆ ನಿಷೇಧ


**ಕಿಶ್ತ್ವಾರ್:** ಜಮ್ಮು ಮತ್ತು ಕಾಶ್ಮೀರದ ಕಿಶ್ತ್ವಾರ್ ಜಿಲ್ಲೆಯಲ್ಲಿ ಸೇನೆಯ ಸಮವಸ್ತ್ರಗಳು, ಯುದ್ಧ ಮಾದರಿಯ ಉಡುಪುಗಳ ಮಾರಾಟ, ಹೊಲಿಗೆ , ಶೇಖರಣೆಯನ್ನು ನಿಷೇಧಿಸಲು ಅಧಿಕಾರಿಗಳು ಆದೇಶ ನೀಡಿದ್ದಾರೆ. ದೇಶ ವಿರೋಧಿ ಶಕ್ತಿಗಳಿಂದ ದುರ್ಬಳಕೆ ಹಿನ್ನೆಲೆಯಲ್ಲಿ ಕಿಶ್ತ್ವಾರ್ ಉಪ ಆಯುಕ್ತ ರಾಜೇಶ್ ಕುಮಾರ್ ಶವನ್ ಈ ನಿಷೇಧಾಜ್ಞೆ ಜಾರಿಗೊಳಿಸಿದ್ದಾರೆ.

ವಿಧ್ವಂಸಕ ಶಕ್ತಿಗಳು ಸಾರ್ವಜನಿಕ ಸುರಕ್ಷತೆ, ಶಾಂತಿ ಮತ್ತು ಭದ್ರತೆಗೆ ಬೆದರಿಕೆಯನ್ನುಂಟು ಮಾಡುತ್ತಿರುವುದನ್ನು ಪರಿಗಣಿಸಿ ತಕ್ಷಣದಿಂದ ಜಾರಿಯಾಗುವಂತೆ ಈ ಆದೇಶ ಹೊರಡಿಸಲಾಗಿದೆ.

ಎಲ್ಲಾ ಅಧಿಕೃತ ಖಾಸಗಿ ಸಂಸ್ಥೆಗಳು ಮತ್ತು ಯುದ್ಧ ಉಡುಪುಗಳನ್ನು ಸಂಗ್ರಹಿಸುವ, ಸಂಗ್ರಹಿಸುವ ಮತ್ತು ಮಾರಾಟ ಮಾಡುವ ಅಂಗಡಿಗಳು ಈ ವ್ಯವಹಾರವನ್ನು ಮುಂದುವರಿಸಲು ತಮ್ಮ ಅಧಿಕಾರದ ಬಗ್ಗೆ ತಕ್ಷಣ ಹತ್ತಿರದ ಪೊಲೀಸ್ ಠಾಣೆಗಳಿಗೆ ಲಿಖಿತವಾಗಿ ತಿಳಿಸಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

ಎಲ್ಲಾ ಅಧಿಕೃತ ವ್ಯಕ್ತಿಗಳು ಖಾಸಗಿ ಸಂಸ್ಥೆಗಳು, ಅಂಗಡಿಗಳು, ಅವರು ತಯಾರಿಸಿದ ಯುದ್ಧ ಖಾದಿ ಉಡುಗೆ, ಬಟ್ಟೆಯ ಎಲ್ಲಾ ಮಾರಾಟದ ವರದಿಗಳನ್ನು ಹದಿನೈದು ದಿನಗಳಿಗೊಮ್ಮೆ ಸಲ್ಲಿಸಬೇಕು, ಜೊತೆಗೆ ಮಾರಾಟವನ್ನು ಮಾಡಿದ ಸೇನೆ, ಅರೆಸೇನಾಪಡೆ, ಪೊಲೀಸ್ ಸಿಬ್ಬಂದಿಯ ವಿವರವಾದ ವಿವರಗಳನ್ನು ಸಲ್ಲಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಈ ಪಟ್ಟಿಯನ್ನು ವಿತರಕರು ಹದಿನೈದು ದಿನಗಳ ಆಧಾರದ ಮೇಲೆ ಸಂಬಂಧಪಟ್ಟ ಸ್ಟೇಷನ್ ಹೌಸ್ ಆಫೀಸರ್‌ಗೆ ನೀಡಬೇಕು. ಅಂತಹ ಎಲ್ಲಾ ವಿವರಗಳನ್ನು ಹೊಂದಿರುವ ರಿಜಿಸ್ಟರ್ ಅನ್ನು ಪ್ರತಿಯೊಬ್ಬ ಡೀಲರ್ ಸರಿಯಾಗಿ ನಿರ್ವಹಿಸಬೇಕು, ಸಕ್ಷಮ ಅಧಿಕಾರಿಗಳು ಅಂಗಡಿಯ ತಪಾಸಣೆ ನಡೆಸಿದಾಗ ಲಭ್ಯವಾಗುವಂತೆ ನೋಡಿಕೊಳ್ಳಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.



ದೇಶ ವಿರೋಧಿ ಶಕ್ತಿಗಳಿಂದ ದುರ್ಬಳಕೆ

---

## ಉಗ್ರರ ದಾಳಿಯಲ್ಲಿ ಮೃತಪಟ್ಟ ನೌಕಾಪಡೆಯ ಅಧಿಕಾರಿ ಕುಟುಂಬಕ್ಕೆ

# 50 ಲಕ್ಷ ರೂ. ಪರಿಹಾರ ಮತ್ತು ಸರ್ಕಾರಿ ಉದ್ಯೋಗ ಘೋಷಣೆ

**ಚಂಡೀಗಢ:** ಇದೇ ಏ.22ರಂದು ಪಹಲ್ಲಾಮ್‌ನಲ್ಲಿ ನಡೆದ ಉಗ್ರರ ದಾಳಿಯಲ್ಲಿ ಮೃತಪಟ್ಟ ನೌಕಾಪಡೆಯ ಅಧಿಕಾರಿ ಲೆಫ್ಟಿನೆಂಟ್ ವಿನಯ್ ನರ್ವಾಲ್ ಅವರ ಕುಟುಂಬಕ್ಕೆ 50 ಲಕ್ಷ ರೂ. ಪರಿಹಾರ ಮತ್ತು ಸರ್ಕಾರಿ ಉದ್ಯೋಗ ನೀಡುವುದಾಗಿ ಹರಿಯಾಣ ಸಿಎಂ ನಯಾಬ್ ಸಿಂಗ್ ಸೈನಿ ಘೋಷಣೆ ಮಾಡಿದ್ದಾರೆ.

ಹರಿಯಾಣದ ಕರ್ನಾಲ್ ನಿವಾಸಿಯಾಗಿದ್ದ ಲೆಫ್ಟಿನೆಂಟ್ ವಿನಯ್ ನರ್ವಾಲ್ ಅವರ ಪತ್ನಿಯೊಂದಿಗೆ ಜಮ್ಮು-ಕಾಶ್ಮೀರಕ್ಕೆ ಹೋದಾಗ ಈ ಹತ್ಯೆ ನಡೆದಿದೆ.


ನರ್ವಾಲ್ ಅವರ ಪೋಷಕರ ಆಶಯದಂತೆ ಕುಟುಂಬದ ಯಾವುದೇ ಸದಸ್ಯರಿಗೆ ಈ ಕೆಲಸವನ್ನು ನೀಡಲಾಗುವುದು ಎಂದು ಸಿಎಂ ಸೈನಿ ಭರವಸೆ ನೀಡಿದ್ದಾರೆ.

ಏ.22ರಂದು ಜಮ್ಮು-ಕಾಶ್ಮೀರದ ಪಹಲ್ಯಾಮ್ ದಾಳಿಯಲ್ಲಿ ಸುಮಾರು 26 ಜನ ಅಮಾಯಕರು ಬಲಿಯಾಗಿದ್ದರು. ಅದರಲ್ಲಿ ಬಹುಪಾಲು ಭಾರತದವರೇ ಇದ್ದರು, ಅವರನ್ನು ಕಳೆದುಕೊಂಡು ಇದೀಗ ಇಡೀ ಕುಟುಂಬ ದುಃಖದ ಕಡಲಲ್ಲಿ ಮುಳುಗಿದೆ.

ದಾಳಿಗೂ ಆರು ದಿನಗಳ ಹಿಂದೆ ಮದುವೆಯಾಗಿದ್ದ ಲೆಫ್ಟಿನೆಂಟ್ ಅಧಿಕಾರಿ ವಿನಯ್ ನರ್ವಾಲ್ ತಮ್ಮ ಪತ್ನಿಯೊಂದಿಗೆ ಹನಿಮೂನೆಂದು ಹೋಗಿದ್ದರು. 26 ವರ್ಷದ ವಿನಯ್ ನರ್ವಾಲ್ ಆರು ದಿನಗಳ ಹಿಂದೆ ಗುರುಗ್ರಾಮದ ಹಿಮಾಂಶಿ ಎಂಬ ಹುಡುಗಿಯನ್ನು ಏಪ್ರಿಲ್ 16 ರಂದು ವಿವಾಹವಾದರು. ಮುಖ್ಯವಾಗಿ, ಏ.19ರಂದು ನಡೆದ ವಿವಾಹ ಆರತಕ್ಷತೆಯ ನಂತರ, ವಿನಯ್ ಏ.21ರಂದು ಹಿಮಾಂಶಿ ಜೊತೆ ಕಾಶ್ಮೀರಕ್ಕೆ ಹೋಗಿದ್ದರು. ಅದಾಗ್ಯೂ, ಅವರನ್ನು ಏ.22ರಂದು ಗುಂಡು ಹಾರಿಸಿ ಕೊಲ್ಲಲಾಯಿತು.

ಮುಖ್ಯವಾದ ವಿಷಯವೆಂದರೆ ಯೂರೋಪ್ಗೆ ಹೋಗಲು ಪ್ಲಾನ್ ಮಾಡಿದ್ದ ಇವರು ಯುರೋಪಿಯನ್ ವೀಸಾ ಸಿಗದ ಕಾರಣ, ವಿನಯ್ ಪಹಲ್ಯಾಮ್‌ಗೆ ಹೋದರು. ಆದರೆ ಅಲ್ಲಿಂದ ಬಂದಿದ್ದು ಮಾತ್ರ ಅವರ ಸಾವಿನ ಸುದ್ದಿ. ಈಗಾಗಲೇ ಭಾರತೀಯ ನೌಕಾಪಡೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ವಿನಯ್ ನರ್ವಾಲ್ ಅವರ ಮೃತದೇಹದ ಅಂತ್ಯಕ್ರಿಯೆ ನಡೆದಿದ್ದು, ಇದರಲ್ಲಿ ಸಿಎಂ ಕೂಡ ಭಾಗಿಯಾಗಿದ್ದರು.

ಅಂತ್ಯಕ್ರಿಯೆಯಲ್ಲಿ ಕಣ್ಣೀರು ಸುರಿಸುತ್ತಾ ನಿಂತಿದ್ದ ಪತ್ನಿ ತನ್ನ ಪತಿಗೆ ಭಾವನಾತ್ಮಕ ವಿದಾಯ ಹೇಳಿದರು. ವಿನಯ್ ಸಾವಿನ ನಂತರ ಗುರುಗ್ರಾಮ್ ಮತ್ತು ಕರ್ನಾಲ್ ಎರಡೂ ಕುಟುಂಬಗಳಲ್ಲಿ ಶೋಕ ಮಡುಗಟ್ಟಿದೆ.



ಮಾಧ್ಯಮಗಳೊಂದಿಗೆ ಮಾತನಾಡಿದ ಸಿಎಂ ಸೈನಿ, ವಿನಯ್ ನರ್ವಾಲ್ ಅವರಿಗೆ ಗೌರವ ಸಲ್ಲಿಸಲು ಮತ್ತು ಅವರ ಕುಟುಂಬವನ್ನು ಭೇಟಿ ಮಾಡಲು ನಾನು ಇಲ್ಲಿಗೆ ಬಂದಿದ್ದೇನೆ. ಹೇಡಿತನದ ದಾಳಿ ನಡೆಸಿದವರನ್ನು ಬಿಡಲಾಗುವುದಿಲ್ಲ. ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ವಿನಯ್ ನರ್ವಾಲ್ ಒಬ್ಬ ಧೈರ್ಯಶಾಲಿ ಸೈನಿಕ. ಹರಿಯಾಣ ಸರ್ಕಾರ ವಿನಯ್ ನರ್ವಾಲ್ ಅವರ ಕುಟುಂಬದೊಂದಿಗೆ ನಿಂತಿದೆ ಎಂದು ಹೇಳಿದರು.

---

## ಧರ್ಮ ಕೇಳಿ ಉಗ್ರರಿಂದ ದಾಳಿ: ಬೇಸತ್ತು ಇಸ್ಲಾಂ ತ್ಯಜಿಸಿದ ಶಿಕ್ಷಕ

**ಕೋಲ್ಕತ್ತಾ:** ಪಹಲ್ಗಾಮ್‌ನಲ್ಲಿ ಉಗ್ರರು ಧರ್ಮ ಕೇಳಿ ದಾಳಿ ನಡೆಸಿದ್ದರಿಂದ ಪಶ್ಚಿಮ ಬಂಗಾಳದ ಬದುರಿಯಾದ ಶಾಲಾ ಶಿಕ್ಷಕರೊಬ್ಬರು ಇಸ್ಲಾಂ ತ್ಯಜಿಸಲು ನಿರ್ಧರಿಸಿದ್ದಾರೆ.

ಈ ಬಗ್ಗೆ ವಿಡಿಯೋ ಹಂಚಿಕೊಂಡಿರುವ ಶಿಕ್ಷಕ ಸಬೀರ್ ಹುಸೇನ್, ಕಾಶ್ಮೀರ ಸೇರಿದಂತೆ ವಿವಿಧೆಡೆ ಧರ್ಮವನ್ನು ಹಿಂಸೆಗಾಗಿ ಆಯುಧವನ್ನಾಗಿ ಬಳಸಲಾಗುತ್ತಿದೆ. ಇದನ್ನು ಒಪ್ಪಲು ಸಾಧ್ಯವಿಲ್ಲ. ಆದ್ದರಿಂದ ನಾನು ಇಸ್ಲಾಂನ್ನು ತ್ಯಜಿಸುತ್ತೇನೆ. ಯಾವ ಧರ್ಮದ ವ್ಯಾಪ್ತಿಗೂ ಒಳಪಡದೆ, ಕೇವಲ ಮಾನವನಾಗಿ ಗುರುತಿಸಿಕೊಳ್ಳಲು ಬಯಸುತ್ತೇನೆ ಎಂದು ಅವರು ಹೇಳಿಕೊಂಡಿದ್ದಾರೆ. ಏ.22 ರಂದು ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ಭಯೋತ್ಪಾದಕರು ದಾಳಿ ನಡೆಸಿದ್ದರು. ಈ ದಾಳಿಯಲ್ಲಿ 26 ಮಂದಿ ಸಾವನ್ನಪ್ಪಿದ್ದರು. ಕರ್ನಾಟಕ ಮೂಲದ ಇಬ್ಬರು ಸಾವಿಗೀಡಾಗಿದ್ದರು.



---

## ಸಂಬಂಧಿಯಿಂದಲೇ 4 ವರ್ಷದ ಬಾಲಕಿ ಮೇಲೆ ಅತ್ಯಾಚಾರ, ಕೊಲೆ

**ಭುವನೇಶ್ವರ:** ಒಡಿಶಾದ ಗಂಜಾಂನಲ್ಲಿ 27 ವರ್ಷದ ವ್ಯಕ್ತಿ ತನ್ನ ಸಂಬಂಧಿಯ 4 ವರ್ಷದ ಮಗಳ ಮೇಲೆ ಅತ್ಯಾಚಾರವೆಸಗಿರುವ ಘಟನೆ ವರದಿಯಾಗಿದೆ. ಬಾಲಕಿಯ ಮೇಲೆ ಅತ್ಯಾಚಾರವೆಸಗಿ ಕೊಲೆ(ಒಣಡಿಜಜಡಿ) ಮಾಡಿದ್ದಾನೆ. ಅತ್ಯಾಚಾರ ಎಸಗಿ ಕೊಲೆ ಮಾಡಿದ ಆರೋಪದ ಮೇಲೆ ಬಂಧಿಸಲಾಗಿದ್ದು, ಶನಿವಾರ ನಿರ್ಮಾಣ ಹಂತದ ಮನೆಯಿಂದ ಆಕೆಯ ಮೃತದೇಹ ಪತ್ತೆಯಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಸಂಜೆ ಪೋಷಕರು ಮಗು ಕಾಣೆಯಾಗಿರುವುದಾಗಿ ದೂರು ನೀಡಿದ್ದರು. ಆ ವ್ಯಕ್ತಿಯ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಮತ್ತು ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (ಪೋಕ್ಸೊ) ಕಾಯ್ದೆ, 2012 ರ ಸಂಬಂಧಿತ ವಿಭಾಗಗಳ ಅಡಿಯಲ್ಲಿ ದೂರು ದಾಖಲಾಗಿದೆ ಎಂದು ಗಂಜಾಂ ಪೊಲೀಸ್ ವರಿಷ್ಠಾಧಿಕಾರಿ (ಎಸ್‌ಪಿ) ಸುವೇಂದು ಪಾತ್ರ ತಿಳಿಸಿದ್ದಾರೆ. ಆರೋಪಿಯು ಬಾಲಕಿಗೆ ಚಾಕೊಲೇಟ್ ಆಮಿಷ ಒಡ್ಡಿ, ತಮ್ಮ ಗ್ರಾಮದಲ್ಲಿ ನಡೆಯುವ ಹಬ್ಬಕ್ಕೆ ಕರೆದುಕೊಂಡು ಹೋಗುವುದಾಗಿ ಹೇಳಿದ್ದ. ಆದರೆ, ಆಕೆಯನ್ನು ನಿರ್ಜನ ಸ್ಥಳಕ್ಕೆ ಕರೆದೊಯ್ದು ಅತ್ಯಾಚಾರಕ್ಕೆ ಯತ್ನಿಸಿದ್ದ. ಆಕೆಯ ಕುತ್ತಿಗೆ ಹಿಸುಕಿ ಕೊಂದು, ನಂತರ ಶವವನ್ನು ಎಸೆದಿದ್ದ. ಆತ ಮದ್ಯದ ಅಮಲಿನಲ್ಲಿದ್ದ ಎಂದು ಎಸ್ಪಿ ಹೇಳಿದರು.

---

## ಭೀಕರ ಕಾರು ದುರಂತದಲ್ಲಿ 9 ಮಂದಿ ಸಾವು, ವ್ಯಾಂಕೂವರ್ ನಗರದಲ್ಲಿ ಮಡುಗಟ್ಟಿದ ಶೋಕ

# ಕೆನಡಾದಲ್ಲಿ ಲಾಪು ಲಾಪು ಹಬ್ಬ ನಡೆಯುವಾಗಲೇ ನುಗ್ಗಿದ ಕಾರು

**ಕೆನಡಾ:** ವ್ಯಾಂಕೋವರ್ ನಗರದಲ್ಲಿ ಲಾಪು ಲಾಪು ಹಬ್ಬ ನಡೆಯುತ್ತಿದ್ದಾಗ ಏಕಾಏಕಿ ನುಗ್ಗಿ ಬಂದ ಕಾರು ಒಂಬತ್ತು ಜನರ ಪ್ರಾಣವನ್ನು ಕಸಿದುಕೊಂಡಿದೆ. ಫಿಲಿಪಿನೋ ಸಂಸ್ಕೃತಿಯ ಭಾಗವಾಗಿ ಕಾರ್ಯಕ್ರಮ ಆಚರಿಸುತ್ತಿದ್ದಾಗ ಭೀಕರ ದುರಂತ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಫಿಲಿಪಿನೋ ಸಂಸ್ಕೃತಿಯ ಭಾಗವಾಗಿ ರಸ್ತೆಯಲ್ಲಿ ಹಬ್ಬ ನಡೆಯುತ್ತಿದ್ದಾಗ ಏಕಾಏಕಿ ಕಾರು ನುಗ್ಗಿ ಬಂದಿದೆ. ಸದ್ಯ ಪೊಲೀಸರು ಚಾಲಕನನ್ನು ವಶಕ್ಕೆ ತೆಗೆದುಕೊಂಡಿದ್ದಾರೆ. ಈ ಘಟನೆಯಿಂದ ವ್ಯಾಂಕೋವರ್ ನಗರದಲ್ಲಿ ಶೋಕ ಮಡುಗಟ್ಟಿದೆ.

ದುರಂತ 41ನೇ ಅವೆನ್ಯೂ ಮತ್ತು ಫ್ರೇಸರ್‌ನಲ್ಲಿ ಸಂಭವಿಸಿದೆ. ಸಂಜೆ 8 ಗಂಟೆ ಸುಮಾರಿಗೆ ಚಾಲಕ ಜನಸಮೂಹದ ಕಡೆಗೆ ವಾಹನ ಚಲಾಯಿಸಿದ್ದಾನೆ. ಈ ದುರ್ಘಟನೆಯಲ್ಲಿ 9 ಜನರು ಸಾವನ್ನಪ್ಪಿದ್ದು, ಹಲವರು ಗಾಯಗೊಂಡಿದ್ದಾರೆ. ಚಾಲಕನನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ. ತನಿಖೆ ನಡೆಯುತ್ತಿದೆ. ಹೆಚ್ಚಿನ ಮಾಹಿತಿಯನ್ನು ಶೀಘ್ರದಲ್ಲೇ ನೀಡಲಾಗುವುದು ಎಂದು ವ್ಯಾಂಕೂವರ್ ಪೊಲೀಸರು ತಿಳಿಸಿದ್ದಾರೆ.

ಕಪ್ಪು ಬಣ್ಣದ ವಾಹನವು ವೇಗವಾಗಿ ಹಬ್ಬದ ಸ್ಥಳಕ್ಕೆ ನುಗ್ಗಿತ್ತು. ಅದು ಜನರ ಗುಂಪಿಗೆ ಡಿಕ್ಕಿ ಹೊಡೆದಿದೆ. ಕಾರು ಚಾಲಕ ಯುವ ಏಷ್ಯನ್ ವ್ಯಕ್ತಿಯಾಗಿದ್ದು, ಮಾನಸಿಕ ಅಸ್ವಸ್ಥನಂತೆ ಕಾಣುತ್ತಿದ್ದ ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ. ಈ ಭೀಕರ ಘಟನೆಯ ಹಲವಾರು ವಿಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಕಾರು ಅಪಘಾತದ ನಂತರ ರಸ್ತೆಯಲ್ಲಿ ಮೃತದೇಹಗಳು ಬಿದ್ದಿರುವುದು ಮತ್ತು ರಕ್ಷಣಾ ಸಿಬ್ಬಂದಿ ಗಾಯಗೊಂಡವರಿಗೆ ಚಿಕಿತ್ಸೆ ನೀಡುತ್ತಿರುವ ದೃಶ್ಯಗಳು ಘಟನೆಯ ಭೀಕರತೆಯನ್ನು ತೋರಿಸುತ್ತಿವೆ. 'ಅಪಘಾತದ ಬಳಿಕ ಎಲ್ಲೆಡೆ ಮೃತದೇಹಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಯಾರಿಗೆ ಸಹಾಯ ಮಾಡಬೇಕೆಂದು ತಿಳಿಯದಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು.

ಇದು ನಿಜಕ್ಕೂ ಆಘಾತಕಾರಿ ಸಂಗತಿ ಎಂದು ಫೆಸ್ಟಿವಲ್ ಭದ್ರತಾ ಸಿಬ್ಬಂದಿ ಜೆನ್ ಇದಾಬಾ-ಕಾಸ್ಟನೆಟೊ ಎಂಬುವವರು ಸ್ಥಳೀಯ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ್ದಾರೆ.

'ಇಂದಿನ ಲಾಪು ಲಾಪು ದಿನದ ಕಾರ್ಯಕ್ರಮದಲ್ಲಿ ನಡೆದ ಭೀಕರ ಘಟನೆಯಿಂದ ನಾನು ಆಘಾತಗೊಂಡಿದ್ದೇನೆ ಮತ್ತು ತೀವ್ರ ದುಃಖಿತನಾಗಿದ್ದೇನೆ. ಈ ಕಷ್ಟದ ಸಮಯದಲ್ಲಿ ಸಂತ್ರಸ್ತರಿಗೆ ಮತ್ತು ವ್ಯಾಂಕೂವರ್‌ನ ಫಿಲಿಪಿನೋ ಸಮುದಾಯಕ್ಕೆ ನಮ್ಮ ಸಂತಾಪಗಳು ಎಂದು ವ್ಯಾಂಕೂವರ್‌ನ ಮೇಯರ್ ಕೆನ್ ಸಿಮ್ ತಿಳಿಸಿದ್ದಾರೆ. ಕೆನಡಾದ ವಿರೋಧ ಪಕ್ಷದ ನಾಯಕ, ಎನ್‌ಡಿಪಿಯ ಜಗ್ಮೀತ್ ಸಿಂಗ್ ಅವರು ಘಟನೆ ಸಂಭವಿಸುವ ಮೊದಲು ವ್ಯಾಂಕೂವರ್‌ನ ಲಾಪು ಲಾಪು ದಿನದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸದ್ಯ ಘಟನೆಯ ಬಗ್ಗೆ ಪ್ರತಿಕ್ರಿಯಿಸಿದ್ದು, ಮುಗ್ಧ ಜನರು ಕೊಲ್ಲಲ್ಪಟ್ಟಿದ್ದಾರೆ ಮತ್ತು ಗಾಯಗೊಂಡಿದ್ದಾರೆ ಎಂದು ತಿಳಿದು ದುಃಖಿತನಾಗಿದ್ದೇನೆ ಎಂದು ತಿಳಿಸಿದರು.




ಭೀಕರ ಕಾರು ದುರಂತ

### ಕೆನಡಾ ಪ್ರಧಾನ ಮಂತ್ರಿ ಸಂತಾಪ

ಕೆನಡಾದ ಪ್ರಧಾನ ಮಂತ್ರಿ ಮಾರ್ಕ್ ಕಾರ್ನಿ ಅವರು ವ್ಯಾಂಕೂವರ್‌ನಲ್ಲಿ ನಡೆದ ಲಾಪು ಲಾಪು ಹಬ್ಬದಲ್ಲಿನ ಘಟನೆಯ ಬಗ್ಗೆ ತೀವ್ರ ದುಃಖ ವ್ಯಕ್ತಪಡಿಸಿದ್ದಾರೆ. ಮೃತಪಟ್ಟವರು ಮತ್ತು ಗಾಯಗೊಂಡವರ ಕುಟುಂಬಗಳಿಗೆ ನನ್ನ ಸಂತಾಪಗಳನ್ನು ತಿಳಿಸುತ್ತೇನೆ. ಫಿಲಿಪಿನೋ ಕೆನಡಿಯನ್ ಸಮುದಾಯ ಮತ್ತು ವ್ಯಾಂಕೂವರ್‌ನ ಪ್ರತಿಯೊಬ್ಬರ ದುಃಖದಲ್ಲಿ ನಾನೂ ಭಾಗಿಯಾಗಿದ್ದೇನೆ. ನಾವು ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದೇವೆ. ನಮ್ಮ ರಕ್ಷಣಾ ಸಿಬ್ಬಂದಿಯ ಕಾರ್ಯವನ್ನು ಶ್ಲಾಘಿಸುತ್ತೇವೆ ಎಂದು ಎಕ್ಸ್‌ನಲ್ಲಿ ಬರೆದಿದ್ದಾರೆ.

### ಲಾಪು ಲಾಪು ಹಬ್ಬ

ಕೆನಡಾದ ಚುನಾವಣೆಗೆ ಮುಂಚಿನ ವಾರಾಂತ್ಯದಲ್ಲಿ ಲಾಪು ಲಾಪು ಹಬ್ಬವು ಆಚರಿಸಲ್ಪಡುತ್ತಿದೆ. ಲಾಪು ಲಾಪು ಹಬ್ಬವು 16 ನೇ ಶತಮಾನದ ಫಿಲಿಪಿನೋ ವಸಾಹತುಶಾಹಿ ವಿರೋಧಿ ನಾಯಕನ ನೆನಪಿಗಾಗಿ ಆಚರಿಸಲಾಗುತ್ತದೆ. ಈ ಕಾರ್ಯಕ್ರಮದಲ್ಲಿ ಮೆರವಣಿಗೆ, ಚಲನಚಿತ್ರ ಪ್ರದರ್ಶನ, ನೃತ್ಯ ಮತ್ತು ಸಂಗೀತ ಕಾರ್ಯಕ್ರಮಗಳು ಇದ್ದವು. ಬ್ಲ್ಯಾಕ್ ಐಡ್ ಪೀಸ್‌ನ ಇಬ್ಬರು ಸದಸ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು ಎಂದು ಆಯೋಜಕರು ತಿಳಿಸಿದ್ದಾರೆ.

---

# ಮಿನಿ ನ್ಯೂಸ್

### ಗಡಿಯಲ್ಲಿ ಪಾಕ್ ಅಪ್ರಚೋದಿತ ಗುಂಡಿನ ದಾಳಿ, ಭಾರತೀಯ ಸೇನೆಯಿಂದ ತಕ್ಕ ಉತ್ತರ

**ಶ್ರೀನಗರ:** ಜಮ್ಮು ಮತ್ತು ಕಾಶೀರದ ಗಡಿ ನಿಯಂತ್ರಣ ರೇಖೆಯಲ್ಲಿ ಪಾಕಿಸ್ತಾನಿ ಪಡೆಗಳು ಅಪ್ರಚೋದಿತ ಗುಂಡಿನ ದಾಳಿಯನ್ನು ಸತತ ಮೂರನೇ ದಿನವೂ ಮುಂದುವರೆಸಿವೆ. ಭಾರತೀಯ ಸೇನೆ ಇದ್ದಕ್ಕೆ ತಕ್ಕ ಪ್ರತಿಕ್ರಿಯೆ ನೀಡಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಏಪ್ರಿಲ್ 26 ಮಧ್ಯರಾತ್ರಿಯಿಂದ ಪಾಕಿಸ್ತಾನಿ ಸೇನಾ ನೆಲೆಗಳು ತುತರಿ ಗಾಲಿ ಮತ್ತು ರಾಂಪುರ ವಲಯಗಳಲ್ಲಿ ಎಲ್‌ಒಸಿಯಾದ್ಯಂತ ಅಪ್ರಚೋದಿತ ಗುಂಡಿನ ದಾಳಿಯನ್ನು ಪ್ರಾರಂಭಿಸಿದವು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಭಾರತೀಯ ಸೈನಿಕರು ಹೈ ಅಲರ್ಟ್‌ನಲ್ಲಿದ್ದಾರೆ,ಪಾಕ್ ದುಸ್ಸಾಹಸಕ್ಕೆ ತಕ್ಕ ಉತ್ತರ ನೀಡುತ್ತಾರೆ ಎಂದರು.

### ಕಾಶ್ಮೀರದ ಕುಪ್ವಾರಾ ಜಿಲ್ಲೆಯಲ್ಲಿ ಸಾಮಾಜಿಕ ಕಾರ್ಯಕರ್ತನ ಗುಂಡಿಕ್ಕಿ ಕೊಂದ ಉಗ್ರರು

**ಶ್ರೀನಗರ:** ಜಮ್ಮು ಮತ್ತು ಕಾಶ್ಮೀರದ ಕುಪ್ವಾರಾ ಜಿಲ್ಲೆಯಲ್ಲಿ ಸಾಮಾಜಿಕ ಕಾರ್ಯಕರ್ತನನ್ನು ಶಂಕಿತ ಭಯೋತ್ಪಾದಕರು ಗುಂಡಿಕ್ಕಿ ಕೊಂದಿದ್ದಾರೆ. ತಡರಾತ್ರಿ ಕಂಡಿ ಖಾಸ್‌ನಲ್ಲಿರುವ ಅವರ ನಿವಾಸದೊಳಗೆ ಗುಲಾಮ್ ರಸೂಲ್ ಮಗ್ರೆ (45) ಅವರ ಮೇಲೆ ಭಯೋತ್ಪಾದಕರು ಗುಂಡು ಹಾರಿಸಿದ್ದಾರೆ ಎಂದು ಅವರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮನೆಗೆ ನುಗ್ಗಿ ಗುಂಡು ಹಾರಿಸಿ ಭಯೋತ್ಪಾದಕರು ಪರಾರಿಯಾಗಿದ್ದು, ತೀವ್ರವಾಗಿ ಗಾಯಗೊಂಡಿದ್ದ ಅವರನ್ನು ಆಸ್ಪತ್ರೆಗೆ ಸಾಗಿಸಲಾಯಿತು, ಅಲ್ಲಿ ಅವರು ಮೃತಪಟ್ಟಿದ್ದಾರೆ ಎಂದು ವೈದ್ಯರು ಘೋಷಿಸಿದ್ದಾರೆ. ಉಗ್ರರು ಸಾಮಾಜಿಕ ಕಾರ್ಯಕರ್ತನನ್ನು ಏಕೆ ಗುರಿಯಾಗಿಸಿಕೊಂಡರು ಕೊಂದಿದ್ದಾರೆ ಎಂಬುದು ತಕ್ಷಣಕ್ಕೆ ಸ್ಪಷ್ಟವಾಗಿಲ್ಲ.

### ಕಾಶ್ಮೀರದಲ್ಲಿ ಮತ್ತೆ ಮೂವರು ಭಯೋತ್ಪಾದಕರ ಮನೆಗಳು ಧ್ವಂಸ

**ಶ್ರೀನಗರ:** ಪಹಲ್ಬಾಮ್ ಭಯೋತ್ಪಾದಕ ದಾಳಿಯ ನಂತರ ಭದ್ರತಾ ಪಡೆಗಳು ಭಯೋತ್ಪಾದಕ ಮೇಲೆ ಕಠಿಣ ಕ್ರಮ ಮುಂದುವರಿಸಿರುವುದರಿಂದ, ಜಮ್ಮು ಮತ್ತು ಕಾಶ್ಮೀರದ ಬಂಡಿಪೋರಾ, ಪುಲ್ವಾಮಾ ಮತ್ತು ಶೋಪಿಯಾನ್ ಜಿಲ್ಲೆಗಳಲ್ಲಿ ಮೂವರು ಸಕ್ರಿಯ ಭಯೋತ್ಪಾದಕರ ಮನೆಗಳನ್ನು ಅಧಿಕಾರಿಗಳು ನೆಲಸಮ ಮಾಡಿದ್ದಾರೆ.

ಕಳೆದ ವರ್ಷ ಭಯೋತ್ಪಾದಕ ಗುಂಪಿಗೆ ಸೇರಿದ್ದ ಅಫ್ಘಾನ್ ಶಫಿಯ ಮನೆಯನ್ನು ರಾತ್ರಿ ಶೋಪಿಯಾನ್ ಜಿಲ್ಲೆಯ ವಂಡಿನಾದಲ್ಲಿ ನೆಲಸಮ ಮಾಡಲಾಗಿದೆ ಎಂದು ಅವರು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪುಲ್ವಾಮಾ ಜಿಲ್ಲೆಯಲ್ಲಿ ಮತ್ತೊಬ್ಬ ಸಕ್ರಿಯ ಭಯೋತ್ಪಾದಕ ಅಮೀರ್ ನಜೀರ್ ನ ಮನೆಯನ್ನು ಟ್ರೈ, ಬಂಡಿಪೋರಾ ಜಿಲ್ಲೆಯಲ್ಲಿ, ಲಷ್ಕರ್ ಎ-ತೋಯ್ದಾ ಅಲ್ಪಾ ಜಮೀಲ್ ಅಹ್ಮದ್ ಶೇರ್ಗೋಜಿಯ ಮನೆಯನ್ನು ನೆಲಸಮ ಮಾಡಲಾಗಿದೆ. ಶೇರ್ಗೋಜಿ 2016 ರಿಂದ ಸಕ್ರಿಯ ಭಯೋತ್ಪಾದಕರಾಗಿದ್ದಾನೆ ಇದರೊಂದಿಗೆ, ಪಹಲ್ಬಾಮ್ ದಾಳಿಯ ನಂತರ ಕೆಡವಲಾದ ಭಯೋತ್ಪಾದಕರು ಮತ್ತು ಅವರ ಭೂಗತ ಪಾತಕಿಗಳ ಒಟ್ಟು 9 ಮನೆಗಳನ್ನು ಕೆಡವಲಾಗಿದೆ.

### ಶತ್ರು ರಾಷ್ಟ್ರಗಳ ಹಡಗುಗಳನ್ನು ಉಡಾಯಿಸಬಲ್ಲ ಯಶಸ್ವಿ ಕ್ಷಿಪಣಿ ಪರೀಕ್ಷೆ

**ನವದೆಹಲಿ:** ಪಹಲ್ಗಾಮ್ ಉಗ್ರರ ದಾಳಿಯ ನಂತರ ಭಾರತ ಮತ್ತು ಪಾಕಿಸ್ತಾನದ ನಡುವೆ ಉದ್ವಿಗ್ನತೆ ಹೆಚ್ಚುತ್ತಿರುವಂತೆಯೇ, ಭಾರತೀಯ ನೌಕಾಪಡೆಯು ಅರಬ್ಬಿ ಸಮುದ್ರದಲ್ಲಿ ಶತ್ರು ರಾಷ್ಟ್ರಗಳ ಹಡಗುಗಳನ್ನು ಉಡಾಯಿಸಬಲ್ಲಾ ಕ್ಷಿಪಣಿ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಿದ್ದು, ಅದರ ದೀರ್ಘ-ಶ್ರೇಣಿಯ ನಿಖರ ದಾಳಿಯ ಸಾಮರ್ಥ್ಯವನ್ನು ಪ್ರದರ್ಶಿಸಿದೆ.



ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಕ್ಷಿಪಣಿ ಪರೀಕ್ಷೆಯ ದೃಶ್ಯಗಳನ್ನು ಹಂಚಿಕೊಂಡಿರುವ ನೌಕಪಡೆ, ದೀರ್ಘ ಶ್ರೇಣಿಯ ನಿಖರ ಆಕ್ರಮಣಕ್ಕಾಗಿ ಬಹು ಹಂತದ ವಿರೋಧಿ ಹಡಗುಗಳನ್ನು ನಾಶಪಡಿಸಬಲ್ಲಾ ಕ್ಷಿಪಣಿ ಪರೀಕ್ಷೆ ಯಶಸ್ವಿಯಾಗಿದೆ ಎಂದು ತಿಳಿಸಿದೆ. ಭಾರತೀಯ ನೌಕಾಪಡೆಯು ಯಾವುದೇ ಕ್ಷಣ, ಎಲ್ಲಿಯೇ ಆದರೂ ರಾಷ್ಟ್ರದ ಕಡಲ ಹಿತಾಸಕ್ತಿಗಳನ್ನು ಕಾಪಾಡುವಲ್ಲಿ, ಭವಿಷ್ಯಕ್ಕೆ ಸಿದ್ಧವಾಗಿದೆ ಎಂದು ಹೇಳಿದೆ. ಯುದ್ಧ ನೌಕೆಗಳ ಸಮೂಹದಿಂದ ಬ್ರಹ್ಮೋಸ್ ವಿರೋಧಿ ಹಡುಗು ಮತ್ತು ಕ್ರೂಸ್ ಕ್ಷಿಪಣಿಗಳನ್ನು ಉಡಾವಣೆ ಮಾಡುವುದನ್ನು ದೃಶ್ಯಗಳು ತೋರಿಸುತ್ತವೆ. ಇದು ನೌಕಾಪಡೆಯ ಕಾರ್ಯಾಚರಣೆಯ ಪ್ರದರ್ಶನವಾಗಿದೆ.

### ಅನಿವಾಸಿ ಭಾರತೀಯರಿಂದ ಲಂಡನ್‌ನಲ್ಲಿರುವ ಪಾಕ್ ಹೈಕಮಿಷನ್‌ನ ಕಿಟಕಿ ಗಾಜು ಪುಡಿಪುಡಿ

**ಲಂಡನ್:** ಬ್ರಿಟಿಷ್ ರಾಜಧಾನಿ ಲಂಡನ್‌ನಲ್ಲಿರುವ ಪಾಕಿಸ್ತಾನದ ಹೈಕಮಿಷನ್ ಕಟ್ಟಡದ ಮೇಲೆ ಭಾರತೀಯರು ದಾಳಿ ಮಾಡಿ ಹಾನಿಗೊಳಿಸಿದ್ದಾರೆ ಎಂದು ಪಾಕಿಸ್ತಾನಿ ಮಾಧ್ಯಮಗಳು ಆರೋಪಿಸಿವೆ. ಭಾರತ ಮತ್ತು ಪಾಕಿಸ್ತಾನ ನಡುವೆ ಹೆಚ್ಚುತ್ತಿರುವ ಉದ್ವಿಗ್ನತೆಯ ನಂತರ ಈ ಘಟನೆ ನಡೆದಿದೆ. ಪಹಲ್ಗಾಮ್ ಉಗ್ರ ದಾಳಿಯನ್ನು ಖಂಡಿಸಿರುವ ಪ್ರತಿಭಟನಾಕಾರರು, ಹಿಂದೂ ಧರ್ಮದ ಸಂಕೇತವಾದ ಕೇಸರಿ ಬಣ್ಣವನ್ನು ಬಿಳಿ ಬಣ್ಣದ ಗೋಡೆಗಳು ಮತ್ತು ಫಲಕದ ಮೇಲೆ ಎರಚಿದ್ದಾರೆ. ನಂತರ ಹೈಕಮಿಷನ್ ಕಟ್ಟಡದ ಕಿಟಕಿಗಳನ್ನು ಒಡೆದು ಹಾಕಿದ್ದಾರೆ. ಈ ಘಟನೆ ಭಾನುವಾರ ನಡೆದ ಪ್ರತಿಭಟನೆಯ ನಂತರ ನಡೆದಿದೆ ಎಂದು ವರದಿಯಾಗಿದೆ.

ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಭೀಕರ ಉಗ್ರ ದಾಳಿಯನ್ನು ಖಂಡಿಸಿ ಕಳೆದ ಎರಡು ದಿನಗಳಿಂದ ಭಾರತೀಯ ಪ್ರಜೆಗಳು ಲಂಡನ್‌ನಲ್ಲಿರುವ ಪಾಕಿಸ್ತಾನಿ ಹೈಕಮಿಷನ್ ಮುಂದೆ ಪ್ರತಿಭಟನಾ ರ್‍ಯಾಲಿಗಳನ್ನು ನಡೆಸುತ್ತಿದ್ದಾರೆ. ಲಂಡನ್ ಪೊಲೀಸರು ಪ್ರತಿಭಟನೆಯ ಸಂದರ್ಭದಲ್ಲಿ ಹಿಂಸಾಚಾರ ನಡೆಸಿದ್ದಕ್ಕಾಗಿ ಇಬ್ಬರು ಪ್ರತಿಭಟನಾಕಾರರನ್ನು ಬಂಧಿಸಿದ್ದರು. ಪಹಲ್ಗಾಮ್‌ನಲ್ಲಿ ಸಂಭವಿಸಿದ ಭಯೋತ್ಪಾದಕ ದಾಳಿಯನ್ನು ಖಂಡಿಸಿ, ಯುನೈಟೆಡ್ ಕಿಂಗ್‌ಡಮ್‌ನಲ್ಲಿರುವ ಭಾರತೀಯರು ಲಂಡನ್‌ನಲ್ಲಿರುವ ಪಾಕಿಸ್ತಾನ ಹೈಕಮಿಷನ್ ಹೊರಗೆ ತೀವ್ರ ಪ್ರತಿಭಟನೆ ನಡೆಸಿದ್ದರು.

ಭಾರತೀಯ ಧ್ವಜಗಳು, ಬ್ಯಾನರ್‌ಗಳು ಮತ್ತು ಫಲಕಗಳನ್ನು ಹಿಡಿದು ಪ್ರತಿಭಟನೆ ನಡೆಸಿದ ಪ್ರತಿಭಟನಾಕಾರರು, ಅಮಾಯಕರ ಜೀವಹಾನಿಗೆ ದುಃಖ ಸಂತಾಪ ಸೂಚಿಸಿದರು. ಮತ್ತು ದುರಂತದಲ್ಲಿ ಮಡಿದವರಿಗೆ ನ್ಯಾಯ ಒದಗಿಸಬೇಕೆಂದು ಒತ್ತಾಯಿಸಿದರು. ನಾನು ಹಿಂದೂ ಎಂದು ಬರೆದಿರುವ ಫಲಕಗಳನ್ನು ಹಿಡಿದು 'ಭಾರತ್ ಮಾತಾ ಕಿ ಜೈ' ಮತ್ತು ಪಾಕಿಸ್ತಾನ್ ಮುರ್ದಾಬಾದ್ ಮುಂತಾದ ಘೋಷಣೆಗಳನ್ನು ಕೂಗಿದ ಪ್ರತಿಭಟನಾಕಾರರು, ಗಡಿಯಾಚೆಗಿನ ದಾಳಿಗಳಿಗೆ ಕಾರಣವಾದ ಭಯೋತ್ಪಾದಕ ಗುಂಪುಗಳಿಗೆ ಪಾಕಿಸ್ತಾನ ಆಶ್ರಯ ಮತ್ತು ಬೆಂಬಲ ನೀಡುತ್ತಿದೆ ಎಂದು ಆರೋಪಿಸಿದರು.

# ಲಂಕಾ ವಿರುದ್ಧ 9 ವಿಕೆಟ್‌ಗಳಿಂದ ಗೆದ್ದ ಟೀಂ ಇಂಡಿಯಾ

ಶ್ರೀಲಂಕಾದ ಆತಿಥ್ಯದಲ್ಲಿ ನಡೆಯುತ್ತಿರುವ ಶ್ರೀಲಂಕಾ, ದಕ್ಷಿಣ ಆಫ್ರಿಕಾ ಹಾಗೂ ಭಾರತ ವನಿತಾ ತಂಡಗಳ ನಡುವಿನ ತ್ರಿಕೋನ ಸರಣಿ ಇಂದಿನಿಂದ ಆರಂಭವಾಗಿದೆ. ಏಪ್ರಿಲ್ 27 ರಿಂದ ಪ್ರಾರಂಭವಾಗಿರುವ ಈ ತ್ರಿಕೋನ ಸರಣಿ 15 ದಿನಗಳ ಕಾಲ ನಡೆಯಲಿದ್ದು, ಒಟ್ಟು 7 ಪಂದ್ಯಗಳು ನಡೆಯಲಿವೆ. ಅದರಂತೆ ಇಂದಿನ ಮೊದಲ ಪಂದ್ಯದಲ್ಲಿ ಆತಿಥೇಯ ಶ್ರೀಲಂಕಾ ಹಾಗೂ ಭಾರತ ವನಿತಾ ಪಡೆಗಳು ಮುಖಾಮುಖಿಯಾಗಿದ್ದವು. ಈ ಪಂದ್ಯದಲ್ಲಿ ನಿರೀಕ್ಷೆಯಂತೆ ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಭಾರತ ಮಹಿಳಾ ತಂಡ ಚಾಮರಿ ಅಟಪಟ್ಟು ನಾಯಕತ್ವದ ಶ್ರೀಲಂಕಾ ತಂಡವನ್ನು 9 ವಿಕೆಟ್‌ಗಳಿಂದ ಮಣಿಸಿ ಟೂರ್ನಿಯಲ್ಲಿ ಶುಭಾರಂಭ ಮಾಡಿದೆ.

**ತತ್ತರಿಸಿದ ಲಂಕಾ ಇನ್ನಿಂಗ್ಸ್**

ಮಳೆ ಪೀಡಿತ ಈ ಪಂದ್ಯದಲ್ಲಿ ಟಾಸ್ ಗೆದ್ದ ಟೀಂ ಇಂಡಿಯಾ ನಾಯಕಿ ಹರ್ಮನ್‌ಪ್ರೀತ್ ಕೌರ್ ಮೊದಲು ಬೌಲಿಂಗ್ ಮಾಡಲು ನಿರ್ಧರಿಸಿದರು.

ಮಳೆಯಿಂದಾಗಿ ಈ ಪಂದ್ಯವನ್ನು ತಲಾ 39 ಓವರ್‌ಗಳಿಗೆ ಇಳಿಸಲಾಯಿತು. ಹೀಗಾಗಿ ಮೊದಲು ಬ್ಯಾಟಿಂಗ್ ಮಾಡಿದ ಶ್ರೀಲಂಕಾ ತಂಡ ಕೊನೆಯ ಓವರ್‌ನಲ್ಲಿ ತನ್ನೆಲ್ಲ ವಿಕೆಟ್ ಕಳೆದುಕೊಂಡು 147 ರನ್ ಕಲೆಹಾಕಲಷ್ಟೇ ಶಕ್ತವಾಯಿತು.

ತಂಡದ ಪರ ಆರಂಭಿಕ ಆಟಗಾರ್ತಿ ಹಸಿನಿ ಪೆರೇರಾ ಅತ್ಯಧಿಕ 30 ರನ್ ಬಾರಿಸಿದರೆ, ಕವಿಶಾ ದಿಲ್ಹಾರಿ 25 ರನ್ ಹಾಗೂ ವಿಕೆಟ್ ಕೀಪರ್ ಅನುಷ್ಕಾ ಸಂಜೀವಿನಿ 22 ರನ್‌ಗಳ ಕಾಣಿಕೆ ನೀಡಿದರು.

ಇನ್ನು ಟೀಂ ಇಂಡಿಯಾ ಪರ ಬೌಲಿಂಗ್‌ನಲ್ಲಿ ಮಿಂಚಿದ ಸ್ನೇಹ ರಾಣಾ ಅತ್ಯಧಿಕ 3 ವಿಕೆಟ್ ಪಡೆದರೆ, ನಲ್ಲಪುರರೆಡ್ಡಿ ಚರಣಿ



ಹಾಗೂ ದೀಪ್ತಿ ಶರ್ಮಾ ತಲಾ 2 ವಿಕೆಟ್ ಪಡೆದರು. ಅರುಂಧತಿ ರೆಡ್ಡಿ ಕೂಡ 1 ವಿಕೆಟ್ ಪಡೆಯುವಲ್ಲಿ ಯಶಸ್ವಿಯಾದರು.

**ಭಾರತಕ್ಕೆ 9 ವಿಕೆಟ್‌ಗಳ ಜಯ**

147 ರನ್‌ಗಳ ಸುಲಭ ಗುರಿ ಬೆನ್ನಟ್ಟಿದ ಭಾರತ ವನಿತಾ ಪಡೆ ಕೇವಲ 1 ವಿಕೆಟ್ ಕಳೆದುಕೊಂಡು 29.4 ಓವರ್‌ಗಳಲ್ಲಿ ಗೆಲುವಿನ ನಗೆಬೀರಿತು. ಆರಂಭಿಕ ಆಟಗಾರ್ತಿಯರಾದ ಪ್ರತೀಕಾ ರಾವಲ್ ಹಾಗೂ ಸ್ಮೃತಿ ಮಂಧಾನ ಮೊದಲ ವಿಕೆಟ್‌ಗೆ 54 ರನ್‌ಗಳ ಜೊತೆಯಾಟ ನೀಡಿದರು. ಈ ವೇಳೆ ಉಪನಾಯಕಿ ಮಂಧಾನ 46 ಎಸೆತಗಳಲ್ಲಿ 6 ಬೌಂಡರಿ ಸಹಿತ 43 ರನ್ ಬಾರಿಸಿ ವಿಕೆಟ್ ಒಪ್ಪಿಸಿದರು.

ಆ ಬಳಿಕ ಜೊತೆಯಾದ ಪ್ರತೀಕಾ ಹಾಗೂ ಹರ್ಲೀನ್ ಡಿಯೋಲ್ ಅಜೇಯರಾಗಿ ಉಳಿದು ತಂಡವನ್ನು ಗೆಲುವಿನ ದಡ ಮುಟ್ಟಿಸಿದರು. ಆರಂಭಿಕ ಆಟಗಾರ್ತಿ ಪ್ರತೀಕಾ 62 ಎಸೆತಗಳಲ್ಲಿ 7 ಬೌಂಡರಿ ಸಹಿತ ಅಜೇಯ 50 ರನ್ ಬಾರಿಸಿದರೆ, ಹರ್ಲೀನ್ 71 ಎಸೆತಗಳಲ್ಲಿ 4 ಬೌಂಡರಿ ಸಹಿತ ಅಜೇಯ 48 ರನ್ ಬಾರಿಸಿದರು. ಇದೀಗ ಭಾರತ ತನ್ನ ಮುಂದಿನ ಪಂದ್ಯವನ್ನು ಏಪ್ರಿಲ್ 29 ರಂದು ದಕ್ಷಿಣ ಆಫ್ರಿಕಾ ವಿರುದ್ಧ ಆಡಲಿದೆ.

### ಕಿಂಗ್ ಕೊಹ್ಲಿ, ಕೃನಾಲ್ ಪಾಂಡ್ಯ ಸಿಡಿಲಬ್ಬರದ ಅರ್ಧಶತಕ..

# ಡೆಲ್ಲಿ ವಿರುದ್ಧ ಸೇಡು ತೀರಿಸಿಕೊಂಡ ಆರ್‌ಸಿಬಿ

ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ 6 ವಿಕೆಟ್‌ಗಳಿಂದ ಭರ್ಜರಿ ಗೆಲುವು ಸಾಧಿಸುವ ಮೂಲಕ ಈ ಹಿಂದೆ ತವರಿನಲ್ಲಿ ಸೋತ ಸೇಡನ್ನು ತೀರಿಸಿಕೊಂಡಿದೆ. ಕಿಂಗ್ ಕೊಹ್ಲಿ ಹಾಗೂ ಕೃನಾಲ್ ಪಾಂಡ್ಯರ ಅಬ್ಬರದ ಬ್ಯಾಟಿಂಗ್‌ನಿಂದ ಆರ್‌ಸಿಬಿ ಜಯಭೇರಿ ಬಾರಿಸಿತು.

ಅರುಣ್ ಜೇಟ್ಲಿ ಸ್ಟೇಡಿಯಂನಲ್ಲಿ ನಡೆದ ಡಬಲ್ ಹೆಡ್ಡರ್‌ನ 2ನೇ ಪಂದ್ಯದಲ್ಲಿ ಆರ್‌ಸಿಬಿ ಕ್ಯಾಪ್ಟನ್ ರಜತ್ ಪಾಟಿದಾರ್ ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಇದರಿಂದ ತವರಿನಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಮೊದಲ ಬ್ಯಾಟಿಂಗ್ ಮಾಡಿತು. ಡೆಲ್ಲಿ ಪರವಾಗಿ ಓಪನರ್ ಆಗಿ ಕ್ರೀಸ್‌ಗೆ ಆಗಮಿಸಿದ ಫಾಫ್ ಡುಪ್ಲೆಸ್ಸಿಸ್ 22 ಹಾಗೂ ಅಭಿಷೇಕ್ ಪೊರೆಲ್ 28 ರನ್‌ಗೆ ವಿಕೆಟ್ ಒಪ್ಪಿಸಿದರು. ಕನ್ನಡಿಗ ಕರುಣ್ ನಾಯರ್ ಕೇವಲ 4 ರನ್‌ಗೆ ಯಶ್ ದಯಾಳ್ ಬೌಲಿಂಗ್‌ನಲ್ಲಿ ಔಟ್ ಆದರು.

ಡೆಲ್ಲಿ ತಂಡದ ಸ್ಟಾರ್ ಕೆ.ಎಲ್ ರಾಹುಲ್ ಕೆಲ ಹೊತ್ತು ಬೌಲರ್‌ಗಳನ್ನ ಕಾಡಿದರು. 39 ಬಾಲ್‌ಗಳನ್ನು ಎದುರಿಸಿದ್ದ ಕೆ.ಎಲ್ ರಾಹುಲ್ 3 ಬೌಂಡರಿ ಸಮೇತ 41 ರನ್ ಗಳಿಸಿ ಆಡುವಾಗ ಭುವನೇಶ್ವರ್ ಬೌಲಿಂಗ್‌ನಲ್ಲಿ ಕ್ಯಾಚ್‌ಗೆ ಬಲಿಯಾದರು. ಇನ್ನು ನಾಯಕ ಅಕ್ಷರ್ ಪಟೇಲ್ 15, ಅಶುತೋಷ್ ಶರ್ಮಾ 2, ವಿಪ್ರಜ್ ನಿಗಮ್ 12 ರನ್ ಗಳಿಂದ ಡೆಲ್ಲಿ ಕ್ಯಾಪಿಟಲ್ಸ್ 20 ಓವರ್‌ಗಳಲ್ಲಿ 8 ವಿಕೆಟ್‌ಗೆ 163 ರನ್‌ಗಳ ಗುರಿ ನೀಡಿತ್ತು. ಈ ಗುರಿ ಹಿಂದೆ ಬಿದ್ದಿದ್ದ ಆರ್‌ಸಿಬಿ ಆರಂಭದಲ್ಲೇ ದೊಡ್ಡ ಆಘಾತಕ್ಕೆ ಒಳಗಾಗಿತ್ತು. ಏಕೆಂದರೆ ವಿರಾಟ್ ಕೊಹ್ಲಿ ಜೊತೆ ಆರಂಭಿಕರಾಗಿ ಕ್ರೀಸ್‌ಗೆ ಆಗಮಿಸಿದ್ದ ಜಾಕೋಬ್ ಬೆಥೆಲ್ ಕೇವಲ 12 ರನ್‌ಗೆ ವಿಕೆಟ್ ಕಳೆದುಕೊಂಡರು.

ಇವರ ನಂತರ ಬಂದ ದೇವದತ್ ಪಡಿಕ್ಕಲ್ ಡಕೌಟ್ ಆಗಿ ಹೊರನಡೆದ್ರೆ., ಇವರ ಬೆನ್ನ ಹಿಂದೆಯೇ ನಾಯಕ ರಜತ್ ಪಾಟಿದಾರ್ ಕೂಡ 6 ರನ್‌ಗೆ ರನೌಟ್ ಆದರು. ಈ ಮೂರು

**ಕೃನಾಲ್ ಬಿರುಸಿನ ಬ್ಯಾಟಿಂಗ್**



ವಿಕೆಟ್‌ಗಳು ಬ್ಯಾಕ್ ಟು ಬ್ಯಾಕ್ ಹೋಗಿದ್ದರಿಂದ ಆರ್‌ಸಿಬಿ ಸಂಕಷ್ಟದಲ್ಲಿ ಸಿಲುಕಿತ್ತು. ಆದರೆ ಈ ವೇಳೆ ಬೆಂಗಳೂರು ತಂಡಕ್ಕೆ ಆಸರೆಯಾಗಿದ್ದು ವಿರಾಟ್ ಕೊಹ್ಲಿ ಹಾಗೂ ಕೃನಾಲ್ ಪಾಂಡ್ಯ ಬ್ಯಾಟಿಂಗ್. ಪಂದ್ಯದಲ್ಲಿ ಬಿರುಸಿನ ಬ್ಯಾಟಿಂಗ್ ಪ್ರದರ್ಶನ ಮಾಡಿದ ಕೃನಾಲ್ ಪಾಂಡ್ಯ, ಡೆಲ್ಲಿ ಬೌಲರ್ ಗಳಿಗೆ ಮನ ಬಂದಂತೆ ಚಚ್ಚಿದರು. ಇದರಿಂದ ಕೇವಲ 38 ಎಸೆತಗಳಲ್ಲಿ 2 ಬೌಂಡರಿ ಹಾಗೂ 4 ಮುಗಿಲೆತ್ತರದ ಸಿಕ್ಸರ್‌ಗಳಿಂದ ಹಾಫ್ ಸೆಂಚುರಿ ಪೂರ್ಣಗೊಳಿಸಿದರು. ತಂಡದಲ್ಲಿ ಬ್ಯಾಕ್ ಟು ಬ್ಯಾಕ್ ವಿಕೆಟ್‌ಗಳು ಉರುಳಿದ್ದರಿಂದ ತಾಳ್ಮೆಯ ಬ್ಯಾಟಿಂಗ್ ಮಾಡಿದ ಕಿಂಗ್ ಕೊಹ್ಲಿ ಮತ್ತೊಂದು ಅರ್ಧಶತಕ ಸಿಡಿಸಿದರು. 45 ಬಾಲ್‌ಗಳನ್ನು ಎದುರಿಸಿದ ಕೊಹ್ಲಿ ಸಿಕ್ಸರ್ ಬಾರಿಸದೇ 4 ಬೌಂಡರಿಗಳಿಂದ 50 ರನ್ ಗಳನ್ನು ಬಾರಿಸಿದರು. ಕೊನೆಯಲ್ಲಿ ಆರ್‌ಸಿಬಿ ಗೆಲುವಿನ ಸನಿಹದಲ್ಲಿದ್ದಾಗ ಕೊಹ್ಲಿ, ಮಿಚೆಲ್ ಸ್ಟಾರ್ಕ್‌ಗೆ ಕ್ಯಾಚ್ ಕೊಟ್ಟರು. ಆದರೆ ಇನ್ನೊಂದೆಡೆ ಸಿಡಿಲಬ್ಬರದ ಬ್ಯಾಟಿಂಗ್ ಮುಂದುವರೆಸಿದ್ದ ಕೃನಾಲ್ ಪಾಂಡ್ಯ ಡೆಲ್ಲಿ ಬೌಲರ್‌ಗಳಿಗೆ ಬೆವರಿಳಿಸಿದರು.

# ಲಖನೌ ಎದುರು ಮುಂಬೆಗೆ 54 ಜಯ



**ರಿಕೆಲ್ಸನ್, ಸೂರ್ಯ ಅರ್ಧಶತಕ**

**ಇದಕ್ಕೂ ಮೊದಲು, ಟಾಸ್ ಸೋತರೂ ಬ್ಯಾಟಿಂಗ್ ಮಾಡುವ ಅವಕಾಶ ಪಡೆದ ಮುಂಬೈಗೆ ಆರಂಭಿಕ ಬ್ಯಾಟರ್ ರಿಕೆಲ್ಸನ್ ಬಿರುಸಿನ ಆರಂಭ ನೀಡಿದರು. ಕಳೆದೆರಡು ಪಂದ್ಯಗಳಲ್ಲಿ ಅರ್ಧಶತಕ ಬಾರಿಸಿದ್ದ ತಮ್ಮ ಜೊತೆಗಾರ ರೋಹಿತ್ ಶರ್ಮಾ (12 ರನ್) ಬೇಗನೆ ವಿಕೆಟ್ ಒಪ್ಪಿಸಿದರೂ, ರನ್ ವೇಗ ತಗ್ಗಿಸದ ಅವರು, ಕೇವಲ 32 ಎಸೆತಗಳಲ್ಲಿ 4 ಸಿಕ್ಸರ್ ಹಾಗೂ 6 ಬೌಂಡರಿ ಸಹಿತ 58 ರನ್ ಬಾರಿಸಿದರು.**

ಸಂಘಟಿತ ಪ್ರದರ್ಶನ ನೀಡಿದ ಮುಂಬೈ ಇಂಡಿಯನ್ಸ್ ತಂಡವು ಲಖನೌ ಸೂಪರ್ ಜೈಂಟ್ಸ್ ವಿರುದ್ಧ ನಡೆದ ಪಂದ್ಯದಲ್ಲಿ 54 ರನ್ ಅಂತರದ ಜಯ ಸಾಧಿಸಿತು. ಇಲ್ಲಿನ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಮುಂಬೈ, ನಿಗದಿತ 20 ಓವ ಗಳಲ್ಲಿ 7 ವಿಕೆಟ್‌ಗೆ 215 ರನ್ ಕಲೆಹಾಕಿತು. ಈ ಗುರಿ ಬೆನ್ನತ್ತಿದ ಲಖನೌ, 161 ರನ್ ಗಳಿಸಿ ಆಲೌಟ್ ಆಯಿತು.

ಬೃಹತ್ ಗುರಿ ಬೆನ್ನತ್ತಿದ ಲಖನ್ ತಂಡ, 15 ಓವರ್‌ಗಳ ಅಂತ್ಯಕ್ಕೆ 5 ವಿಕೆಟ್ ಕಳೆದುಕೊಂಡು 140 ರನ್ ಗಳಿಸಿತ್ತು. ಐದು ಓವರ್‌ಗಳಲ್ಲಿ ಗೆಲ್ಲಲು 76 ರನ್ ಬೇಕಿತ್ತು. ಬಿರುಸಿನ ಹೊಡೆತಕ್ಕೆ ಹೆಸರಾದ ಡೇವಿಡ್ ಮಿಲ್ಲರ್ ಮತ್ತು ಅಬ್ದುಲ್ ಸಮದ್ ಕ್ರೀಸ್‌ನಲ್ಲಿದ್ದರು. ಆದರೆ, 16ನೇ ಓವರ್ ಎಸೆದ ವಿಶ್ವಶ್ರೇಷ್ಠ ವೇಗಿ ಜಸ್‌ಪ್ರೀತ್ ಬೂಮ್ರಾ, ಪಂದ್ಯಕ್ಕೆ ತಿರುವು ನೀಡಿದರು.

ಮಿಲ್ಲರ್ (24 ರನ್), ಸಮದ್ (2 ರನ್) ಹಾಗೂ ಆವೇಶ್ ಖಾನ್ (0) ಅವರ ವಿಕೆಟ್‌ಗಳನ್ನು ಕಬಳಿಸಿ, ಮುಂಬೈ ತಂಡಕ್ಕೆ ಸತತ ಐದನೇ ಗೆಲುವನ್ನು ಖಾತ್ರಿ ಪಡಿಸಿದರು. ಇದರೊಂದಿಗೆ, ಲಖನೌ ತಂಡದ ಜಯದ ಆಸೆ ಕಮರಿತು.


ಈ ತಂಡದ ಕೊನೆಯ ಆರು ವಿಕೆಟ್‌ಗಳು ಕೇವಲ 26 ರನ್ ಅಂತರದಲ್ಲಿ ಪತನಗೊಂಡವು. ಇನಿಂಗ್ಸ್‌ನ ಕೊನೇ ಎಸೆತದಲ್ಲಿ ಆಲೌಟ್ ಆದ ಲಖನೌ, ಟೂರ್ನಿಯಲ್ಲಿ ಐದನೇ ಸೋಲೊಪ್ಪಿಕೊಂಡಿತು. ಮುಂಬೈ ಪರ ಪರಿಣಾಮಕಾರಿ ದಾಳಿ ಸಂಘಟಿಸಿದ ಬೂಮ್ರಾ, ನಾಲ್ಕು ಓವರ್‌ಗಳಲ್ಲಿ ಕೇವಲ 22 ರನ್ ನೀಡಿ ಪ್ರಮುಖ 4 ವಿಕೆಟ್‌ಗಳನ್ನು ಕಬಳಿಸಿದರು. ಅವರಿಗೆ ಉತ್ತಮ ಸಹಕಾರ ನೀಡಿದ ಟ್ರೆಂಟ್ ಬೌಲ್ಟ್ ಮೂರು ವಿಕೆಟ್ ಉರುಳಿಸಿದರೆ, ವಿಲ್ ಜಾಕ್ಸ್ ಎರಡು ವಿಕೆಟ್ ಪಡೆದರು.ಇನ್ನೊಂದು ವಿಕೆಟ್ ಕಾರ್ಬಿನ್ ಬಾಷ್ ಪಾಲಾಯಿತು.

# ರಿಕಿ ಪಾಂಟಿಂಗ್ ಭಾರತೀಯ ಆಟಗಾರರನ್ನು ನಿರ್ಲಕ್ಷಿಸುತ್ತಿದ್ದಾರೆ..!

ಪಂಜಾಬ್ ಕಿಂಗ್ಸ್ ತಂಡದ ಮುಖ್ಯ ಕೋಚ್ ರಿಕಿ ಪಾಂಟಿಂಗ್ ಭಾರತೀಯ ಆಟಗಾರರನ್ನು ನಿರ್ಲಕ್ಷಿಸುತ್ತಿದ್ದಾರೆ. ಇಂತಹದೊಂದು ಗಂಭೀರ ಆರೋಪ ಮಾಡಿರುವುದು ಟೀಮ್ ಇಂಡಿಯಾದ ಮಾಜಿ ಆಟಗಾರ ಮನೋಜ್ ತಿವಾರಿ. ಕೊಲ್ಕತ್ತಾದ ಈಡನ್ ಗಾರ್ಡನ್ಸ್ ಮೈದಾನದಲ್ಲಿ ನಡೆದ ಕೆಕೆಆರ್ ವಿರುದ್ಧದ ಪಂದ್ಯದ ವೇಳೆ ಇನ್ ಫಾರ್ಮ್ ಆಟಗಾರರನ್ನು ನಿರ್ಲಕ್ಷಿಸಿ ಪಾಂಟಿಂಗ್ ವಿದೇಶಿ ಆಟಗಾರರನ್ನು ಬ್ಯಾಟಿಂಗ್‌ಗೆ ಕಳುಹಿಸಿದ್ದರು. ಈ ಕಾರ್ಯತಂತ್ರಗಳ ಬಗ್ಗೆ ಮನೋಜ್ ತಿವಾರಿ ಪ್ರಶ್ನೆಗಳನ್ನು ಎತ್ತಿದ್ದಾರೆ.

**ಮನೋಜ್ ತಿವಾರಿ ಹೇಳಿದ್ದೇನು**

ಈ ಸೀಸನ್‌ನಲ್ಲಿ ಪಂಜಾಬ್ ಕಿಂಗ್ಸ್ ತಂಡವು ಟ್ರೋಫಿ ಎತ್ತಿ ಹಿಡಿಯುವ ಸಾಧ್ಯತೆಯಿಲ್ಲ. ಏಕೆಂದರೆ ಅವರ ಕಾರ್ಯತಂತ್ರವೇ ಆಗಿದೆ. ಕೊಲ್ಕತ್ತಾ ನೈಟ್ ರೈಡರ್ಸ್ ವಿರುದ್ಧದ



ಪಂದ್ಯದ ವೇಳೆ ಇನ್ ಫಾರ್ಮ್‌ನಲ್ಲಿರುವ ಆಟಗಾರರ ಬದಲು, ಕಳಪೆ ಫಾರ್ಮ್‌ನಲ್ಲಿರುವ ಬ್ಯಾಟರ್‌ಗಳನ್ನು ಕಣಕ್ಕಿಳಿಸಿದ್ದಾರೆ.

ಇನ್-ಫಾರ್ಮ್ ಬ್ಯಾಟ್ಸ್‌ಮನ್‌ಗಳಾದ ನೆಹಾಲ್ ವಧೇರಾ ಮತ್ತು ಶಶಾಂಕ್ ಸಿಂಗ್ ಅವರನ್ನು ಬ್ಯಾಟಿಂಗ್‌ಗೆ ಕಳುಹಿಸಲೇ ಇಲ್ಲ. ಬದಲಾಗಿ ತಮ್ಮ ವಿದೇಶಿ ಆಟಗಾರರ ಮೇಲೆ ನಂಬಿಕೆ ಇಟ್ಟಿದ್ದರು. ಇದರಿಂದ ಅವರು ಭಾರತೀಯ ಆಟಗಾರರನ್ನು ನಂಬುವುದಿಲ್ಲ ಎಂಬುದು ಸ್ಪಷ್ಟವಾಗಿದೆ. ಅವರು ಹೀಗೆಯೇ ಮುಂದುವರೆದರೆ, ಪಂಜಾಬ್ ಕಿಂಗ್ಸ್ ಟಾಪ್-2 ನಲ್ಲಿ ಕಾಣಿಸಿಕೊಂಡರೂ ಅವರು ಪ್ರಶಸ್ತಿಯನ್ನು ಗೆಲ್ಲಲು ಸಾಧ್ಯವಾಗುವುದಿಲ್ಲ ಎಂದು ಮನೋಜ್ ತಿವಾರಿ ಹೇಳಿದ್ದಾರೆ.

**ಪಾಂಟಿಂಗ್ ಕಾರ್ಯತಂತ್ರ ಪ್ರಶ್ನಿಸಿದ ತಿವಾರಿ**

**ಮ್ಯಾಕ್ಸ್‌ವೆಲ್‌ಗೆ ಮತ್ತೆ ಮತ್ತೆ ಅವಕಾಶ:** ರಿಕಿ ಪಾಂಟಿಂಗ್ ಅವರ ಕಾರ್ಯತಂತ್ರವನ್ನು ಪ್ರಶ್ನಿಸಿರುವ ಮನೋಜ್ ತಿವಾರಿ, ಗ್ಲೆನ್ ಮ್ಯಾಕ್ಸ್‌ವೆಲ್‌ಗೆ ಸತತ ಅವಕಾಶ ನೀಡುತ್ತಿರುವುದಕ್ಕೆ ಅಚ್ಚರಿ ವ್ಯಕ್ತಪಡಿಸಿದ್ದಾರೆ. ಮ್ಯಾಕ್ಸ್‌ವೆಲ್ ನಿರಂತರ ವೈಫಲ್ಯ ಅನುಭವಿಸುತ್ತಿದ್ದರೂ ಅವರಿಗೆ ಚಾನ್ಸ್ ನೀಡಲಾಗುತ್ತಿದೆ. ಇದೇ ವೇಳೆ ಭಾರತೀಯ ಆಟಗಾರರನ್ನು ನಿರ್ಲಕ್ಷಿಸುತ್ತಿದ್ದಾರೆ. ಪಾಂಟಿಂಗ್ ತನಗೆ ಬೇಕಾದ ಆಟಗಾರರೊಂದಿಗೆ ಕಾರ್ಯ ತಂತ್ರ ರೂಪಿಸಿದರೆ, ಅದಕ್ಕೆ ಪಂಜಾಬ್ ಕಿಂಗ್ಸ್ ತಂಡವು ಬೆಲೆ ತೆರಲಿದೆ. ಇದರಿಂದ ಟ್ರೋಫಿ ಗೆಲ್ಲುವ ಅವಕಾಶವೇ ಕೈ ತಪ್ಪುವ ಸಾಧ್ಯತೆಯಿದೆ ಮನೋಜ್ ತಿವಾರಿ ಎಚ್ಚರಿಸಿದ್ದಾರೆ. ಇನ್ನು ಕೆಕೆಆರ್ ವಿರುದ್ಧದ ಈ ಪಂದ್ಯದಲ್ಲಿ ಗ್ಲೆನ್ ಮ್ಯಾಕ್ಸ್‌ವೆಲ್ 8 ಎಸೆತಗಳಲ್ಲಿ ಕೇವಲ 7 ರನ್ ಗಳಿಸಲಷ್ಟೇ ಶಕ್ತರಾಗಿದ್ದರು. ಹಾಗೆಯೇ ಆ ಬಳಿಕ ಮಾರ್ಕೊ ಯಾನ್ಸೆನ್ ಅವರನ್ನು ಕಣಕ್ಕಿಳಿಸಲಾಗಿತ್ತು. ಇದಾದ ಬಳಿಕ ಬ್ಯಾಟ್ ಬೀಸಿದ್ದ ಜೋಶ್ ಇಂಗ್ಲಿಸ್. ಇದಾಗ್ಯೂ ಉತ್ತಮ ಫಾರ್ಮ್‌ನಲ್ಲಿರುವ ನೆಹಾಲ್ ವಧೇರಾ ಹಾಗೂ ಶಶಾಂಕ್ ಸಿಂಗ್ ಅವರಿಗೆ ಬ್ಯಾಟಿಂಗ್ ಮಾಡಲು ಅವಕಾಶ ನೀಡಿರಲಿಲ್ಲ.



# ಸಿದ್ಧಾರ್ಥ್ ಮಲ್ಹೋತ್ರಾಗೆ ಶ್ರೀಲೀಲಾ ಜೋಡಿ

ಕನ್ನಡದ ನಟಿ ಶ್ರೀಲೀಲಾಗೆ ಟಾಲಿವುಡ್ ಬಳಿಕ ಬಾಲಿವುಡ್‌ನಲ್ಲೂ ಬೇಡಿಕೆ ಹೆಚ್ಚಾಗಿದೆ. ಕಾರ್ತಿಕ್ ಆರ್ಯನ್ ಸಿನಿಮಾಗೆ ನಾಯಕಿಯಾದ ಬಳಿಕ ಮತ್ತೊಂದು ಬಂಪರ್ ಆಫರ್‌ವೊಂದು ಗಿಟ್ಟಿಸಿಕೊಂಡಿದ್ದಾರೆ. ಲವರ್ ಬಾಯ್ ಸಿದ್ಧಾರ್ಥ್‌ಗೆ ನಾಯಕಿಯಾಗಿ ನಟಿಸಲು ಶ್ರೀಲೀಲಾಗೆ ಆಫರ್ ಸಿಕ್ಕಿದೆ ಎನ್ನಲಾದ ಸುದ್ದಿಯೊಂದು ಇದೀಗ ಹರಿದಾಡುತ್ತಿದೆ. ಈ ಹಿಂದೆ 'ಡ್ರೀಮ್ ಗರ್ಲ್' ಎಂಬ ಸಿನಿಮಾ ನಿರ್ದೇಶನದ ಮಾಡಿದ್ದ ರಾಜ್ ಶಾಂಡಿಲ್ಯ ಅವರು ಸಿದ್ಧಾರ್ಥ್ ಮಲ್ಹೋತ್ರಾಗೆ ಆಕ್ಷನ್ ಕಟ್ ಹೇಳಲು ಮುಂದಾಗಿದ್ದಾರೆ. ಈ ಚಿತ್ರದಲ್ಲಿ ಇಬ್ಬರೂ ನಾಯಕಿಯರ ಜೊತೆ ಸಿದ್ಧಾರ್ಥ್ ರೊಮ್ಯಾನ್ಸ್ ಮಾಡಲಿದ್ದಾರೆ. ಹೀಗಾಗಿ ಕನ್ನಡದ ನಟಿ ಶ್ರೀಲೀಲಾ, 'ಲೈಗರ್' ನಟಿ ಅನನ್ಯಾ ಪಾಂಡೆ ಜೊತೆ ಈಗಾಗಲೇ ಮಾತುಕತೆ ನಡೆಸಿದ್ದಾರೆ ಎನ್ನಲಾಗಿದೆ. ಹಾಗಾದ್ರೆ ಸಿನಿಮಾದಲ್ಲಿ ಅವರು ನಟಿಸ್ತಾರಾ ಎಂಬುದನ್ನು ಚಿತ್ರತಂಡವೇ ತಿಳಿಸಬೇಕಿದೆ. ಅಂದಹಾಗೆ, 'ಪುಷ್ಪ 2' ಕಿಸ್ಸಕ್ ಹಾಡಿಗೆ ಸೊಂಟ ಬಳುಕಿಸಿದ ಮೇಲೆ ಶ್ರೀಲೀಲಾ ಮೇಲಿನ ಪಡ್ಡೆಹುಡುಗರ ಕ್ರೇಜ್ ಹೆಚ್ಚಾಗಿದೆ. ಹೀಗಾಗಿ ತೆಲುಗು, ಹಿಂದಿ, ತಮಿಳಿನಿಂದಲೂ ಪ್ರಮುಖ ಪಾತ್ರಕ್ಕಾಗಿ ನಟಿಗೆ ಅವಕಾಶಗಳು ಅರಸಿ ಬರುತ್ತಿವೆ.

ಶಿವಕಾರ್ತಿಕೇಯನ್ ಜೊತೆ ತಮಿಳು ಸಿನಿಮಾ, ಇಬ್ರಾಹಿಂ ಅಲಿ ಖಾನ್ ಜೊತೆ ಚಿತ್ರ, ಪವನ್ ಕಲ್ಯಾಣ್ ಜೊತೆ ತೆಲುಗು ಸಿನಿಮಾ, ಮಾಸ್ ಜಾತ್ರಾ, ಕಾರ್ತಿಕ್ ಆರ್ಯನ್ ಜೊತೆಗಿನ 'ಆಶಿಕಿ 3' ಚಿತ್ರದ ಸೇರಿದಂತೆ ಹಲವು ಪ್ರಾಜೆಕ್ಟ್‌ಗಳು ನಟಿಯ ಕೈಯಲ್ಲಿವೆ.

**ಕಿಸ್ ನಟಿಗೆ ಅದೃಷ್ಟ**

# ನಾವಿಬ್ಬರೂ ಮೂವರಾಗಿ ಇಂದಿಗೆ 3 ತಿಂಗಳು




ಸ್ಯಾಂಡಲ್‌ವುಡ್ ನಟಿ ಹರಿಪ್ರಿಯಾ ಮತ್ತು ವಸಿಷ್ಠ ಸಿಂಹ ದಂಪತಿ ಫ್ಯಾನ್ಸ್‌ಗೆ ಗುಡ್ ನ್ಯೂಸ್ ಕೊಟ್ಟಿದ್ದಾರೆ. ಮಗು ಜನಿಸಿ 3 ತಿಂಗಳು ತುಂಬಿದ ಖುಷಿಯಲ್ಲಿ ಮಗನ ಫೋಟೋವನ್ನು ವಸಿಷ್ಠ ಜೋಡಿ ರಿವೀಲ್ ಮಾಡಿದ್ದಾರೆ. ಜ.26ರಂದು ಹರಿಪ್ರಿಯಾ ಮುದ್ದಾದ ಗಂಡು ಮಗನಿಗೆ ಜನ್ಮ ನೀಡಿದರು. ಹೀಗಾಗಿ ಸಿನಿಮಾಗೆ ಬ್ರೇಕ್ ಕೊಟ್ಟು ಮಗನ ಆರೈಕೆಯಲ್ಲಿ ನಟಿ ಬ್ಯುಸಿಯಾಗಿದ್ದಾರೆ. ಮಗನಿಗೆ 3 ತಿಂಗಳು ತುಂಬಿದ ಖುಷಿಯಲ್ಲಿ ಫೋಟೋವನ್ನು ಮೊದಲ ಬಾರಿಗೆ ಹರಿಪ್ರಿಯಾ ದಂಪತಿ ರಿವೀಲ್ ಮಾಡಿದ್ದಾರೆ. ಮಗನೊಂದಿಗಿನ ಬ್ಲ್ಯಾಕ್ ವೈಟ್ ಫೋಟೋ ಶೇರ್ ಮಾಡಿ, ನಾವಿಬ್ಬರೂ ಮೂವರಾಗಿ ಇಂದಿಗೆ 3 ತಿಂಗಳು ಎಂದು ಹರಿಪ್ರಿಯಾ ಮತ್ತು ವಸಿಷ್ಠ ಸಿಂಹ ಜೋಡಿ ಇನ್ಸ್ಟಾಗ್ರಾಂ ಪೋಸ್ಟ್‌ನಲ್ಲಿ ಬರೆದುಕೊಂಡಿದ್ದಾರೆ. ಈ ಫೋಟೋ ನೋಡಿ ಫ್ಯಾನ್ಸ್ ಖುಷಿಪಟ್ಟಿದ್ದಾರೆ. 2023ರ ಜನವರಿ 26ರಂದು ವಸಿಷ್ಠ ಮತ್ತು ಹರಿಪ್ರಿಯಾ ಮೈಸೂರಿನಲ್ಲಿ ಮದುವೆಯಾದರು. ಇದೇ ದಿನಾಂಕ ಈ ವರ್ಷ ಜ.26ರಂದು ಗಂಡು ಮಗುವಿಗೆ ನಟಿ ಜನ್ಮ ನೀಡಿದರು.

**ಮಗನ ಆರೈಕೆಯಲ್ಲಿ ನಟಿ ಬ್ಯುಸಿ**



# ಉಗ್ರರನ್ನು ಹುಡ್ಕೊಂಡು ಹೋಗಿ ಹೊಡೆಯಬೇಕು



ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿ ಬಗ್ಗೆ ನಟ ಶ್ರೀಮುರಳಿ ಕೆಂಡಕಾರಿದ್ದಾರೆ. ಅಮಾಯಕರ ಜೀವ ತೆಗೆದ ಉಗ್ರರನ್ನು ಹುಡ್ಕೊಂಡು ಹೋಗಿ ಹೊಡೆಯಬೇಕು ಎಂದು ನಟ ಪ್ರತಿಕ್ರಿಯೆ ನೀಡಿದ್ದಾರೆ. ಪಹಲ್ಗಾಮ್ ದಾಳಿಯಲ್ಲಿ ಜೀವ ಕಳೆದುಕೊಂಡವರ ಬಗ್ಗೆ ನೋವಾಗ್ತಿದೆ. ಇದನ್ನೆಲ್ಲಾ ಯಾರು ಮಾಡಿದ್ದಾರೋ ಅವರನ್ನು ಹುಡ್ಕೊಂಡು ಹೋಗಿ ಹೊಡೆಯಬೇಕು. ಅಲ್ಲಿ ಸಮಾಧಾನವಿಲ್ಲ. ಈ ಬಗ್ಗೆ ಸರ್ಕಾರ ಕೆಲಸ ಮಾಡುತ್ತಿದೆ. ಒಬ್ಬ ನಾಗರೀಕನಾಗಿ ಹೇಳಬೇಕು ಅಂದರೆ ಉಗ್ರರ ದಾಳಿ ವಿಷ್ಯ ಕೇಳಿ ಮೈಯಲ್ಲಿ ರಕ್ತ ಕುದಿಯುತ್ತಿದೆ. ಅವರ ಸಂಹಾರ ಆಗೋವರೆಗೂ ನಮಗೆ ನೆಮ್ಮದಿಯಿಲ್ಲ. ಅಮಯರ ಜೀವ ತೆಗೆದಿದ್ದಾರೆ. ಅದಕ್ಕೆ ಉಗ್ರರ ಅಂತ್ಯ ಆಗಲೇಬೇಕು ಎಂದು ಶ್ರೀಮುರಳಿ ಮಾತನಾಡಿದ್ದಾರೆ. ಏ.22ರಂದು ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿಯಲ್ಲಿ 26 ಮಂದಿ ಬಲಿಯಾಗಿದ್ದಾರೆ. ಇನ್ನೂ ಹಲವರು ಗಾಯಗೊಂಡಿದ್ದಾರೆ.

# ಹೊಸ ಸಿನಿಮಾ ನಾಗಚೈತನ್ಯ



ತೆಲುಗು ನಟ ನಾಗಚೈತನ್ಯ 'ತಾಂಡೇಲ್' ಸಕ್ಸಸ್ ಬಳಿಕ ಹೊಸ ಸಿನಿಮಾವೊಂದಕ್ಕೆ ಗ್ರೀನ್ ಸಿಗ್ನಲ್ ಕೊಟ್ಟಿದ್ದಾರೆ. 'ವಿರೂಪಾಕ್ಷ' ಡೈರೆಕ್ಟರ್ ಕಾರ್ತಿಕ್ ದಂಡು ಜೊತೆ ಅವರು ಕೈಜೋಡಿಸಿದ್ದಾರೆ. ಸಾಯಿ ಪಲ್ಲವಿ ಜೊತೆಗಿನ 'ತಾಂಡೇಲ್' ಚಿತ್ರದ ಯಶಸ್ಸಿನ ಬಳಿಕ ವಿಭಿನ್ನ ಕಥೆಯೊಂದಕ್ಕೆ ಓಕೆ ಎಂದಿದ್ದಾರೆ. ಯಶಸ್ಸಿಗಾಗಿ ಹೊಸ ಹೆಜ್ಜೆ ಇಟ್ಟಿದ್ದಾರೆ. ಈ ಬಾರಿ ಥ್ರಿಲ್ಲರ್ ಕಥೆ ಹೇಳೋಕೆ ನಾಗಚೈತನ್ಯ ಸಜ್ಜಾಗಿದ್ದಾರೆ. ಹೊಸ ಚಿತ್ರದ ತಯಾರಿ ತುಣುಕೊಂದನ್ನು ಸೋಷಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದಾರೆ. ಈ ಮೂಲಕ ಹೊಸ ಚಿತ್ರದ ಅನೌನ್ಸ ಮಾಡಿದ್ದಾರೆ. 'ಪುಷ್ಪ 2' ಖ್ಯಾತಿಯ ಡೈರೆಕ್ಟರ್ ಸುಕುಮಾರ್ ಮತ್ತು ಬಿವಿಎಸ್‌ಎನ್ ಪ್ರಸಾದ್ ಬರೆದ ಕಥೆಗೆ ಕಾರ್ತಿಕ್ ದಂಡು ನಿರ್ದೇಶನ ಮಾಡಲಿದ್ದಾರೆ. ಪೌರಾಣಿಕ ಥ್ರಿಲ್ಲರ್ ಅಂಶದಲ್ಲಿ ಈ ಸಿನಿಮಾ ಮೂಡಿ ಬರಲಿದೆ. ಈ ಮುಂದಿನ ವರ್ಷ ಈ ಸಿನಿಮಾ ರಿಲೀಸ್‌ಗೆ ಚಿತ್ರತಂಡ ಪ್ಲ್ಯಾನ್ ಮಾಡಿದೆ. 2009ರಲ್ಲಿ ತೆಲುಗಿನ 'ಜೋಶ್' ಸಿನಿಮಾ ಮೂಲಕ ನಾಯಕನಾಗಿ ನಾಗಚೈತನ್ಯ ಚಿತ್ರರಂಗಕ್ಕೆ ಎಂಟ್ರಿ ಕೊಟ್ಟರು.

# ಪಹಲ್ಗಾಮ್‌ನಲ್ಲಿ ತುಂಬಾ ಕ್ರೂರವಾಗಿ ಎಂದು ಸಾಯಿಸಿದ್ದಾರೆ ಕೋಪ

**ಉಗ್ರರ ದಾಳಿ ಬಗ್ಗೆ ರಾಗಿಣಿ ಕಿಡಿ**



ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿ ಬಗ್ಗೆ ನಟಿ ರಾಗಿಣಿ ದ್ವಿವೇದಿ ಮೊದಲ ಬಾರಿಗೆ ರಿಯಾಕ್ಟ್ ಮಾಡಿದ್ದಾರೆ. ಕಾಶ್ಮೀರದಲ್ಲಿ ಹೀಗೆ ನಡೆದಿರೋದು ಅತ್ಯಂತ ದುರದೃಷ್ಟಕರ.

ಇದಕ್ಕೆ ಸ್ಟ್ರಾಂಗ್ ಆಗಿ ಆಕ್ಷನ್ ತೆಗೆದುಕೊಳ್ಳಬೇಕು ನಟಿ ಮಾತನಾಡಿದ್ದಾರೆ. ಕಾಶ್ಮೀರದಲ್ಲಿನ ಘಟನೆ ತುಂಬಾ ಬೇಜಾರ್ ಆಗೋ ವಿಷಯ. ತುಂಬಾ ಕ್ರೂರವಾಗಿ ಸಾಯಿಸಿದ್ದಾರೆ. ನೋಡಿದ್ರೆ ತುಂಬಾ ಬರುತ್ತದೆ. ಪ್ರತಿಯೊಂದು ಧರ್ಮವನ್ನು ನಾವು ಸಮನಾಗಿ ನೋಡುತ್ತೇವೆ. ಕಾಶ್ಮೀರದಲ್ಲಿ ಹೀಗೆ ನಡೆದಿರೋದು ಅತ್ಯಂತ ದುರದೃಷ್ಟಕರ. ಈ ಘಟನೆ ಬಗ್ಗೆ ಸ್ಟ್ರಾಂಗ್ ಆಗಿ ಹೆಜ್ಜೆ ಇಡಬೇಕು ಎಂಬುದು ನನ್ನ ಅಭಿಪ್ರಾಯ. ಮತ್ತೆ ಹೀಗೆ ಆಗದೇ ಇರುವಂತೆ ನೋಡಿಕೊಳ್ಳಬೇಕು. ನಮ್ಮ ಜಗತ್ತಿನಲ್ಲಿ ಪ್ರೀತಿ ಮತ್ತು ನೆಮ್ಮದಿ ಬೇಕು ಅಷ್ಟೇ ಮಾತನಾಡಿದ್ದಾರೆ. ಏ.22ರಂದು ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿಯಲ್ಲಿ 26 ಮಂದಿ ಬಲಿಯಾಗಿದ್ದಾರೆ. ಇನ್ನೂ ಹಲವರು ಗಾಯಗೊಂಡಿದ್ದಾರೆ.


**Printed by : A. BALACHANDRA, Printed at : RAJHANS ENTERPRISES** No. 134, 4th Main Road, Industrial Town, Rajajinagar, Bengaluru - 560044, Karnataka. **Owned By, Published By, Editor :T. HOMBE GOWDA,** No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news

**ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966**